ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 20 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 5 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಜಿಲ್ಲೆಯಲ್ಲಿ ದೋಷಯುತ ಮತಯಂತ್ರ ಬದಲಾವಣೆ:

ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ಮತಯಂತ್ರ ವ್ಯವಸ್ಥೆ

ಮೈಸೂರು, ಏ.19(ಎಂಟಿವೈ)– ಲೋಕಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಬಳಸಲು ಉದ್ದೇಶಿಸಿದ್ದ 2,925 ವಿದ್ಯುನ್ಮಾನ ಮತಯಂತ್ರಗಳಲ್ಲಿ ಕೆಲವು ಮತಯಂತ್ರ, ಕಂಟ್ರೋಲ್ ಯುನಿಟ್ ಹಾಗೂ ವಿವಿ ಪ್ಯಾಟ್‌ಗಳಲ್ಲಿ ತಾಂತ್ರಿಕ ದೋಷ ಕಂಡು ಬಂದಿದ್ದು, ಅವುಗಳನ್ನು ಬದಲಿಸಲಾಗಿದೆ.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳು ಮೈಸೂರು–ಕೊಡಗು, ಚಾಮರಾಜನಗರ ಮೀಸಲು ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಹಂಚಿಕೆಯಾಗಿದ್ದರೂ, ಜಿಲ್ಲೆಯಲ್ಲಿರುವ 2915 ಮತಗಟ್ಟೆ ಹಾಗೂ 10 ಆಕ್ಸಿಲರಿ ಮತಗಟ್ಟೆಗಳಿಗೆ ಮಾ.21ರಂದು ಮೈಸೂರು–ಬನ್ನೂರು ಮುಖ್ಯ ರಸ್ತೆಯ ಸಿದ್ಧಾರ್ಥ ನಗರದಲ್ಲಿರುವ ಚುನಾವಣಾ ಆಯೋಗದ ಭದ್ರತಾ ಕೊಠಡಿ(ವೇರ್‌ಹೌಸ್)ಯಲ್ಲಿರುವ ವಿದ್ಯುನ್ಮಾನ ಮತಯಂತ್ರಗಳನ್ನು ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಭದ್ರತಾ ಕೊಠಡಿಗೆ ರವಾನಿಸಲಾಗಿತ್ತು. ಕಳೆದ 4 ದಿನಗಳಿಂದ ಮತಯಂತ್ರಗಳಿಗೆ ಕಣದಲ್ಲಿರುವ ಅಭ್ಯರ್ಥಿಗಳ ಹೆಸರುಳ್ಳ ಮಾಹಿತಿ(ಬ್ಯಾಲೆಟ್) ಭರ್ತಿ ಮಾಡುವ ಕಾರ್ಯ ನಡೆಯುತ್ತಿದೆ. ಈ ಮತಯಂತ್ರಗಳಲ್ಲಿ ಸುಮಾರು 30ರಿಂದ 60ರಲ್ಲಿ



ತಾಂತ್ರಿಕ ದೋಷ ಕಂಡು ಬಂದಿತ್ತು. ಅಧಿಕಾರಿಗಳು ಜಿಲ್ಲಾ ಚುನಾವಣಾಧಿಕಾರಿಗಳೂ ಆದ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರಿಗೆ ಈ ಬಗ್ಗೆ ಮಾಹಿತಿ ನೀಡಿದ್ದರು. ಕೂಡಲೇ ಮೈಸೂರು ಜಿಲ್ಲೆಗೆ ಒಂದು ಸಾವಿರ ಹೊಸ ಮತಯಂತ್ರಗಳನ್ನು ತರಲಾಗಿದ್ದು, ವೇರ್‌ಹೌಸ್‌ನಲ್ಲಿ ಹಿರಿಯ ಅಧಿಕಾರಿಗಳು ಹಾಗೂ ಪ್ರಮುಖ ರಾಜಕೀಯ ಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಇವುಗಳ ಪರಿಶೀಲಿಸಿ, ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಅಗತ್ಯವಿರುವಷ್ಟು ರವಾನಿಸಲಾಗಿದೆ. ರಾಜ್ಯದ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ, ಮೈಸೂರು ಜಿಲ್ಲೆಯ ಹೆಚ್ಚು ಮತಯಂತ್ರಗಳಲ್ಲಿ ತಾಂತ್ರಿಕ ದೋಷ ಕಂಡು ಬಂದಿದೆ ಎಂದು ಮೂಲಗಳು ತಿಳಿಸಿವೆ.

ರವಾನಿಸಲಾದ ಹೊಸ ಯಂತ್ರಗಳು: ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ ಮತದಾನಕ್ಕೆ 2925 ಮತಯಂತ್ರಗಳನ್ನು ಬಳಸಲಾಗುತ್ತದೆ. ಪ್ರತಿ ಕ್ಷೇತ್ರಕ್ಕೆ ತುರ್ತು ಹಾಗೂ ಮುಂಜಾಗ್ರತಾ ಕ್ರಮವಾಗಿ 30ಕ್ಕೂ ಹೆಚ್ಚುವರಿ ಮತಯಂತ್ರಗಳನ್ನು ಕಳುಹಿಸಲಾಗಿತ್ತು.

ಪಿರಿಯಾಪಟ್ಟಣ ಕ್ಷೇತ್ರಕ್ಕೆ 55 ಬ್ಯಾಲೆಟ್ ಯುನಿಟ್ (ಬಿಯು), 62 ಕಂಟ್ರೋಲ್ ಯುನಿಟ್(ಸಿಯು), 17 ವಿವಿಪ್ಯಾಟ್ ನೀಡಲಾಗಿದೆ. ಕೆ.ಆರ್.ನಗರ ಕ್ಷೇತ್ರಕ್ಕೆ 4 ಬಿಯು, 100 ಸಿಯು, 30 ವಿವಿಪ್ಯಾಟ್, ಹುಣಸೂರು ಕ್ಷೇತ್ರಕ್ಕೆ 65 ಬಿಯು, 94 ಸಿಯು, 25 ವಿವಿಪ್ಯಾಟ್, ಹೆಚ್.ಡಿ.ಕೋಟೆ ಕ್ಷೇತ್ರಕ್ಕೆ 4 ಬಿಯು, 95 ಸಿಯು, 27 ವಿವಿಪ್ಯಾಟ್, ನಂಜನಗೂಡು ಕ್ಷೇತ್ರಕ್ಕೆ 1 ಬಿಯು, 57 ಸಿಯು, 14 ವಿವಿಪ್ಯಾಟ್, ಚಾಮುಂಡೇಶ್ವರಿ ಕ್ಷೇತ್ರಕ್ಕೆ 80 ಬಿಯು, 99 ಸಿಯು, 35 ವಿವಿಪ್ಯಾಟ್, ಕೃಷ್ಣರಾಜ ಕ್ಷೇತ್ರಕ್ಕೆ 60 ಬಿಯು,70 ಸಿಯು, 24 ವಿವಿಪ್ಯಾಟ್, ಚಾಮರಾಜ ಕ್ಷೇತ್ರಕ್ಕೆ 82 ಬಿಯು, 66 ಸಿಯು, 26 ವಿವಿಪ್ಯಾಟ್, ನರಸಿಂಹರಾಜ ಕ್ಷೇತ್ರಕ್ಕೆ 72 ಬಿಯು, 90 ಸಿಯು, 31 ವಿವಿಪ್ಯಾಟ್, ವರುಣ ಕ್ಷೇತ್ರಕ್ಕೆ 3 ಬ್ಯಾಲೆಟ್ ಯುನಿಟ್, 83 ಕಂಟ್ರೋಲ್ ಯುನಿಟ್, 35 ವಿವಿಪ್ಯಾಟ್ ಹಾಗೂ ಟಿ.ನರಸೀಪುರ ಕ್ಷೇತ್ರಕ್ಕೆ 1 ಬ್ಯಾಲೆಟ್ ಯುನಿಟ್, 70 ಕಂಟ್ರೋಲ್ ಯುನಿಟ್ ಹಾಗೂ 28 ವಿವಿಪ್ಯಾಟ್ ನೀಡಲಾಗಿದೆ.


ಜಿಲ್ಲೆಯ 11 ಕ್ಷೇತ್ರಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಕಂಟ್ರೋಲ್ ಯುನಿಟ್‌ಗಳಲ್ಲೇ ತಾಂತ್ರಿ ದೋಷ ಕಂಡು ಬಂದಿದೆ. ಎಂಜಿನಿಯರ್‌ಗಳನ್ನು ಕರೆಸಿ ಪರಿಶೀಲನೆ ನಡೆಸಲಾಯಿತಾದರೂ ಕೆಲವು ತಾಂತ್ರಿಕ ದೋಷ ಸರಿಪಡಿಸಲು ಸಾಧ್ಯವಾಗದ ಕಾರಣ ಹೊಸ ಮತಯಂತ್ರಗಳಿಗೆ ಮಣೆ ಹಾಕಲಾಗಿದೆ.

ಒಟ್ಟು 11 ವಿಧಾನಸಭಾ ಕ್ಷೇತ್ರಗಳಿಂದ ಹೊಸದಾಗಿ 427 ಬ್ಯಾಲೆಟ್ ಯುನಿಟ್, 886 ಕಂಟ್ರೋಲ್ ಯುನಿಟ್ ಹಾಗೂ 292 ವಿವಿಪ್ಯಾಟ್‌ಗಳನ್ನು ನೀಡಲಾಗಿದೆ. ಮತದಾನಕ್ಕೆ ಕೇವಲ 7(ಏ.26) ದಿನ ಮಾತ್ರವಿದ್ದು, ಸುಸೂತ್ರವಾಗಿ ಚುನಾವಣೆ ನಡೆಸಲು ಎಲ್ಲಾ ಕ್ಷೇತ್ರಗಳಿಗೂ ಅಗತ್ಯಕ್ಕಿಂತ ಹೆಚ್ಚು ಮತಯಂತ್ರಗಳನ್ನು ರವಾನಿಸಲಾಗಿದ್ದು, ಶುಕ್ರವಾರ ಎಲ್ಲಾ ಹೊಸ ಮತಯಂತ್ರಗಳಿಗೂ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಹೆಸರು, ಕ್ರಮಸಂಖ್ಯೆ, ಚಿಹ್ನೆ ಸೇರಿದಂತೆ ಅಗತ್ಯ ಮಾಹಿತಿ ಭರ್ತಿ ಮಾಡಿ, ಭದ್ರತಾ ಕೊಠಡಿಯಲ್ಲಿ ಸುರಕ್ಷಿತವಾಗಿಡಲಾಗಿದೆ. ಏ.25ರಂದು ಮಸ್ಟರಿಂಗ್ ಕೇಂದ್ರದಿಂದ ಎಲ್ಲಾ ಮತಗಟ್ಟೆಗಳಿಗೂ ಮತದಾನ ಅಧಿಕಾರಿಗಳೊಂದಿಗೆ ರವಾನಿಸಲಾಗುತ್ತದೆ.



ವಿಶೇಷಚೇತನರಾದ ಎಂ. ಸ್ಫಟಿಕಾ ಅವರು ಲಾಂಗ್ ಟೆನ್ನಿಸ್ 2024ರ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ, ತೃತೀಯ ಬಹುಮಾನ ಗಳಿಸಿದ್ದಾರೆ. ಅವರನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಪೋಷಕರಾದ ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಎಸ್.ಕೆ. ವೈಶಾಲಿ ಉಪಸ್ಥಿತರಿದ್ದರು.

ಸಿಎಸ್‌ಕೆ ಮಣಿಸಿ ಗೆಲುವಿನ ಹಳಿಗೆ ಮರಳಿದ ಲಕ್ನೋ



ಲಕ್ನೋ, ಏ.19– ನಾಯಕ ಕೆ.ಎಲ್. ರಾಹುಲ್ ಹಾಗೂ ಕ್ವಿಂಟನ್ ಡಿಕಾಕ್ ಅವರ ಭರ್ಜರಿ ಅರ್ಧಶತಕಗಳ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್ ಚೆನ್ನೈ ಸೂಪರ್ ಕಿಂಗ್ಸ್ ಎದುರು 8 ವಿಕೆಟ್‌ಗಳ ಅಮೋಘ ಜಯ ಸಾಧಿಸಿದೆ ಆ ಮೂಲಕ ಲಕ್ನೋ ಗೆಲುವಿನ ಹಳಿಗೆ ಮರಳಿದೆ.

ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ನೀಡಿದ 177 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಕ್ನೋಗೆ ನಾಯಕ ಕೆ.ಎಲ್.ರಾಹುಲ್ ಹಾಗೂ ಕ್ವಿಂಟನ್ ಡಿಕಾಕ್ ಮೊದಲ ವಿಕೆಟ್‌ಗೆ 134 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಡಿಕಾಕ್ 54 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ರಾಹುಲ್ 53 ಎಸೆತಗಳಲ್ಲಿ 9 ಬೌಂಡರಿ, 3 ಸಿಕ್ಸರ್ ಒಳಗೊಂಡ 82 ರನ್ ಬಾರಿಸಿ ಔಟಾಗುವ ಮೂಲಕ ಪೆವಿಲಿಯನ್ ಹಾದಿ ಹಿಡಿದರು. ಉಳಿದಂತೆ ನಿಕೋಲಸ್ ಪೂರನ್ 23, ಮಾರ್ಕಸ್ ಸ್ಟೋಯ್ನಿಸ್ ಅಜೇಯ 8 ರನ್ ಗಳಿಸಿದರು. ಅಂತಿಮವಾಗಿ ಲಕ್ನೋ 19 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿ ಜಯದ ನಗೆ ಬೀರಿತು. ಸಿಎಸ್‌ಕೆ ಪರ ಮುಸ್ತಾಫಿಜುರ್ ರೆಹಮಾನ್ ಹಾಗೂ ಪತಿರಣ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತು. ತಂಡದ ಪರ ಅಜಿಂಕ್ಯಾ ರಹಾನೆ 36, ನಾಯಕ ಋತುರಾಜ್ ಗಾಯಕ್ವಾಡ್ 17, ರವೀಂದ್ರ ಜಡೇಜಾ 57, ಮೊಯಿನ್ ಅಲಿ 30, ಧೋನಿ 28 ರನ್ ಗಳಿಸಿದರು. ಲಕ್ನೋ ಪರ ಕೃನಾಲ್ ಪಾಂಡ್ಯ 2, ರವಿ ಬಿಷ್ಣೋಯಿ, ಸ್ಟೋಯ್ನಿಸ್, ಯಶ್ ಠಾಕೂರ್ ಹಾಗೂ ಮೊಹಿಸಿನ್ ಖಾನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಕೆ.ಎಲ್.ರಾಹುಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ (ಏ.20)
ಸನ್‌ರೈಸರ್ಸ್ ಹೈದರಾಬಾದ್ / ಡೆಲ್ಲಿ ಕ್ಯಾಪಿಟಲ್ಸ್
ಸ್ಥಳ: ದೆಹಲಿ, ಅರುಣ್ ಜೇಟ್ಲಿ ಕ್ರೀಡಾಂಗಣ.
ಸಮಯ: ಸಂಜೆ 7.30ಕ್ಕೆ

ಇಂದು ಚಿಣ್ಣರ ಮೇಳದ ಮಕ್ಕಳಿಗೆ ಅಗ್ನಿಶಾಮಕದ ಪ್ರಾತ್ಯಕ್ಷಿಕೆ

ಮೈಸೂರು,ಏ.19– ರಂಗಾಯಣವು ಚಿಣ್ಣರಮೇಳ–2024 ರ ಮಕ್ಕಳ ರಂಗ ತರಬೇತಿ ಶಿಬಿರವನ್ನು ಏ.12 ರಿಂದ ನಡೆಸುತ್ತಿದ್ದು, ಈ ಮೇಳದಲ್ಲಿ ಏ.20 ರಂದು ಮಧ್ಯಾಹ್ನ 4.30 ಗಂಟೆಗೆ ಅಗ್ನಿಶಾಮಕ ದಳದವರು ಚಿಣ್ಣರ ಮೇಳದ ಮಕ್ಕಳಿಗೆ ಅಗ್ನಿಶಾಮಕದ ಬಗ್ಗೆ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆಯನ್ನು ನೀಡಲಿದ್ದಾರೆ ಎಂದು ರಂಗಾಯಣದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಾಣಿಜ್ಯ ವಿಷಯದಲ್ಲಿ ರಾಜ್ಯಕ್ಕೆ 4ನೇ ಸ್ಥಾನ ಪಡೆದು ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ ಕು.ಸ್ವಾತಿ ಎಸ್ ಭಟ್ (594/600) ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ ಶ್ರೀಕಂಠ ಕುಮಾರ್, ಸಮಿತಿ ಸದಸ್ಯರಾದ ಶಂಕರನಾರಾಯಣ, ವೇದಮಾತ ಗಾಯತ್ರಿ ಸಂಘದ ಅಧ್ಯಕ್ಷ ದಿನೇಶ್, ನರಸಿಂಹರಾಜ ವಿಪ್ರ ಸಂಘದ ಕಾರ್ಯದರ್ಶಿ ಎಂ.ಎಸ್. ಚಂದ್ರಶೇಖರ್, ಮೇಟಗಳ್ಳಿಯ ಗಾಯತ್ರಿ ವಿಪ್ರ ವೃಂದ ಕೆ.ಸತ್ಯನಾರಾಯಣ, ಆರ್.ವಿ. ಕುಮಾರ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಕೆ.ವಿ.ಲಕ್ಷ್ಮೀದೇವಿ ಅವರು ಅಭಿನಂದಿಸಿದರು. ಪೋಷಕರಾದ ಸುಧೀಂದ್ರ ಭಟ್, ಅನುರಾಧ ಭಟ್ ಉಪಸ್ಥಿತರಿದ್ದರು.

ಪಟ್ಟಲದಮ್ಮನ ಜಾತ್ರೆ; ಜಾನಪದ ಉತ್ಸವ



ಮೈಸೂರು, ಏ.19–ನಗರದ ಅಶೋಕಪುರಂನ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯಲ್ಲಿ ಶ್ರೀದೇವಿ ಪಟ್ಟಲದಮ್ಮನ ಜಾತ್ರಾ ಮಹೋತ್ಸವದ ಅಂಗವಾಗಿ ಜಾನಪದ ಉತ್ಸವ ಗುರುವಾರ ನಡೆಯಿತು.

ಉತ್ಸವದ ಅಂಗವಾಗಿ ಆದಿದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾ ವೃಂದದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಡೊಳ್ಳು ಕುಣಿತ, ಪೂಜಾ ಕುಣಿತ, ಗಾರುಡಿ ಗೊಂಬೆ, ಸೋಮನ ಕುಣಿತ, ಕೀಲು ಕುದುರೆ, ನಗಾರಿ ಹಾಗೂ ತಮಟೆ ವಾದ್ಯ ತಂಡಗಳು ಭಾಗವಹಿಸಿದ್ದವು.

ಆದಿದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾವೃಂದದ ಅಧ್ಯಕ್ಷರಾದ ಸಿ.ಮಂಜುನಾಥ್, ಕಾರ್ಯದರ್ಶಿ ರಾಜಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯ ಯಜಮಾನರು, ಹಿರಿಯರು, ಛೇರ್ಮನ್ನರು ಹಾಗೂ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ನಿಧನ



ಕೆ.ಚಿನ್ನಪ್ಪಾಚಾರ್

ಮೈಸೂರು, ಏ.19– ಮೈಸೂರಿನ ಮಂಡಿ ಮೊಹಲ್ಲಾ, ಕಾಮಟಗೇರಿ ನಿವಾಸಿ ಕೆ.ಚಿನ್ನಪ್ಪಾಚಾರ್(81) ಅವರು ಇಂದು (ಶುಕ್ರವಾರ) ಮಧ್ಯಾಹ್ನ ನಿಧನರಾದರು. ಮೃತರು ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದು, ನಾಳೆ(ಏ.20) ಮಧ್ಯಾಹ್ನ 12.30ಕ್ಕೆ ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರೈತನ ಮಗನನ್ನು ಗೆಲ್ಲಿಸಿ ಜಿಲ್ಲೆಯ ಸ್ವಾಭಿಮಾನ ಉಳಿಸಿ

ಸ್ಟಾರ್ ಚಂದ್ರು ಪರ ನರೇಂದ್ರಸ್ವಾಮಿ ಪ್ರಚಾರ



ಮಳವಳ್ಳಿ, ಏ.19–ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಇದೇ ಜಿಲ್ಲೆಯ ರೈತನ ಮಗ. ಹಳ್ಳಿಗಾಡಿನಲ್ಲಿ ಓದಿ, ನಗರದಲ್ಲಿ ಉದ್ಯಮಿಯಾಗಿ ಬೆಳೆದು ಈಗ ಹುಟ್ಟೂರಿನ ಋಣ ತೀರಿಸಲು ರಾಜಕೀಯಕ್ಕೆ ಬಂದಿದ್ದಾರೆ. ರೈತನ ಮಗನಾದ ಸ್ಟಾರ್ ಚಂದ್ರು ಅವರನ್ನು ಗೆಲ್ಲಿಸಿ ಜಿಲ್ಲೆಯ ಸ್ವಾಭಿಮಾನ ಉಳಿಸಬೇಕು ಎಂದು ಶಾಸಕ ನರೇಂದ್ರಸ್ವಾಮಿ ಅವರು ಮತದಾರರಲ್ಲಿ ಮನವಿ ಮಾಡಿದರು.

ಮಳವಳ್ಳಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರ ಪರವಾಗಿ ಮತಯಾಚಿಸಿ ಮಾತನಾಡಿದರು. ಮೋದಿ ಶ್ರೀಮಂತರ ಸಾಲಮನ್ನಾ ಮಾಡುತ್ತಾರೆಯೇ ಹೊರತು, ರೈತರ ಸಾಲಮನ್ನಾ ಮಾಡಲ್ಲ. ಆದರೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಕೂಡಲೇ ನಮ್ಮ ಸರ್ಕಾರ ರೈತರ ಸಾಲ ಮನ್ನಾ ಮಾಡುತ್ತದೆ. ಉದ್ಯೋಗದ ಭದ್ರತೆಯನ್ನು ನಾವು ಕೊಡುತ್ತೇವೆ. ಜನರ ಬದುಕನ್ನು ಹಸನು ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ ಎಂದರು.

ರಾಜ್ಯದಲ್ಲಿ ಐದು ವರ್ಷದ ಬಳಿಕ ಅಭಿವೃದ್ಧಿ ನಾಗಲೋಟ ಶುರುವಾಗಿದೆ. ಐದು ಗ್ಯಾರಂಟಿಗಳನ್ನು ನೀಡಿದ ಪರಿಣಾಮ ಬರಗಾಲದಲ್ಲಿ ಬಡವರಿಗೆ ಕಾಂಗ್ರೆಸ್ ನೆರವಾಗಿದೆ. ಗ್ಯಾರಂಟಿ ವಿರೋಧಿಸುವ ಬಿಜೆಪಿ, ಜೆಡಿಎಸ್‌ಗೆ ಮತದಾರರು ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ನಮ್ಮ ದುಡಿಮೆಗೆ ಶಕ್ತಿ ಕೊಟ್ಟು ಪ್ರಮಾಣಿಕ ವ್ಯಕ್ತಿ ಸ್ಟಾರ್ ಚಂದ್ರು ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಅವರು ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ವಿವರಿಸಿದರು.



ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಬಿರುಸಿನ ಪ್ರಚಾರ ನಡೆಸಿದರು.



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಹಿಂದುಳಿದ ಸಮಾಜಗಳ ಅಧ್ಯಕ್ಷರು ಮತ್ತು ಪ್ರಗತಿಪರ ಸಂಘಟನೆ ಸದಸ್ಯರು ಮೈಸೂರಿನಲ್ಲಿ ಶುಕ್ರವಾರ 'ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸಿ' ಅಭಿಯಾನ ನಡೆಸಿದರು. ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ನಗರ ಕಾಂಗ್ರೆಸ್ ಓಬಿಸಿ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್, ಎಸ್.ಯೋಗೀಶ, ಪ್ರಕಾಶ್, ಎಸ್.ರವಿನಂದನ್, ಮೊಗಣ್ಣ ಚಾರ್, ಲೋಕೇಶ್ ಕುಮಾರ್, ಮುತ್ತುರಾಜ್, ಮಂಜುನಾಥ್, ನಾಗರಾಜ್, ವಿಶ್ವ, ಆನಂದ್, ರಾಜೀವ್, ಸುಂದರ್ ಕುಮಾರ್ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ನಗರ ಪಾಲಿಕೆ ಅಧಿಕಾರಿಗಳ ಯಡವಟ್ಟು

ಹಾರ್ಡಿಂಗ್ ವೃತ್ತದ ಬಸ್ ನಿಲ್ದಾಣ 'ಆರ್‌ಡಿಂಗ್' ಬಸ್ ನಿಲ್ದಾಣ ಆಗೋಗಿದೆ!




ಮೈಸೂರು, ಏ.18(ಬಿಎಲ್‌ಯು)– ಮೈಸೂರಿನ ಹಾರ್ಡಿಂಗ್ ವೃತ್ತ (Hardinge Circle)ದ ಬಸ್ ನಿಲ್ದಾಣದ ಫಲಕದಲ್ಲಿ ಹಾರ್ಡಿಂಗ್ ಬದಲು ಆರ್‌ಡಿಂಗ್ ಎಂದು ತಪ್ಪಾಗಿ ನಮೂದಿಸಿ ಪಾಲಿಕೆ ಅಧಿಕಾರಿಗಳು ಯಡವಟ್ಟು ಮಾಡಿದ್ದಾರೆ.

ಶಾಸಕರ ಸ್ಥಳಿಯ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಹಾರ್ಡಿಂಗ್ ವೃತ್ತದ ಬಳಿ ನೂತನ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗಿದೆ. ಇದು ಹಾರ್ಡಿಂಗ್ ವೃತ್ತದಿಂದ ನಂಜನಗೂಡಿಗೆ ಹೋಗುವ ಮಾರ್ಗದಲ್ಲಿದೆ. ಫಲಕದಲ್ಲಿ ಬಸ್ ನಿಲ್ದಾಣ ಎಂದು ದೊಡ್ಡದಾಗಿ ಹೆಸರು ಮುದ್ರಿಸಲಾಗಿದೆ. ಆದರೆ ಹಾರ್ಡಿಂಗ್ ಬದಲು ಆರ್‌ಡಿಂಗ್ ವೃತ್ತ ಎಂದು ತಪ್ಪಾಗಿ ಮುದ್ರಿಸಲಾಗಿದೆ. ಹಾರ್ಡಿಂಗ್ ಬದಲು ಈ ಹೆಸರನ್ನು ಬಿಡಿ ಬಿಡಿಯಾಗಿ ಆರ್‌ಡಿಂಗ್ ಎಂದು ತಪ್ಪಾಗಿ ಮುದ್ರಿಸಲಾಗಿದೆ.

ಬಸ್ ನಿಲ್ದಾಣ ನಿರ್ಮಾಣ ಮಾಡಿ, ಫಲಕ ಅಳವಡಿಸಿ ಬಹಳಷ್ಟು ದಿನವಾದರೂ ಈ ತಪ್ಪು ನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ಬಂದಿಲ್ಲ ಎಂದು ಸ್ಥಳಿಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

20.04.2024 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ
- **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್ :** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್ ಹಾಗೂ ಸುಜೋಕ್ ಮತ್ತು ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಸಿಎ14–ಸಿ, ಎ ಬ್ಲಾಕ್, ವಿ.ಕೆ. ಪಬ್ಲಿಕ್ ಸ್ಕೂಲ್, ವಿಜಯನಗರ 3ನೇ ಹಂತ, ಬೆಳಗ್ಗೆ 10.30 ರಿಂದ
- **ರಂಗಾಯಣ :** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್. ರಾಮನಾಥ್, ನಿರ್ದೇಶನ : ಹೈಸ್ನಾಂ ತೋಂಬಾ, ಸ್ಥಳ: ಭೂಮಿಗೀತ ರಂಗಮಂದಿರ, ಮಧ್ಯಾಹ್ನ 3ಕ್ಕೆ
- **ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ :** ನಾಟ್ಯಾಚಾರ್ಯ ವಿದುಷಿ ಯಾಮಿನಿ ಮುತ್ತಣ್ಣ ಅವರಿಂದ ಭರತನಾಟ್ಯ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 3 ರಿಂದ.
- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಗಣರಾಜ್ಯೋತ್ಸವ, ರಾಷ್ಟ್ರ ಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 4ಕ್ಕೆ.
- **ರಂಗಾಯಣ :** ಚಿಣ್ಣರಮೇಳ–2024, ಮಕ್ಕಳ ರಂಗ ತರಬೇತಿ ಶಿಬಿರದ ಅಂಗವಾಗಿ ಅಗ್ನಿಶಾಮಕ ದಳದವರಿಂದ ಮಕ್ಕಳಿಗೆ ಅಗ್ನಿಶಾಮಕದ ಬಗ್ಗೆ ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ, ಸ್ಥಳ: ರಂಗಾಯಣ, ಸಂಜೆ 4.30ಕ್ಕೆ.
- **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಕುಮಾರಿ ಶ್ರಾವಣಿ ಗಿರೀಶ್, ಬಿ ಕಾಂ ವಿದ್ಯಾರ್ಥಿನಿ, ಶ್ರೀರಂಗಪಟ್ಟಣ, ಸ್ಥಳ: ಕಲಾ ಸುರುಚಿ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಶ್ರೀ ರಾಮಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 10.30ಕ್ಕೆ ಶ್ರೀ ಆದಿತ್ಯಾದಿ ನವಗ್ರಹ ಹೋಮ, ನಾಂದೀ, ಸಂಜೆ 6.30ಕ್ಕೆ ವರಪೂಜೆ, ಸ್ಥಳ: ಶ್ರೀರಾಮಮಂದಿರ, ಜಯನಗರ.
- **ಶ್ರೀರಾಮ ದೇವಸ್ಥಾನ :** ಶ್ರೀರಾಮ ನವಮಿ ಮಹೋತ್ಸವ, ಶ್ರೀ ನವಗ್ರಹ ಹೋಮ, ಮೃತ್ಯುಂಜಯ ಹೋಮ, ಸ್ಥಳ: ಶ್ರೀರಾಮ ದೇವಸ್ಥಾನ, ಅರಮನೆ ಕೋಟೆ, ಉತ್ತರ ಬಾಗಿಲು.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** 127ನೇ ಸಾಂಸ್ಕೃತಿಕ ಕಾರ್ಯಕ್ರಮ, ವಿದುಷಿ ಶ್ರೀಮತಿ ಇಂದೂ ನಾಗರಾಜ್ ಮತ್ತು ವಿದುಷಿ ಶ್ರೀಮತಿ ಲಕ್ಷ್ಮೀ ನಾಗರಾಜ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಜನಾರ್ಧನ್ ಶ್ರೀನಾಥ್ – ಪಿಟೀಲು, ವಿದ್ವಾನ್ ಕೇಶವದತ್ತ–ಮೃದಂಗ, ವಿದ್ವಾನ್ ಸುಮಿತ್ ಎಸ್. ಗೌಡ–ಘಟಂ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಶ್ರೀ ರಾಮನವಮಿ ಪ್ರಯುಕ್ತ ಸಂಗೀತೋತ್ಸವ, ವಿದುಷಿ ಕನ್ಯಾಕುಮಾರಿ ಅವರಿಂದ ಪಿಟೀಲು ವಾದನ, ವಿದ್ವಾನ್ ಸಾಯಿ ಗಿರಿಧರ್–ಮೃದಂಗ, ವಿದ್ವಾನ್ ವ್ಯಾಸ ವಿಠ್ಠಲ–ಖಂಜೀರ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.
- **ಶ್ರೀ ರಾಮಸೇವಾ ಮಂಡಲಿ:** 71ನೇ ವರ್ಷದ ಶ್ರೀರಾಮೋತ್ಸವ, ಕಲಾಂಬಿಕ ಸಹೋದರಿಯರಿಂದ ದ್ವಂದ್ವ ಗಾಯನ, ವಿದ್ವಾನ್ ಕಾರ್ತಿಕೇಯ ರಾಮಚಂದ್ರ–ಪಿಟೀಲು, ವಿದ್ವಾನ್ ಡಾ. ಸಿ.ಎ. ಗುರುದತ್ತ–ಮೃದಂಗ, ವಿದ್ವಾನ್ ಮೈಸೂರು ಆರ್. ಸುಕೃತ್–ಖಂಜಿರ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ –ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಡಾ. ಬಿ.ವಿ. ವಸಂತ ಕುಮಾರ್, 6.50 ರೈತರಿಗೆ ಸಲಹೆ, 7.15 'ಸುರಕ್ಷಿತ ಅಂತರ್ಜಾಲ' ಮಾಲಿಕೆಯಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಸುಖವಾಗಿರುವುದು ಹೇಗೆ? ಮಾತನಾಡುತ್ತಾರೆ. ಕಿರುತೆರೆ ನಟಿ ಹಾಗೂ ಲೇಖಕಿ ದೀಪ ರವಿಶಂಕರ್, 10.00 ಎಂ. ಆರ್. ಸುಧಾ – ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಮರಿಸಿದ್ಧಮ್ಮ ಮತ್ತು ಸಂಗಡಿಗರಿಂದ ತತ್ವಪದಗಳು, 1.00 ಮತ ಹಾಕೋಣ ಬನ್ನಿ, 1.20 ಭಾವಗೀತೆ–ಕೆ. ಶ್ರೇಯಾ ಭಟ್, 3.00 ಜನಪದ ಸಂಗೀತ–ಮೈಸೂರು ಗುರುರಾಜ್ ಮತ್ತು ಸಂಗಡಿಗರಿಂದ ಮೇಲುಕೋಟೆ ಚಲುವನಾರಾಯಣ ಸ್ವಾಮಿ ಹಾಡುಗಳು, 3.30 ಮಕ್ಕಳ ಮಂಟಪ–ಸದ್ವಿದ್ಯಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ಹಾಸ್ಯ ನಾಟಕ–ಕುಟುಂಬಾಯಣ, ರಚನೆ– ವೈ. ವಿ. ಗುಂಡೂರಾವ್, ನಿರ್ಮಾಣ–ಉಮೇಶ್ ಎಸ್. ಎಸ್., 4.30 ನೆನಪಿನಂಗಳ, 6.50 ಕೃಷಿರಂಗ–ಕಿಸಾನ್ ವಾಣಿ–ಯುವ ಜನತೆ ಹಾಗೂ ಕೃಷಿ ಈ ಕುರಿತು ಮದ್ದೂರು ತಾಲೂಕು ಬೆಳ್ಳೂರು ಗ್ರಾಮದ ಬಿಲ್ ಎಲ್. ಮುದ್ದೇಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದ್ವಾನ್ ಡಾ. ಎಲ್. ಸುಬ್ರಹ್ಮಣ್ಯನ್–ವೈಯೋಲಿನ್ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 20 ಶನಿವಾರ 2024

ಸಂಪುಟ: 45 | ಸಂಚಿಕೆ: 5 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಇಟಿ ಪ್ರಶ್ನೆ ಪತ್ರಿಕೆಯಲ್ಲಿ ಪಠ್ಯೇತರ ಪ್ರಶ್ನೆ ಗೊಂದಲ

ಆಕ್ಷೇಪಣೆ ಸಲ್ಲಿಸಲು ಇಂದಿನಿಂದ ಅವಕಾಶ

- ಕೆಇಎ ವೆಬ್‌ಸೈಟ್ ಲಿಂಕ್ ಬಿಡುಗಡೆ
- ತಜ್ಞರ ತಂಡದ ಸಲಹೆ ನಂತರ ಸೂಕ್ತ ನಿರ್ಧಾರ
- ಜೀವಶಾಸ್ತ್ರ, ಗಣಿತಶಾಸ್ತ್ರ ಪಠ್ಯಕ್ಕೆ ಹೊರತಾದ ಪ್ರಶ್ನೆ; ವಿದ್ಯಾರ್ಥಿಗಳಲ್ಲಿ ಗೊಂದಲ



ಮೈಸೂರು, ಏ.19–ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ರಾಜ್ಯ ಸರ್ಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಪ್ರಶ್ನೆ ಪತ್ರಿಕೆಗಳ ಗೊಂದಲಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ನಾಳೆ (ಏ.20) ಕರ್ನಾಟಕ ಪರೀಕ್ಷಾ



ಪ್ರಾಧಿಕಾರ (ಕೆಇಎ) ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗುತ್ತಿದ್ದು, ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಬಹುದು. ಈ ಸಂಬಂಧ ತಜ್ಞರ ತಂಡ ಸಲಹೆ ನೀಡಿದ ನಂತರ ಪ್ರಾಧಿಕಾರ ಸ್ಪಷ್ಟ ತೀರ್ಮಾನ ಕೈಗೊಳ್ಳಲಿದ್ದು, ವಿದ್ಯಾರ್ಥಿಗಳು ಆತಂಕಪಡುವ ಅವಶ್ಯಕತೆ ಇಲ್ಲ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.


ಎಸ್.ರಮ್ಯಾ

ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ರಾಜ್ಯಾದ್ಯಂತ ಪರೀಕ್ಷೆ ಬರೆದಿರುವ 3.49 ಲಕ್ಷ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದೊಂದಿಗೆ ಕೆಇಎ ಚೆಲ್ಲಾಟ ಆಡಿದೆ ಎಂಬ ಆರೋಪಗಳು ವಿದ್ಯಾರ್ಥಿಗಳಿಂದ ಕೇಳಿಬಂದಿವೆ. ಗುರುವಾರ ನಡೆದ ಜೀವಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ 10 ಪ್ರಶ್ನೆಗಳು ಹಾಗೂ ಗಣಿತಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ 15 ಪ್ರಶ್ನೆಗಳನ್ನು ಪಠ್ಯಕ್ಕೆ ಹೊರತಾಗಿ (ಔಟ್ ಆಫ್ ಸಿಲಬಸ್) ಕೇಳಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ಕರೆ ಮಾಡಿದ ಹಲವಾರು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ನಾವು ವ್ಯಾಸಂಗ ಮಾಡಿದ ಪಠ್ಯದಲ್ಲೇ ಇಲ್ಲದ ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಉತ್ತರಿಸುವುದಾದರೂ ಹೇಗೆ? ಎಂದು ಪ್ರಶ್ನಿಸಿರುವ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ಗಳಿಗೆ ಪ್ರತಿಷ್ಠಿತ ಕಾಲೇಜುಗಳಲ್ಲಿ ಸಿಇಟಿ ಮೂಲಕ ಪ್ರವೇಶ ಪಡೆಯಲು ಪ್ರತಿಯೊಂದು ಅಂಕವೂ ಮುಖ್ಯವಾಗಿರುತ್ತದೆ. ಕೇವಲ ಒಂದೇ ಅಂಕದಲ್ಲಿ ನಾವು ಬಯಸುವ ಕಾಲೇಜಿಗೆ ಪ್ರವೇಶ ಪಡೆಯಲು ವಿಫಲವಾಗುವಂತಹ ಸನ್ನಿವೇಶಗಳೂ ಇರುತ್ತವೆ. ಹೀಗಿರುವಾಗ ಒಟ್ಟು 25 ಪ್ರಶ್ನೆಗಳಿಗೆ ನಾವು ಉತ್ತರಿಸಲು ಸಾಧ್ಯವಾಗದಂತಹ ಪರಿಸ್ಥಿತಿಯನ್ನು ಕೆಇಎ ನಿರ್ಮಾಣ ಮಾಡಿರುವುದು ನಮ್ಮ ಶೈಕ್ಷಣಿಕ ಭವಿಷ್ಯಕ್ಕೆ ತೊಂದರೆಯನ್ನುಂಟು ಮಾಡಿದೆ ಎಂದು ವಿದ್ಯಾರ್ಥಿಗಳು ಅಲವತ್ತುಕೊಂಡಿದ್ದಾರೆ. ಈ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ಈ ವಿಚಾರದಲ್ಲಿ ವಿದ್ಯಾರ್ಥಿಗಳು ಆತಂಕಪಡಬೇಕಿಲ್ಲ. ತಜ್ಞರ ತಂಡ ನೀಡುವ ಸಲಹೆಯಂತೆ ಪ್ರಾಧಿಕಾರ ಸ್ಪಷ್ಟ ತೀರ್ಮಾನ ಕೈಗೊಳ್ಳುತ್ತದೆ ಎಂದು ಹೇಳಿದ್ದರಾದರೂ, ಪಠ್ಯಕ್ಕೆ ಹೊರತಾಗಿ ಕೇಳಲಾದ 25 ಪ್ರಶ್ನೆಗಳಿಗೆ ಸಂಬಂಧಿಸಿದ ● 6ನೇ ಪುಟಕ್ಕೆ

ಲೋಕಸಭಾ ಮೊದಲ ಹಂತದ ಚುನಾವಣೆ

ಶೇ.59.71ರಷ್ಟು ಮತದಾನ

ನವದೆಹಲಿ, ಏ. 19–ದೇಶದ 18 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳು ಸೇರಿ ಒಟ್ಟು 102 ಕ್ಷೇತ್ರಗಳಲ್ಲಿ ನಡೆದ 18ನೇ ಲೋಕಸಭಾ ಚುನಾವಣೆಯ ಮೊದಲ ಹಂತದ ಚುನಾವಣೆಯಲ್ಲಿ ಒಟ್ಟು ಶೇ. 59.71 ರಷ್ಟು ಮತದಾನವಾಗಿದೆ.

ಪಶ್ಚಿಮ ಬಂಗಾಳದಲ್ಲಿ ಅತೀ ಹೆಚ್ಚು ಅಂದರೆ ಶೇ. 77.57ರಷ್ಟು ಮತದಾನ ನಡೆದಿದೆ. ಈ ರಾಜ್ಯದ 3 ಕ್ಷೇತ್ರಗಳಿಗೆ ಮಾತ್ರ ಇಂದು ಚುನಾವಣೆ ನಡೆಯಿತು. ಬಿಹಾರದ 4 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಅತೀ ಕಡಿಮೆ ಅಂದರೆ 46.32ರಷ್ಟು ಮತದಾನವಾಗಿದೆ.

ಇನ್ನುಳಿದಂತೆ ತಮಿಳುನಾಡಿನ ಎಲ್ಲಾ 39 ಕ್ಷೇತ್ರಗಳಲ್ಲಿ ನಡೆದ ಚುನಾವಣೆಯಲ್ಲಿ ಶೇ. 62.02, ಪುದುಚೇರಿಯ 1 ಕ್ಷೇತ್ರದಲ್ಲಿ ಶೇ.72.84, ಅಂಡಮಾನ್–ನಿಕೋಬಾರ್‌ನ 1 ಕ್ಷೇತ್ರದಲ್ಲಿ ಶೇ. 56.87, ಅರುಣಾಚಲ ಪ್ರದೇಶದ 2 ಕ್ಷೇತ್ರದಲ್ಲಿ ಶೇ. 64.07, ಅಸ್ಸಾಂನ 5 ಕ್ಷೇತ್ರಗಳಲ್ಲಿ ಶೇ. 70–77, ಛತ್ತೀಸ್‌ಗಢದ 1 ಕ್ಷೇತ್ರದಲ್ಲಿ ಶೇ. 63.41, ಜಮ್ಮು–ಕಾಶ್ಮೀರದ 1 ಕ್ಷೇತ್ರದಲ್ಲಿ ಶೇ. 65.08, ಲಕ್ಷದ್ವೀಪದ 1 ಕ್ಷೇತ್ರದಲ್ಲಿ ಶೇ. 59.02, ಮಧ್ಯಪ್ರದೇಶದ 6 ಕ್ಷೇತ್ರಗಳಲ್ಲಿ ಶೇ. 63.25, ಮಹಾರಾಷ್ಟ್ರದ 5 ಕ್ಷೇತ್ರಗಳಲ್ಲಿ ಶೇ. 54.85, ಮಣಿಪುರದ 2 ಕ್ಷೇತ್ರದಲ್ಲಿ ಶೇ. 68.62, ಮೇಘಾಲಯದ 2 ಕ್ಷೇತ್ರದಲ್ಲಿ ಶೇ. 69.91, ಮಿಜೋರಾಂನ 1 ಕ್ಷೇತ್ರದಲ್ಲಿ ಶೇ. 53.96, ನಾಗಾಲ್ಯಾಂಡ್‌ನ 1 ಕ್ಷೇತ್ರದಲ್ಲಿ ಶೇ. 56.18, ರಾಜಾಸ್ತಾನದ 12 ಕ್ಷೇತ್ರಗಳಲ್ಲಿ ಶೇ. 50.27, ಸಿಕ್ಕಿಂನ 1 ಕ್ಷೇತ್ರದಲ್ಲಿ ಶೇ. 68.06, ತ್ರಿಪುರಾದ 1 ಕ್ಷೇತ್ರದಲ್ಲಿ ಶೇ. 76.10, ಉತ್ತರ ಪ್ರದೇಶದ 8 ಕ್ಷೇತ್ರಗಳಲ್ಲಿ ● 6ನೇ ಪುಟಕ್ಕೆ



ರಾಜ್ಯದ 28 ಕ್ಷೇತ್ರಗಳಲ್ಲಿ ಚುನಾವಣಾ ಜಿದ್ದಾಜಿದ್ದಿ: ಎರಡು ಹಂತದ ಮತದಾನವಷ್ಟೇ ಬಾಕಿ

ಬೆಂಗಳೂರು, ಏ. 19(ಕೆಎಂಶಿ)– ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ನಾಮಪತ್ರ ಸಲ್ಲಿಕೆ ಕಾರ್ಯ ಪೂರ್ಣಗೊಂಡಿದ್ದು ಇನ್ನು ಮತದಾನವಷ್ಟೇ ಬಾಕಿ ಉಳಿದಿದೆ. ಈಗಾಗಲೇ ಹಳೆಯ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಬಿರುಸಿನ ಚುನಾವಣಾ ಪ್ರಚಾರವನ್ನು ಅಭ್ಯರ್ಥಿಗಳು ಕೈಗೊಂಡಿದ್ದು, ಏಪ್ರಿಲ್ 26ರಂದು ಮತದಾನ ಜರುಗಲಿದೆ.

ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಹಾವೇರಿ, ಧಾರವಾಡ, ಬೆಳಗಾವಿ, ಚಿಕ್ಕೋಡಿ, ವಿಜಯಪುರ, ಬಾಗಲಕೋಟೆ, ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಲೋಕಸಭಾ ಕ್ಷೇತ್ರಗಳಿಗೆ ಶುಕ್ರವಾರ ನಾಮಪತ್ರ ಸಲ್ಲಿಕೆ ಕಾರ್ಯ ಪೂರ್ಣಗೊಂಡಿತು. ಈ ಕ್ಷೇತ್ರಗಳ ನಾಮಪತ್ರ ಪರಿಶೀಲನೆ ಕಾರ್ಯ ಏಪ್ರಿಲ್ 20 ರಂದು ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳಲು ಏಪ್ರಿಲ್ 22 ಕೊನೆಯ ದಿನವಾಗಿರುತ್ತದೆ. ಮೇ 7ರಂದು ಮತದಾನ ನಡೆಯಲಿದ್ದು, ಜೂನ್ 4ರಂದು ಆಯಾ ಜಿಲ್ಲಾ ಕೇಂದ್ರಗಳಲ್ಲಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಮತ ಎಣಿಕೆ ನಡೆಯಲಿದೆ. ಎರಡನೇ ಹಂತದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಮೇಲ್ನೋಟಕ್ಕೆ ಜಿದ್ದಾಜಿದ್ದಿ ಕಂಡು ಬಂದಿದೆ. ಈ ಕ್ಷೇತ್ರಗಳಲ್ಲಿ ಉಭಯ ಪಕ್ಷಗಳಿಂದಲೂ ಪ್ರಭಾವಿ ನಾಯಕರ ಕುಟುಂಬದವರೇ ಕಣಕ್ಕಿಳಿದಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿರುವ ಎಸ್.ಎಸ್.ಮಲ್ಲಿಕಾರ್ಜುನ್ ತಮ್ಮ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ದಾವಣಗೆರೆಯಿಂದಲೂ, ಲಕ್ಷ್ಮಿ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ ಬೆಳಗಾವಿಯಿಂದ, ● 6ನೇ ಪುಟಕ್ಕೆ

ಮೈಸೂರಿನ ಗಾಂಧಿನಗರದಲ್ಲಿ ಯದುವೀರ್‌ಗೆ ಅದ್ಧೂರಿ ಸ್ವಾಗತ

ಭರ್ಜರಿ ರೋಡ್ ಶೋ ಮೂಲಕ ಮತಯಾಚನೆ

- ಮೈಸೂರು ರಾಜಮನೆತನದ ಗತವೈಭವ ಸ್ಮರಿಸಿದ ಜನತೆ
- ಗಾಂಧಿನಗರಕ್ಕೆ ಮೆರಗು ನೀಡುವ ಆಶಯ ವ್ಯಕ್ತಪಡಿಸಿದ ಯದುವೀರ್


ಮೈಸೂರಿನ ಗಾಂಧಿನಗರದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ರೋಡ್ ಶೋ ಮೂಲಕ ಮತಯಾಚಿಸಿದರು.

ಮೈಸೂರು, ಏ.19(ಎಂಕೆ)– ಮೈಸೂರಿನ ಗಾಂಧಿನಗರದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಶುಕ್ರವಾರ ಸಂಜೆ ಭರ್ಜರಿ ರೋಡ್ ಶೋ ಮೂಲಕ ಮತಯಾಚಿಸಿದರು.

ಗಾಂಧಿನಗರದ ಮುಖ್ಯ ದ್ವಾರದ ಎದುರಿನ ಡಾ.ಅಂಬೇಡ್ಕರ್ ವೃತ್ತಕ್ಕೆ ಆಗಮಿಸಿ, ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಯದುವೀರ್, ಗಾಂಧಿನಗರದ ಪ್ರಮುಖ ಬೀದಿಗಳಲ್ಲಿ ರೋಡ್ ಶೋ ನಡೆಸಿದರು. ಅಲ್ಲದೆ ಗಾಂಧಿನಗರದ ಚಿಕ್ಕಮ್ಮದೇವಿ, ಶ್ರೀ ಮಹಾಕಾಲ ಭೈರವೇಶ್ವರಸ್ವಾಮಿ, ಮಲೆ ಮಹದೇಶ್ವರ ಸ್ವಾಮಿ ಸೇರಿದಂತೆ ಪ್ರಮುಖ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ಯದುವೀರ್, ಭಾರತ ಸಂವಿಧಾನದಡಿಯಲ್ಲಿ ಸರ್ವರ ಅಭಿವೃದ್ಧಿಗಾಗಿ ಕೇಂದ್ರದಲ್ಲಿ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕು. ಡಾ.ಬಿ.ಆರ್.ಅಂಬೇಡ್ಕರ್ ರಾಷ್ಟ್ರೀಯ ಸ್ಮಾರಕ ನಿರ್ಮಾಣದ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಸಂವಿಧಾನ ಶಿಲ್ಪಿಗಳಾದ ಅಂಬೇಡ್ಕರ್ ಅವರಿಗೆ ಗೌರವ ನೀಡುವ ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ ಎಂದು ಸ್ಮರಿಸಿದರಲ್ಲದೆ ಗಾಂಧಿನಗರವನ್ನು ಗಾಂಧಿನಗರವನ್ನಾಗಿಯೇ ಉಳಿಸುವಲ್ಲಿ ನಮ್ಮೆಲ್ಲರ ಪ್ರಯತ್ನವಿರಬೇಕು. ಹಾಗಾಗಿ ನಿಮ್ಮೆಲ್ಲರ ಸಹಕಾರ ಅವಶ್ಯವಾಗಿದ್ದು, ಬೆಂಬಲ ನೀಡುವಂತೆ ಮನವಿ ಮಾಡಿದರು. ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ಗಾಂಧಿನಗರದ ಇತಿಹಾಸದಲ್ಲಿಯೇ ಯಾವ ಅಭ್ಯರ್ಥಿಗೂ, ಜನಪ್ರತಿನಿಧಿಗೂ ಈ ರೀತಿಯ ಭವ್ಯ ಸ್ವಾಗತ ನೀಡಿರಲಿಲ್ಲ. ಮೈಸೂರು ಒಡೆಯರ್ ಮನೆತನದವರೂ ಆದ ಬಿಜೆಪಿ ಅಭ್ಯರ್ಥಿಯದುವೀರ್ ಅವರ ಗೆಲುವಿನಿಂದ ಗಾಂಧಿನಗರದ ಜನತೆಗೆ ಒಳ್ಳೆಯದಾಗಲಿದೆ. ತಮ್ಮೆಲ್ಲರ ಅಮೂಲ್ಯ ಮತವನ್ನು ನೀಡಿ ಅವರನ್ನು ಜಯಶೀಲರನ್ನಾಗಿ ಮಾಡಿ ಎಂದು ಕೋರಿದರು. ನಗರಪಾಲಿಕೆ ಮಾಜಿ ಸದಸ್ಯೆ ಅಶ್ವಿನಿ ಶರತ್ ಮಾತನಾಡಿ, ಗಾಂಧಿನಗರಕ್ಕೆ ● 6ನೇ ಪುಟಕ್ಕೆ

ಯದುವೀರ್ ಗೆಲ್ಲಿಸಿಕೊಂಡೇ ಬರಬೇಕು...

ಮರಾಠ ಸಮುದಾಯ ಶಪಥ

ಮೈಸೂರು, ಏ.19(ಎಂಕೆ)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಮೈಸೂರಿನ ಕ್ಷತ್ರೀಯ ಮರಾಠ ಸಮಾಜ ಘೋಷಣೆ ಮಾಡಿದೆ.

ನಗರದ ಮಂಡಿ ಮೊಹಲ್ಲಾದಲ್ಲಿರುವ ಮರಾಠ ಶ್ರೀ ರಾಮ ಮಂದಿರಕ್ಕೆ ಶುಕ್ರವಾರ ಭೇಟಿ ನೀಡಿದ ಯದುವೀರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದ ಮೈಸೂರಿನ ಕ್ಷತ್ರೀಯ ಮರಾಠ ಸಮಾಜದ ಮುಖಂಡರು, ಅವರನ್ನು ಅಭಿನಂದಿಸಿ ಲೋಕಸಭಾ ಚುನಾವಣೆಯಲ್ಲಿ ಯದುವೀರ್ ಅವರನ್ನು ಗೆಲ್ಲಿಸಿಕೊಂಡೇ ಬರಬೇಕು ಎಂದು ಶಪಥ ಮಾಡಿದರು. ಈ ವೇಳೆ ಕ್ಷತ್ರೀಯ ಮರಾಠ ಸಮಾಜದ ಮುಖಂಡ ಹಾಗೂ ಮಾಜಿ ಶಾಸಕ ಈ.ಮಾರುತಿ ರಾವ್ ಪವಾರ್ ಮಾತನಾಡಿ, ಮರಾಠ ಸಮಾಜ ಎಂದಿಗೂ ಬಿಜೆಪಿ ಜೊತೆಗಿದೆ. ಮೈಸೂರು ಅರಮನೆಗೆ ಸೇವೆ ಮಾಡಿರುವ ಈ ಸಮಾಜ ದೇಶಕ್ಕೆ ಗೌರವ ತರುವ ಕೆಲಸವನ್ನು ಮಾಡಿದೆ. ಯದುವೀರ್ ಅವರು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವುದೇ ಹೆಮ್ಮೆಯಾಗಿದ್ದು, ಅವರನ್ನು ಗೆಲ್ಲಿಸಿಕೊಂಡು ಬರಲೇಬೇಕಾಗಿದೆ ಎಂದರು.

ಮೈಸೂರು ಅಭಿವೃದ್ಧಿಗೆ ಒಡೆಯರು ನೀಡಿರುವ ಕೊಡುಗೆಗೆ ಗೌರವ ಸಲ್ಲಿಸುವ ಸದವಕಾಶ ಇದಾಗಿದೆ. ಅವರಿಗೆ ಎಷ್ಟು ಸಾರಿ ಮತ ನೀಡಿದರೂ ಸಾಲದು. ಚುನಾವಣೆ ಮುಗಿಯುವವರೆಗೂ ಮರಾಠ ಸಮುದಾಯದ ಪ್ರತಿಯೊಬ್ಬರು ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಸಂದರ್ಶಕ (ಅಭ್ಯರ್ಥಿಗೆ) : "ನಿಮ್ಮ ಕಾರ್ಯ ಕೌಶಲ್ಯಕ್ಕೆ ಉದಾಹರಣೆ ಕೊಡುವಿರಾ?"
ಅಭ್ಯರ್ಥಿ (ಬೇರೆ ಆಫೀಸಿನಲ್ಲಿ ಕೆಲಸ ಮಾಡಿದ ಅನುಭವದ ಬಗ್ಗೆ) : "ಓಹೋ, ಈಚೆಗೆ ಪದಬಂಧ ಸ್ಪರ್ಧೆಯಲ್ಲಿ ನನಗೆ ಬಹುಮಾನ ಬಂದಿದೆ"
ಸಂದರ್ಶಕ : "ಆದರೆ ನಾನು ಆಫೀಸ್‌ನ ವಿಚಾರದ ಬಗ್ಗೆ ಕೇಳುತ್ತಿರುವುದು"
ಅಭ್ಯರ್ಥಿ : "ನಾನು ಪದಬಂಧ ಬರೆಯುತ್ತಿದ್ದುದು ಆಫೀಸ್‌ನ ಸಮಯದಲ್ಲೇ!"

ಮೈಸೂರು ಮಿತ್ರ

ಶನಿವಾರ, 20 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸೋಲನ್ನು ಕಂಡು ಅಂಜುವವನಿಂದ ಗೆಲುವು ದೂರ ಸರಿಯುತ್ತದೆ –ಅಯಾರೆಸ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಲ್ಲದ ಮನಸ್ಸಿನಲ್ಲಿ ಇಲ್ಲದ್ದು ಹುಟ್ಟುತ್ತದೆ

ನಿಮ್ಮ ಪತ್ರಗಳು

■ ನಿಮ್ಮ ಓಟು ಯಾರಿಗೆ? ಕೇಳುವುದು ಸರಿಯೇ?

ಮಾನ್ಯರೆ,

ಲೋಕಸಭಾ ಚುನಾವಣಾ ದಿನಾಂಕ ಹತ್ತಿರ ಬರುತ್ತಿದ್ದು, ದಿನದಿಂದ ದಿನಕ್ಕೆ ಚುನಾವಣಾ ಕಾವು ಬೇಸಿಗೆ ಬಿಸಿಲನ್ನು ಮೀರಿಸುವಷ್ಟು ಮಟ್ಟಿಗೆ ಏರುತ್ತಿದೆ. ರಾಜಕಾರಣ ನಿಂತ ನೀರಲ್ಲ ಎಂಬುದಕ್ಕೆ ನಿನ್ನೆ ಮೊನ್ನೆವರೆಗೂ ಪರಮ ಶತ್ರುಗಳಾಗಿದ್ದ ನಾಯಕರು ದಿಢೀರ್ ಆಪ್ತ ಮಿತ್ರರಾದರೆ, ಜೋಡೆತ್ತುಗಳು ಎನಿಸಿಕೊಂಡವರು ಹಾವು ಮುಂಗೂಸಿಗಳಂತೆ ಆಗಿದ್ದಾರೆ.

ಪಕ್ಷವೇ ನನ್ನ ತಾಯಿ ಸಿದ್ಧಾಂತವೇ ನನ್ನ ಉಸಿರು ಎನ್ನುತಿದ್ದವರು ಆಯಾರಾಮ್ ಗಯಾರಾಮ್‌ಗಳಾಗಿ ಜಗಲಿ ಕಟ್ಟೆ ವೀರರಿಗೆ ಹಾಗೂ ಸಾಮಾಜಿಕ ಜಾಲ ತಾಣಗಳಿಗೆ ಮೃಷ್ಟಾನ್ನ ಭೋಜನವಾಗಿದ್ದಾರೆ. ಇದೆಲ್ಲದರ ಮಧ್ಯೆ ಇತ್ತೀಚೆಗೆ ಕೆಲವು ದೃಶ್ಯ ಮಾಧ್ಯಮಗಳು ಅದರಲ್ಲೂ ಖಾಸಗಿ ಸುದ್ದಿ ವಾಹಿನಿಗಳು ತಮ್ಮ TRP ಹೆಚ್ಚಿಸುವ ಮಹತ್ವಾಕಾಂಕ್ಷೆಯಿಂದ ಜಿದ್ದಿಗೆ ಬಿದ್ದವರಂತೆ ಜಿಲ್ಲೆ, ತಾಲೂಕು, ಹಳ್ಳಿಯ ಕಡೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಜನರ ಮುಖಕ್ಕೆ ಮೈಕ್ ಹಿಡಿದು ಯಾರಿಗೆ ನಿಮ್ಮ ಓಟು? ಯಾವ ಪಕ್ಷಕ್ಕೆ ನಿಮ್ಮ ಬೆಂಬಲ? ಹೇಗಿದೆ ನಿಮ್ಮ ಕಡೆ ರಾಜಕೀಯ? ಎಂಬ ಪ್ರಶ್ನೆಗಳನ್ನು ಕೇಳುತ್ತಿರುವುದು ಆಕ್ಷೇಪಾರ್ಹ. ಅದರಲ್ಲೂ ಸದೃಢ ದೇಶ ನಿರ್ಮಾಣಕ್ಕೆ ಅರ್ಹ ಮತದಾರ ತನ್ನ ಬುದ್ದಿ ಮತ್ತು ಭಾವನೆಗಳನ್ನೂ ಬೆರೆಸಿ ಗೌಪ್ಯ ಮತದಾನದ ಮೂಲಕ ತನಗೆ ಉತ್ತಮ ಎನಿಸಿದ ಅಭ್ಯರ್ಥಿಗೆ ಮತ ಚಲಾವಣೆ ಮಾಡುವುದು ಅವರವರ ಸಾಂವಿಧಾನಿಕ ಹಕ್ಕು. ಅದನ್ನು ಬಹಿರಂಗಗೊಳಿಸಿ ಮತದಾರನ ಗೌಪ್ಯ ಮತದಾನದ ಹಕ್ಕಿಗೆ ಚ್ಯುತಿ ತರುವ ಕೆಲಸವನ್ನು ಖಾಸಗಿ ಸುದ್ದಿವಾಹಿನಿಗಳು ಮತ್ತು ಕೆಲವು ಯು ಟ್ಯೂಬ್ ಚಾನಲ್‌ಗಳು ಮಾಡುತ್ತಿರುವುದು ಸರಿ ಕಾಣದು. ಇದರಿಂದ ನೋಡುಗ ಮತದಾರನ ಮೇಲೆಯೂ ಪರಿಣಾಮ ಬೀರಿ ಚುನಾವಣಾ ಫಲಿತಾಂಶಗಳು ಬದಲಾಗಬಹುದು. ನಮ್ಮಲ್ಲಿ ಎಷ್ಟೋ ಜನ ಟಿವಿಯ ಕ್ಯಾಮರಾ ಕಂಡ ಕೂಡಲೇ ಉನ್ಮಾದಕ್ಕೆ ಒಳಗಾಗಿ ಕ್ಷೇತ್ರದ ಅಭ್ಯರ್ಥಿಯ ಜಾತಿ, ಧರ್ಮ, ನಡವಳಿಕೆ ಬಗ್ಗೆ ಮಾತನಾಡಿ ಬೆಂಬಲಿಗರ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಮುಂದೆ ಆ ಅಭ್ಯರ್ಥಿ ಗೆದ್ದರೆ ಈ ಗ್ರಾಮ, ಜನರನ್ನು ಟಾರ್ಗೆಟ್ ಮಾಡಲುಬಹುದು. ಅದಕ್ಕೆ ಈ ರೀತಿ ಅವೈಜ್ಞಾನಿಕ ರೀತಿಯಲ್ಲಿ ಸಮೀಕ್ಷೆ ಮಾಡುವ ಬದಲು ಆ ಕ್ಷೇತ್ರದ ಜ್ವಲಂತ ಸಮಸ್ಯೆಗಳೇನು, ಜನರ ನಿರೀಕ್ಷೆಗಳೇನು ಎಂಬುದರ ಮೇಲೆ ಬೆಳಕು ಚೆಲ್ಲುವ ಕಾರ್ಯಕ್ರಮ ಮಾಡಿದರೆ ಉತ್ತಮ. ಚುನಾವಣಾ ಆಯೋಗ ಈ ರೀತಿ ಕಾರ್ಯಕ್ರಮಗಳ ಮೇಲೆ ನಿಗಾವಹಿಸಿ ಪ್ರಜಾಪ್ರಭುತ್ವವನ್ನು ಬಲಗೊಳಿಸಲು ಮುಂದಾಗಬೇಕು. ಸಂವಿಧಾನದ ನಾಲ್ಕನೇ ಅಂಗವಾದ ಮಾಧ್ಯಮ ಸಹ ಇದಕ್ಕೆ ಕೈಜೋಡಿಸಬೇಕು. ಮತ ಚಲಾಯಿಸುವುದು ಪ್ರತಿಯೊಬ್ಬ ಪ್ರಜೆಯ ಹಕ್ಕು ಮಾತ್ರ ಅಲ್ಲ. ಅದು ಕರ್ತವ್ಯ ಕೂಡ ಎಂಬುದನ್ನು ನಮ್ಮ ಸಂವಿಧಾನದ 326ನೇ ಪರಿಚ್ಛೇದ ಒತ್ತಿ ಹೇಳಿದೆ. ಇದನ್ನು ಎಲ್ಲರೂ ಗೌರವಿಸಬೇಕು.

–ನಾಗೇಂದ್ರ ಕಿಲಗೆರೆ, ಮೈಸೂರು.

■ ವಿಶ್ವೇಶ್ವರಯ್ಯ ವೃತ್ತಕ್ಕೆ ಸಿಗ್ನಲ್ ದೀಪಗಳನ್ನು ಅಳವಡಿಸಿ



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ವಿಶ್ವೇಶ್ವರಯ್ಯ ವೃತ್ತಕ್ಕೆ (ಕೆ.ಆರ್.ಆಸ್ಪತ್ರೆ ಮುಂಭಾಗ) ಸಿಗ್ನಲ್ ದೀಪಗಳನ್ನು ಅಳವಡಿಸಿ. ಈ ವೃತ್ತಕ್ಕೆ ನಾಲ್ಕು ಮುಖ್ಯವಾದ ರಸ್ತೆಗಳು ಸಂಧಿಸುವುದರಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಅನೇಕ ವಾಹನ ಸವಾರರು ಮುಖಾಮುಖಿಯಾಗಿ ಅಪಘಾತ ಸಂಭವಿಸಿ ವಾಹನಗಳು ಜಖಂಗೊಂಡಿದ್ದು, ಅನೇಕ ವಾಹನ ಸವಾರರಿಗೆ ಪೆಟ್ಟು ಬಿದ್ದು ಆಸ್ಪತ್ರೆಗೆ ದಾಖಲಾಗಿರುವ ಘಟನೆಗಳಿವೆ. ಪ್ರತಿನಿತ್ಯ ಎರಡು ಮೂರು ಅಪಘಾತಗಳು ಸಂಭವಿಸುವುದರಿಂದ ಟ್ರಾಫಿಕ್ ಜಾಮ್ ಆಗಿ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವೃತ್ತದ ಹತ್ತಿರದಲ್ಲೇ ಕೆ.ಆರ್.ಆಸ್ಪತ್ರೆ, ಸರ್ಕಾರಿ ಆಯುರ್ವೇದಿಕ್ ಕಾಲೇಜು ಮತ್ತು ಆಸ್ಪತ್ರೆ, ಕೇಂದ್ರ ನಗರ ಗ್ರಂಥಾಲಯವು ಇರುವುದರಿಂದ ರೋಗಿಗಳಿಗೆ ಮತ್ತು ಓದುಗರಿಗೆ ತುಂಬಾ ಅನಾನುಕೂಲವಾಗುತ್ತಿದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟವರು ಶೀಘ್ರವಾಗಿ ಸಿಗ್ನಲ್ ದೀಪಗಳನ್ನು ಅಳವಡಿಸಿ ಮುಂದಾಗುವ ದೊಡ್ಡ ಅನಾಹುತಗಳನ್ನು ತಡೆಯಬೇಕೆಂದು ತಮ್ಮಲ್ಲಿ ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

■ ಅವ ಅತ್ತ ಇವ ಇತ್ತ !

ಮಾನ್ಯರೆ,

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರವಾಗಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಚುನಾವಣಾ ಪ್ರಚಾರಕ್ಕೆ ಇಳಿದಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇತ್ತ ದರ್ಶನ್ ಮಾತೃ ಸಮಾನರಾದ ಶ್ರೀಮತಿ ಸುಮಲತಾ ಮೈತ್ರಿಕೂಟದ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರವಾಗಿ ಪ್ರಚಾರ ಮಾಡುತ್ತಿದ್ದಾರೆ. ಈ ಬಗ್ಗೆ ಸ್ಪಷ್ಟನೆ ನೀಡಿರುವ ದರ್ಶನ್ ತಾವು ಯಾವುದೇ ಪಕ್ಷದ ಪರ ಪ್ರಚಾರ ಮಾಡುವುದಿಲ್ಲ, ವ್ಯಕ್ತಿ ಪರ ಪ್ರಚಾರ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದೊಂದು ರೀತಿಯಲ್ಲಿ ದರ್ಶನ್ ಸುಮಲತಾ ತರಹ ಕಾಣುವುದಲ್ಲವೇ? ಉತ್ತರ ದಕ್ಷಿಣದಂತಿದ್ದ ಸುಮಾ ಮತ್ತು ದಚ್ಚು ಈಗ ಪೂರ್ವ ಪಶ್ಚಿಮದಂತಾದರೆ? ಗೊತ್ತಿಲ್ಲ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, 9341731661

ದಾಖಲೆ

ಮಾನ್ಯರೆ,
'ಸೀಮಾಪುರುಷ' ರಂತೆ
'ಸೀಮಾ ಕಾಮಿನಿ'ಯರು
(ಪುರೋಗಾಮಿನಿಯರು)
ಏಕಿರಬಾರದು? ಇದ್ದಾರೆ :
ಈ ಕಾಲದಲ್ಲಂತೂ
ದಾಖಲೆ ಅವರದೇ!

ಶ್ರೇಯ

"ಸ್ವಧರ್ಮೇ ನಿಧನಂ ಶ್ರೇಯಃ"
ಎಂಬ ಗೀತೋಕ್ತಿ ಅಂತಿರಲಿ.
('ಸ್ವಧರ್ಮ' ಎಂದರೇನು?)
ಇಷ್ಟಂತೂ ಸತ್ಯ :
"ನಿದ್ದೆಯಲ್ಲೇ ನಿಧನ ಶ್ರೇಯ!"
(ಆಗಲಿ ಎಲ್ಲರ ಧ್ಯೇಯ)

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಅಪ್ಪನಿಂದಲೇ ಮಕ್ಕಳ ಜೀವನ ಒಪ್ಪ...



> ಅಪ್ಪ ಪ್ರೀತಿಯಿಂದ ತಂದುಕೊಡುತ್ತಿದ್ದ ಸಿಹಿತಿನಿಸುಗಳಿಗೆ, ತನಗಿಲ್ಲದಿದ್ದರೂ ತನ್ನ ಮಕ್ಕಳಿಗೆ ಯಾವ ಹಬ್ಬದಂದು ತಪ್ಪದೇ ಬಟ್ಟೆ ತರುತ್ತಿದ್ದ ದಿನಗಳು, ಏನೇ ಕಷ್ಟವಾದರೂ ಅದನ್ನು ಮಕ್ಕಳ ಮುಂದೆ ಹೇಳಿಕೊಳ್ಳಲಾಗದೆ ಕೆಲವೊಮ್ಮೆ ಅವರನ್ನು ಗದರಿ, ಹೊಡೆದು, ಬೈಯ್ದು ಖಳನಾಯಕನಂತೆ ಚಿತ್ರಿತನಾದರೂ ಒಳಗೊಳಗೆ ಮರುಕಪಟ್ಟ ಅಪ್ಪನನ್ನು, ಅವರ ತ್ಯಾಗವನ್ನು ಹಣದ ಮೂಲಕ ಕಟ್ಟಿಕೊಡಲಾಗುವುದೇ? ಅಮ್ಮನ ನೋವು, ತ್ಯಾಗ, ಪ್ರೀತಿ ನಮಗೆ ಅರ್ಥವಾಗುವಷ್ಟು ಅಪ್ಪನ ಮಮಕಾರ, ಪ್ರೀತಿ ಅರ್ಥವಾಗಲಾರದು. ಏಕೆಂದರೆ ಅಪ್ಪ ಎಂದಿಗೂ ಹಣದ ಅಭಾವವನ್ನಾಗಲೀ, ತಾನು ಪಟ್ಟ ಅಥವಾ ಪಡುತ್ತಿರುವ ಕಷ್ಟವನ್ನು ಮಗ / ಮಗಳ ಮುಂದೆ ತೋರಿಸಿಕೊಳ್ಳುವುದಿಲ್ಲ. ನಾನು ಸಾಕಿದೆ, ಬೆಳೆಸಿದೆ, ಓದಿಸಿದೆ ಎಂದು ಗರ್ವದಿಂದ ಹೇಳಿಕೊಳ್ಳುವುದಿಲ್ಲ. ಆದರೆ ನಾವು ಅವರನ್ನು ಅರ್ಥಮಾಡಿಕೊಳ್ಳದೆ ಬಾಯಿಗೆ ಬರುವುದನ್ನೆಲ್ಲಾ ಮಾತಾಡುತ್ತೇವೆ.

ಅಪ್ಪ ಎಂಬ ಪದವೇ ಅದ್ಭುತವಾದುದು. ಅಮ್ಮನ ಪ್ರೀತಿಯನ್ನು ಬಹುಬೇಗನೆ ಗ್ರಹಿಸಿಕೊಳ್ಳುವ ನಮಗೆ ಅಪ್ಪನ ಕಾಳಜಿ, ತ್ಯಾಗ, ಕುಟುಂಬಕ್ಕಾಗಿ ಆತನ ನಿರಂತರ ದುಡಿತ ಎಲ್ಲವೂ ಕಾಣದ ಕೈಯಂತೆ ಮರೆಯಾಗಿಯೇ ನಿಲ್ಲುತ್ತದೆ. ತನಗೆ ಮಗುವಾಗುವ ಸಂದರ್ಭದಿಂದ ಹಿಡಿದು ಮಗು ಜನಿಸಿ, ಬೆಳೆದು ದೊಡ್ಡವನು/ ದೊಡ್ಡವಳಾಗಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವವರೆಗೂ ತನ್ನ ತನು, ಮನ, ಧನವನ್ನು ಅರ್ಪಿಸಿ ಮಕ್ಕಳ ಶ್ರೇಯಸ್ಸಿಗಾಗಿ ತನ್ನೆಲ್ಲಾ ಬಯಕೆಗಳನ್ನು ತ್ಯಾಗ ಮಾಡಿಕೊಂಡು ಬದುಕುವ ಅಪ್ಪನ ಶ್ರಮ ನಮಗೆಂದಿಗೂ ಅರ್ಥವಾಗುವುದೇ ಇಲ್ಲ.

ಅಪ್ಪನ ಬಗ್ಗೆ ಹೇಳುವಾಗ ನನಗೆ ಇತ್ತೀಚೆಗೆ ಪರಿಚಿತರೊಬ್ಬರ ಮನೆಯಲ್ಲಿ ನಡೆದ ಪ್ರಸಂಗವೊಂದು ನೆನಪಿಗೆ ಬರುತ್ತದೆ

'ಏನು ಮಹಾ ನೀನು ಮಾಡಿರೋದು? ಅದೆಷ್ಟು ಖರ್ಚು ಮಾಡಿರುವಿರಿ ಹೇಳಿ, ಅಷ್ಟನ್ನು ತಂದು ನಿಮ್ಮ ಮುಖದ ಮೇಲೆ ಬಿಸಾಕ್ತಿನಿ..... ಏನು ನೀವು ಹೇಳಿದಾಗ ಕೇಳಬೇಕಾ? ನನ್ನ ಜೀವನ ನನ್ನ ಇಷ್ಟ! ಅಪ್ಪ ಆಗಿಬಿಟ್ಟರೆ ನೀವು ಹೇಳಿದ್ದೆಲ್ಲ ಕೇಳಿಕೊಂಡು ಬಿದ್ದಿರಬೇಕಾ ....'? ಈಗ ನೆನ್ನೆ ಮೊನ್ನೆ ಮುದ್ದಾಡಿ ಬೆಳೆಸಿದಂತೆ ಕಾಣುತ್ತಿರುವ ಮಗನ ಬಾಯಿಂದ ಬರುತ್ತಿದ್ದ ಆಣಿಮುತ್ತುಗಳಿವು.

ಈ ಮಾತುಗಳನ್ನು ಕೇಳಿದ ಆ ತಂದೆಯ ಹೃದಯ ಅನುಭವಿಸಿರಬಹುದಾದ ನೋವಿನ ಯಾತನೆಯಾದರೂ ಮಗನಿಗೆ ಇರಲು ಸಾಧ್ಯವೇ? ಖಂಡಿತವಾಗಿಯೂ ಇರಲಾರದು. ಒಂದು ವೇಳೆ ತಿಳಿಯುಮತಿದ್ದರೆ ಅವನು ಈ ತರಹದ ಮಾತುಗಳನ್ನು ಆಡುತ್ತಿರಲಿಲ್ಲ.

ಇದು ಒಂದು ಕುಟುಂಬದ ಪ್ರಶ್ನೆ ಅಲ್ಲ ಇತ್ತೀಚಿನ ದಿನಗಳಲ್ಲಿ ಸರ್ವೆಸಾಮಾನ್ಯವಾಗಿ ಕಂಡು ಬರುತ್ತಿರುವ ದೃಶ್ಯ ನನಗೆ ಈ ತರಹದ ಸನ್ನಿವೇಶಗಳನ್ನು ನೋಡಿದಾಗ ಅನಿಸುವುದೊಂದೆ – ಈ ಮಾತುಗಳನ್ನು ಆಡುವಂತಹ ನಾವು ಒಂದು ದಿನವಾದರೂ ತಂದೆಯ ಜಾಗದಲ್ಲಿ ನಿಂತು ಅವರ ಮನಸ್ಥಿತಿಯನ್ನು ಅರಿಯುವ ಕೆಲಸ ಮಾಡಲು ಸಾಧ್ಯವೇ? ನಿಜ ಇವತ್ತೂ ಲಕ್ಷ, ಲಕ್ಷ ದುಡಿಯಬಹುದು, ನಮಗಾಗಿ ನಮ್ಮ ತಂದೆ–ತಾಯಿ ಮಾಡಿರುವ ಖರ್ಚು–ವೆಚ್ಚಗಳನ್ನು ಬಡ್ಡಿ ಸಮೇತವಾಗಿ ಬೇಕಾದರೂ ತೀರಿಸಬಹುದು. ಆದರೆ ಒಂದು ಕ್ಷಣ, ಒಂದೇ ಒಂದು ಕ್ಷಣ ಅವರು ಸವೆಸಿ ಬಂದ ದಾರಿಯನ್ನು ಎಂದಾದರೊಮ್ಮೆ ಗಮನಿಸಿದರೆ ಅವರ ಮಹತ್ವ ಅರಿವಾಗುತ್ತದೆ. ಇಂದು ನಾವು ದುಡಿಯುವ ಲಕ್ಷಗಟ್ಟಲೇ ಹಣ ಆ ದಿನ ನಮ್ಮ ತಂದೆ ದುಡಿದು ನಮಗಾಗಿ ಎಲ್ಲವನ್ನೂ ತ್ಯಾಗ ಮಾಡಿ ಒಂದೊಂದು ರೂಪಾಯಿಯನ್ನು ಉಳಿಸಿ, ನಮಗಿಷ್ಟವಾದ ಶಾಲೆ – ಕಾಲೇಜಿನಲ್ಲಿ ಓದಿಸಿ, ಬೆಳೆಸಿದ ಮನುಷ್ಯನನ್ನಾಗಿ ಮಾಡಿದ ಪ್ರತಿಫಲ ಎಂದು ಅರಿವಾಗುವುದೇ ಇಲ್ಲ.

ಅಪ್ಪ ಪ್ರೀತಿಯಿಂದ ತಂದುಕೊಡುತ್ತಿದ್ದ ಸಿಹಿತಿನಿಸುಗಳಿಗೆ, ತನಗಿಲ್ಲದಿದ್ದರೂ ತನ್ನ ಮಕ್ಕಳಿಗೆ ಯಾವ ಹಬ್ಬದಂದು ತಪ್ಪದೇ ಬಟ್ಟೆ ತರುತ್ತಿದ್ದ ದಿನಗಳು, ಏನೇ ಕಷ್ಟವಾದರೂ ಅದನ್ನು ಮಕ್ಕಳ ಮುಂದೆ ಹೇಳಿಕೊಳ್ಳಲಾಗದೆ ಕೆಲವೊಮ್ಮೆ ಅವರನ್ನು ಗದರಿ, ಹೊಡೆದು, ಬೈಯ್ದು ಖಳನಾಯಕನಂತೆ ಚಿತ್ರಿತನಾದರೂ ಒಳಗೊಳಗೆ ಮರುಕಪಟ್ಟ ಅಪ್ಪನನ್ನು, ಅವರ ತ್ಯಾಗವನ್ನು ಹಣದ ಮೂಲಕ ಕಟ್ಟಿಕೊಡಲಾಗುವುದೇ? ಅಮ್ಮನ ನೋವು, ತ್ಯಾಗ, ಪ್ರೀತಿ ನಮಗೆ ಅರ್ಥವಾಗುವಷ್ಟು ಅಪ್ಪನ ಮಮಕಾರ, ಪ್ರೀತಿ ಅರ್ಥವಾಗಲಾರದು. ಏಕೆಂದರೆ ಅಪ್ಪ ಎಂದಿಗೂ ಹಣದ ಅಭಾವವನ್ನಾಗಲೀ, ತಾನು ಪಟ್ಟ ಅಥವಾ ಪಡುತ್ತಿರುವ ಕಷ್ಟವನ್ನು ಮಗ / ಮಗಳ ಮುಂದೆ ತೋರಿಸಿಕೊಳ್ಳುವುದಿಲ್ಲ. ನಾನು ಸಾಕಿದೆ, ಬೆಳೆಸಿದೆ, ಓದಿಸಿದೆ ಎಂದು ಗರ್ವದಿಂದ ಹೇಳಿಕೊಳ್ಳುವುದಿಲ್ಲ. ಆದರೆ ನಾವು ಅವರನ್ನು ಅರ್ಥಮಾಡಿಕೊಳ್ಳದೆ ಬಾಯಿಗೆ ಬರುವುದನ್ನೆಲ್ಲಾ ಮಾತಾಡುತ್ತೇವೆ.

ಅಮ್ಮ ನವಮಾಸ ತನ್ನ ಗರ್ಭಗುಡಿಯಲ್ಲಿ ಮಗುವನ್ನು ಜೋಪಾನ ಮಾಡಿ ಜನ್ಮ ನೀಡಿದರೆ, ಅಪ್ಪ ತನ್ನ ಇಡೀ ಜೀವಮಾನವನ್ನೇ ತನ್ನ ಮಗುವಿನ ಭವಿಷ್ಯಕ್ಕಾಗಿ ಮೀಸಲಿಡುತ್ತಾನೆ. ತನಗೆ ಏನೇ ನೋವುಂಟಾದರೂ, ಕೆಲಸದಲ್ಲಿ ಏನೇ ಸಮಸ್ಯೆಗಳು ಎದುರಾದರೂ ಮಡದಿಯ, ಮಕ್ಕಳ ಮುಂದೆ ಅದನ್ನು ತೋರ್ಪಡಿಸಿಕೊಳ್ಳದೇ ತನ್ನ ಬದುಕನ್ನು ಅವರಿಗಾಗಿ ಮೀಸಲಿಡುವ ತ್ಯಾಗದ ಮೂರ್ತಿ ಎಂದರೆ ಅದು ಅಪ್ಪ. ನಮಗೆ ಕೋಪ, ಮನಸ್ತಾಪಗಳು ಬಂದಾಗ ತುಂಬಾ ಸುಲಭವಾಗಿ ತಂದೆಯ ಮೇಲೆ ರೇಗಿಕೊಳ್ಳುವ ಕೆಲಸವನ್ನು ಮಾಡುತ್ತೇವೆ. ಆ ಕ್ಷಣಕ್ಕೆ ನಮಗೆ ನಮ್ಮ ತಪ್ಪಿನ ಅರಿವಾಗುವುದೇ ಇಲ್ಲ.ತಾಯಿಯಾದರೆ ಅತ್ತು ಕರೆದು ನಾಲ್ಕು ಜನರೊಂದಿಗೆ ತನ್ನ ಕಷ್ಟ ಸುಖಗಳನ್ನು ಹೇಳಿಕೊಳ್ಳುತ್ತಾ ತನಗಾದ ದುಃಖವನ್ನು ಮರೆತು ಬಿಡುತ್ತಾಳೆ.ಆದರೆ ತಂದೆ ಯಾರೊಂದಿಗೂ ಹೇಳಿಕೊಳ್ಳಲಾಗದೆ, ಅಳಲಾಗದೇ ಕ್ಷಣ,ಕ್ಷಣದಲ್ಲಿಯೂ ಮಕ್ಕಳ ಏಳಿಗೆಗಾಗಿ ತನ್ನ ಇಡೀ ಬದುಕನ್ನು ಮೀಸಲಿಡುತ್ತಾನೆ.

ತ್ಯಾಗದ ಸಾಕಾರ ಶಿಲ್ಪಿ: ತನ್ನ ಕುಟುಂಬದ ಸಂತೋಷಕ್ಕಾಗಿ ವೈಯಕ್ತಿಕವಾದ ಸಂತಸವನ್ನು, ಖರ್ಚನ್ನು ತ್ಯಾಗ ಮಾಡುವ ತಂದೆ ಸ್ವಲ್ಪ ಹಣ ಉಳಿದರೆ ತಮ್ಮ ಮಕ್ಕಳ ಬಟ್ಟೆಗೆ,ಅವರ ವಿದ್ಯಾಭ್ಯಾಸಕ್ಕೆ ಸಹಾಯವಾಗಬಹುದೆಂದು ಪರಿತಪಿಸುತ್ತಾನೆಯೇ ವಿನಃ ತನಗಾಗಿ ಖರ್ಚು ಮಾಡಿಕೊಳ್ಳಲಾರ.ತನ್ನ ವೈಯಕ್ತಿಕ ಆಸೆಗಳಿಗಿಂತ ಮಕ್ಕಳ ಆಸೆ,ಕನಸುಗಳನ್ನು ಪೂರೈಸುವ ನಿಟ್ಟಿನಲ್ಲಿಯೇ ತನ್ನ ಬದುಕನ್ನು ಮೀಸಲಿಡುವ ತ್ಯಾಗದ ಸಾಕಾರ ಶಿಲ್ಪಿಯೇ ಆಗಿರುತ್ತಾನೆ. ನನಗೆ ಇದನ್ನು ಹೇಳುವಾಗ ಜಿ.ಎಸ್.ಶಿವರುದ್ರಪ್ಪ ಅವರು ಬರೆದಿರುವ ಮುಂಬೈ ಜಾತಕ ಎಂಬ ಕವನದ ಸಾಲುಗಳು ನೆನಪಾಗುತ್ತದೆ. ಮುಂಬೈನಂತಹ ಮಹಾನಗರಗಳ ಚಿತ್ರಣವನ್ನು ಕಟ್ಟಿಕೊಡುವ ಕವಿಯ ಪ್ರಕಾರ ತಂದೆ ಎಂದರೆ ಬೆಳಗಿಂದ ಸಂಜೆ ತನಕ ಕಣ್ಮರೆಯಾಗಿ ಒಮ್ಮೊಮ್ಮೆ ರಜಾದಿನಗಳಲ್ಲಿ ಕಣ್ಣಿಗೆ ಕಂಡು ಕುಳಿತು ಕೆಮ್ಮುವ ಪ್ರಾಣಿ ಎನ್ನುವ ಮೂಲಕ ತನ್ನ ಕುಟುಂಬ ನಿರ್ವಹಣೆಗಾಗಿ ಹಗಲು ರಾತ್ರಿಯನ್ನದೇ ಮಕ್ಕಳ ಪಾಲನೆಗೆ ತನ್ನ ಬದುಕನ್ನೇ ಮೀಸಲಾಗಿ ಇಟ್ಟಿರುವ ತಂದೆ ಮಕ್ಕಳ ಕಣ್ಣಿಗೆ ಕಾಣಿಸಿಕೊಳ್ಳುವುದು ರಜಾದಿನಗಳಲ್ಲಿ ಅದು ಆರೋಗ್ಯ ಹದಗೆಟ್ಟಿರುವ ಕಾರಣದಿಂದ ಕಾಣಿಸಿಕೊಳ್ಳುತ್ತಾನೆ ಎಂದಿದ್ದಾರೆ. ತಂದೆ ಕುಟುಂಬದ ಜವಾಬ್ದಾರಿಯನ್ನು ಹೊತ್ತು ಅದಕ್ಕಾಗಿ ತನ್ನ ಬದುಕನ್ನು ಮೀಸಲಿಟ್ಟಿರುವ ಚಿತ್ರಣವನ್ನು ಈ ಸಾಲಿನಲ್ಲಿ ಗಮನಿಸಬಹುದು

ಒಳಗೊಳಗೆ ಸಂತಸ ಪಡುವ ಗುಣ ಅಪ್ಪನದು : ಸಾಮಾನ್ಯವಾಗಿ ಗಂಡು ಮಕ್ಕಳ ಮೇಲೆ ಕೋಪವನ್ನು ತೋರಿಸಿಕೊಳ್ಳುವ ತಂದೆಯರು ತಮ್ಮ ಮಕ್ಕಳ ಭವಿಷ್ಯ ಉತ್ತಮವಾಗಿರಬೇಕೆಂದು ಕನಸು ಕಾಣುತ್ತಾರೆ. ಅದಕ್ಕಾಗಿ ಕೆಲವೊಮ್ಮೆ ತಮ್ಮ ಮಕ್ಕಳು ತಮ್ಮನ್ನು ಖಳನಾಯಕನಂತೆ ಕಂಡರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳದೇ ತಮ್ಮ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾರೆ. ಮಗನ / ಮಗಳ ಯಶಸ್ಸನ್ನು ಕಂಡು ಒಳಗೊಳಗೆ ಸಂಭ್ರಮ, ಸಂತೋಷ ಪಡುತ್ತಾರೆ. ತಮಗಾದ ಸಂತೋಷವನ್ನು ಮಕ್ಕಳ ಮುಂದೆ ತೋರಿಸಿಕೊಳ್ಳಲಾರರು.ಯಾವಾಗಲೂ ಮಕ್ಕಳ ಬೆನ್ನ ಹಿಂದೆ ನಿಲ್ಲುವ ನೆರಳಿನಂತೆ ಅವರ ಜೀವನದ ಅಡಿಪಾಯವನ್ನು ಭದ್ರಪಡಿಸುವ ಕೆಲಸ ಅಪ್ಪನದು.

ಸ್ನೇಹಮಯಿ : ಒಂದು ಹಂತದವರೆಗೆ ಮಕ್ಕಳನ್ನು ಕಟ್ಟುನಿಟ್ಟಾಗಿ ಬೆಳೆಸುವ ತಂದೆ ಕಾಲ ಸರಿದಂತೆ ಮಕ್ಕಳನ್ನು ಸ್ನೇಹಿತರಂತೆ ಕಾಣುವ ಗುಣವನ್ನು ಉಳ್ಳವನಾಗುತ್ತಾನೆ. ಮಕ್ಕಳ ಸಮಸ್ಯೆಗಳನ್ನು ಪರಿಹರಿಸುವ, ಅವರ ಬೇಕು ಬೇಡಗಳನ್ನು ಪೂರೈಸುವ ಮೂಲಕ ಒಳ್ಳೆಯ ಸ್ನೇಹಮಯಿಯಾಗಿ ಕಾಣಿಸಿಕೊಳ್ಳುತ್ತಾರೆ. ಮಕ್ಕಳ ಬದುಕಿನಲ್ಲಿ ಏನೇ ಸಮಸ್ಯೆ ಎದುರಾದರೂ ಧೈರ್ಯ ತುಂಬಿ, ಆತ್ಮವಿಶ್ವಾಸವನ್ನು ಮಕ್ಕಳಲ್ಲಿ ಬಿತ್ತಿ ಸದೃಢವಾದ ಬದುಕನ್ನು ಬಾಳುವ ರೀತಿಯನ್ನು ತಿಳಿಸುತ್ತಾರೆ. ಏನೇ ಬಂದರೂ ನಮ್ಮ ತಂದೆ ತಮ್ಮ ಜೊತೆಗೆ ನಿಲ್ಲುತ್ತಾರೆಂಬ ಅಚಲವಾದ ನಂಬಿಕೆಯನ್ನು ನೀಡುತ್ತಾರೆ.

ಕಷ್ಟಗಳ ಹೇಳಿಕೊಳ್ಳದ ಕರುಣಾಮಯಿ : ತಾನು ಮಾಡುತ್ತಿರುವ ಕೆಲಸದಲ್ಲಿ ಆಗುವ ನೋವುಗಳನ್ನಾಗಲೀ, ಕಷ್ಟಗಳನ್ನಾಗಲೀ ಮಕ್ಕಳ ಮುಂದೆ ಹೇಳಿಕೊಳ್ಳದೆ ಸದಾ ಕಾಲ ಮಕ್ಕಳ ಏಳಿಗೆಗಾಗಿ ತುಡಿಯುವ, ದುಡಿಯುವ ಜೀವ ಅಪ್ಪನದು. ನಮಗೆ ಬೈಕ್ ಬೇಕು, ಇಂತಹ ಕಾಲೇಜಿನಲ್ಲಿಯೇ ನಾನು ಓದಬೇಕು, ಹೀಗೆ ಮಕ್ಕಳು ತುಂಬಾ ಸುಲಭವಾಗಿ ಹೇಳುವ ಮಾತುಗಳನ್ನು ಕೇಳಿಸಿಕೊಂಡು ಅವರಿಗೆ ತನ್ನ ಹಣಕಾಸಿನ ಪರಿಸ್ಥಿತಿಯನ್ನು ತಿಳಿಸದೇ ಅವರಿಗಾಗಿ ಎಲ್ಲವನ್ನೂ ಮಾಡಿ ಕಷ್ಟಗಳ ಸಹಿಸಿಕೊಂಡು ಬಾಳ್ವೆ ನಡೆಸುವ ಕರುಣಾಮಯಿ ತಂದೆ ಆಗಿರುತ್ತಾರೆ.

ಅಪ್ಪನ ಪ್ರೀತಿ ಬೆಲೆಕಟ್ಟಲಾಗದ್ದು : ಅಪ್ಪನ ಜಾಗವನ್ನು ತುಂಬಲು ಯಾರಿಂದಲೂ ಸಾಧ್ಯವಾಗದು. ನನಗೆ ಅಪ್ಪನ ಬಗೆಗಿನ ವಾತ್ಸಲ್ಯ ಅರ್ಥವಾಗಿದ್ದೆ ಅವರನ್ನು ಕಳೆದುಕೊಂಡಾಗ. ಅಲ್ಲಿಯವರೆಗೂ ಅವರ ಸ್ಥಾನದ ಅರಿವು ಗೊತ್ತಾಗಲೇ ಇಲ್ಲ. ಸಾಯುವ ದಿನ ಕೂಡ ರೇಗಿಕೊಂಡಾಗ ಅಪ್ಪ ಅಮ್ಮನೊಂದಿಗೆ ಹೇಳಿದ ಮಾತು – ನೋಡೆ ನಿನ್ನ ಮಗ ರೇಗಿಕೊಳ್ತಾನೆ. ಆಡಿದ ಮಾತುಗಳೇ ಕೊನೆಯ ಮಾತಾದಾಗ ಆಗುವ ನೋವು ಎದೆಯನ್ನು ಈಗಲೂ ಬಗೆಯುತ್ತಿದೆ. ನನ್ನಪ್ಪ ನನಗೆ ನೆನಪಿರುವ ಹಾಗೆ ಎಂದಿಗೂ ರೇಗಿದವರಲ್ಲ. ನೀನು ಇದನ್ನೇ ಮಾಡು, ಹೀಗೆಯೇ ಇರು ಎಂದು ಹೇಳಿದವರಲ್ಲ. ನಾನು ಅವರ ಪ್ರೀತಿಯನ್ನು, ಕಾಳಜಿಯನ್ನು ಅರ್ಥಮಾಡಿಕೊಳ್ಳಲೇ ಇಲ್ಲ. ಕೊರೊನಾ ಕಾರಣದಿಂದ ಕೆಲಸವಿಲ್ಲದೆ ಇದ್ದಾಗ ಅಪ್ಪ ನಾನು ಮತ್ತು ಆತ್ಮೀಯಗೆಳೆಯ ಪರಮೇಶ ನಾಳೆಯಿಂದ ಚಹಾ(ಟೀ) ಮಾರಿಕೊಂಡು ಬರ್ತಿವಿ ಎಂದಾಗ ನಾನೇ ಮಾಡಿ ಕೊಡ್ತಿನಿ ಮಾಡು, ಕದ್ದರೆ ಕಳ್ಳ ಅಂತಾರೆ, ದುಡಿದು ತಿನ್ನೊಕೆ ಕೆಲಸ ಯಾವುದಾದರೂ ತೊಂದರೆ ಇಲ್ಲ. **ಓದಿರೋದು ತಿಳಿದುಕೊಳ್ಳೋಕೆ, ಕೆಲಸ ಮಾಡೋದು ಜೀವನಕ್ಕೆ** ಎಂದು ಆತ್ಮವಿಶ್ವಾಸ ತುಂಬಿದರು. ಆದರೆ ಅದೇ ದಿನ ಸಂಜೆ ಮನೆಗೆ ಬಂದ ಅಪ್ಪ ಅದನ್ನು ಅಮ್ಮ ಬಳಿ ಹೇಳಿಕೊಂಡು ನನ್ನ ಮಗ ಓದಿದ್ದಾನೆ ಕಣೆ, ಬುದ್ಧಿವಂತ ಕಣೆ, ಏನೋ ಕೊರೊನೊದಿಂದ ಕೆಲಸ ಹೋಗಿರಬಹುದು ಅಷ್ಟೇ ಎಲ್ಲರಿಗೂ ಆಗಿರುವ ಹಾಗೆ ಇವನಿಗೂ ಆಗಿದೆ. ನಾನಿಲ್ವ ಗುಂಡುಕಲ್ಲಿನ ಹಾಗೆ, ನೋಡಿಕೊಳ್ತಿನಿ! ಎಂ.ಎ ಓದಿರೋ ಮಗ ಕಣೆ, ನನ್ಮಗ ಲೆಕ್ಚರ್ ಕಣೆ, ಅಂತವನು ಟೀ ಮಾರೋದಾ? ಬೇಡ ಅಂತ ಹೇಳು ಏನೇ ಆದರೂ ಅವನ ಜೊತೆ ನಾನು ಇರ್ತಿನಿ ಎಂದು ಹೇಳಿ ಒಂದೇ ಸಮ್ಮನೆ ಅತ್ತಿದ್ದ ಅಪ್ಪನನ್ನು ನಾನು ಅರ್ಥಮಾಡಿಕೊಳ್ಳಲು ಆಗಲೇ ಇಲ್ಲ... ಇದ್ದಾಗ ಅರ್ಥಮಾಡಿಕೊಳ್ಳಲಾಗದ ಅವರ ಪ್ರೀತಿ,ಕಾಳಜಿ ಮರೆಯಾದಾಗಲೇ ಹೆಚ್ಚು ಕಾಡಿದ್ದು, ಅರ್ಥವಾದುದು, ಅನುಭವಕ್ಕೆ ಬಂದದ್ದು.

ಇದ್ದಾಗ ಅವರ ಬೆಲೆಯನ್ನು ತಿಳಿಯದೆ ಮರೆಯಾದಾಗ ಪರಿತಪಿಸಿ ದುಃಖಿಸುವ ಬದಲು ಇದ್ದಾಗಲೇ ಅವರ ಪ್ರೀತಿಯನ್ನು ಅರ್ಥಮಾಡಿಕೊಂಡು ಬದುಕುವ ಪರಿಪಾಠವನ್ನು ಬೆಳೆಸಿಕೊಳ್ಳುವ. ಆಗ ಮಾತ್ರ ಅಪ್ಪ ಆಪ್ತವಾಗಬಲ್ಲರು, ಅವರ ಸ್ಥಾನದಲ್ಲೊಮ್ಮೆ ನಿಂತು ಯೋಚಿಸುವ ಆಗ ಮಗದಷ್ಟು ಹತ್ತಿರವಾಗಬಲ್ಲರು, ಆಕಾಶದಷ್ಟು ಎತ್ತರವಾಗಬಲ್ಲರು. ಕಳೆದುಕೊಂಡಾಗ ಅವರ ಪ್ರತಿ ಕ್ಷಣಗಳನ್ನು ನೆನಪಿಸಿಕೊಂಡು ಚಿಂತಿಸುವ ಬದಲು ಅವರಿದ್ದಾಗಲೇ ಅವರ ಪ್ರೀತಿ, ತ್ಯಾಗ, ಮಮಕಾರವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಮೂಲಕ ಅವರ ತ್ಯಾಗದ ಬದುಕಿಗೆ ನಮ್ಮ ಕೈಲಾದಷ್ಟು ಅವರನ್ನು ಚೆನ್ನಾಗಿ ನೋಡಿಕೊಂಡರೆ ಅದು ಸಾರ್ಥಕ ಬದುಕಾಗುತ್ತದೆ.

ಬನ್ನೂರು ಕೆ.ರಾಜು ಸಮಾಜಮುಖಿ ಸಾಹಿತಿ

● ಡಾ.ಶಿವರಾಜಪ್ಪ ಗುಣಗಾನ ● ಅರವತ್ತು ತುಂಬಿದ ವೇಳೆ ಸ್ನೇಹಿತ ಅಭಿನಂದನೆ



ಮೈಸೂರು ತ್ಯಾಗರಾಜ ರಸ್ತೆಯ ಪತ್ರಕರ್ತರ ಭವನದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಹಿರಿಯ ಸಾಹಿತಿ, ಅಂಕಣಕಾರ ಬನ್ನೂರು ಕೆ.ರಾಜು ಅವರಿಗೆ ಅರವತ್ತು ವರ್ಷ ತುಂಬಿದ ಹಿನ್ನೆಲೆಯಲ್ಲಿ ಅವರನ್ನು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ಅಭಿನಂದಿಸಿದರು. ಈ ವೇಳೆ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಹಿರಿಯ ಲೇಖಕಿ ಡಾ.ಲೀಲಾ ಪ್ರಕಾಶ್, ನಟ ಸುಪ್ರೀತ್, ಉದ್ಯಮಿ ರವಿಕುಮಾರ್ ಇತರರಿದ್ದರು.

ಮೈಸೂರು, ಏ.19(ಎಸ್‌ಪಿಎನ್)– ಪ್ರಸ್ತುತ ಸಾಹಿತ್ಯದ ಗಂಧ–ಗಾಳಿ ಇಲ್ಲದವರೂ ಸಾಹಿತ್ಯದ ಹೆಸರಿನಲ್ಲಿ ಸಂಘ–ಸಂಸ್ಥೆಗಳನ್ನು ಕಟ್ಟಿಕೊಂಡು ಸಾಹಿತಿ, ಲೇಖಕರಂತೆ ಪೋಸು ಕೊಡುತ್ತಾರೆ. ಆದರೆ, ಅಪ್ಪಟ ದೇಶಿ ಪ್ರತಿಭೆ ಬನ್ನೂರು ಕೆ.ರಾಜು ಯಾವುದೇ ಆಡಂಬರಗಳಿಗೆ ಅವಕಾಶ ನೀಡದೇ ಸಾಹಿತ್ಯ ಕ್ಷೇತ್ರದಲ್ಲಿ ಸಮಾಜಿಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ಅಭಿಪ್ರಾಯಪಟ್ಟರು.

ಮೈಸೂರು ತ್ಯಾಗರಾಜ ರಸ್ತೆಯ ಪತ್ರಕರ್ತರ ಭವನದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಹಿರಿಯ ಸಾಹಿತಿ, ಅಂಕಣಕಾರ ಬನ್ನೂರು ಕೆ.ರಾಜು ಅವರಿಗೆ ಅರವತ್ತು ವರ್ಷ ತುಂಬಿದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಬನ್ನೂರು ಕೆ.ರಾಜು ಎಲ್ಲಾ ಕ್ಷೇತ್ರದ ಮಾಹಿತಿಗಳು ಅವರ ಜ್ಞಾನ ಭಂಡಾರದಲ್ಲಿ ಅಡಕವಾಗಿದೆ. ಪ್ರಖ್ಯಾತ ರಾಜಕಾರಣಿ, ಸಾಹಿತಿ, ಲೇಖಕ, ರಂಗಕರ್ಮಿ ಹಾಗೂ ವಿಜ್ಞಾನಿಗಳೂ ಸೇರಿದಂತೆ ಪ್ರತಿಯೊಬ್ಬ ಸಾಧಕರ ಬಗ್ಗೆ ಬೆರಳ ತುದಿಯಲ್ಲಿ ಮಾಹಿತಿ ಹೊಂದಿದ್ದಾರೆ. ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಅಲ್ಲದೆ, ಹಲವು ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆದು ನಾಡಿನ ಮನೆ ಮಾತಾಗಿದ್ದಾರೆ ಎಂದು ತಿಳಿಸಿದರು.

ಸಾಹಿತಿ ಬನ್ನೂರು ಕೆ.ರಾಜು, ತಮ್ಮ ಬರವಣಿಗೆ ಮೂಲಕ ಸಮಾಜದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ. ಇವರ ಯಶಸ್ಸಿಗೆ ಪತ್ನಿ ಮಹಾಲಕ್ಷ್ಮಿ, ಪುತ್ರ ಧನಸ್ಸು ಸಾಥ್ ನೀಡಿದ್ದಾರೆ. ಅಲ್ಲದೆ, ಇವರ ಸಾಧನೆಗಳ ಪಟ್ಟಿ ಮಾಡಿದರೆ ಮೂವತ್ತು ಪುಟಗಳಷ್ಟಿದೆ ಎಂದರು.

ಬನ್ನೂರು ಕೆ.ರಾಜು ಅವರ ನಡೆ–ನುಡಿ ಅಲ್ಲದೆ, ಅವರ ಹೃದಯದಲ್ಲೂ ಸರಸ್ವತಿ ನೆಲೆಸಿದ್ದಾಳೆ. ಯಾವುದೇ ದೇಶದಲ್ಲಿ ಕಲೆ, ನಾಟಕ, ಸಾಹಿತ್ಯಕ್ಕೆ ಬಹಳ ಮಹತ್ವವಿದೆ. ಆಯಾಯ ನೆಲೆಗಟ್ಟಿನ ಪ್ರದರ್ಶಕ ಕಲೆಗಳು, ಆ ಪ್ರಾಂತ್ಯದ ಸಾಂಸ್ಕೃತಿಕ ಜೀವನದ ಒಂದು ಭಾಗ. ಹಾಗಾಗಿ ಒಂದೇ ದೇಶಕ್ಕೆ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳು ಶ್ರೀಮಂತವಾಗಿದ್ದರೆ, ಆ ದೇಶಗಳಿಗೂ ಉತ್ತಮ ಹೆಸರು ಬರುತ್ತವೆ. ಅಂತೆಯೇ ಯಾವ ವ್ಯಕ್ತಿ ಬೇರೆ ಬೇರೆ ಕ್ಷೇತ್ರದಲ್ಲಿ ಸಾಧನೆ ಮಾಡಿದರೆ, ಅವರ ಹುಟ್ಟಿನ ಸ್ಥಳಕ್ಕೂ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ ಎಂದರು.

ಬನ್ನೂರು ಕೆ.ರಾಜು ಮಕ್ಕಳಿಗಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದು, ಮೊದಲ ಕೃತಿ 'ಹೃದಯವಂತ' ಪುಸ್ತಕ ದಿಂದ ಆರಂಭವಾದ ಬರವಣಿಗೆ, ಹಲವು ಪುಸ್ತಕಗಳನ್ನು ಬರೆದು ನಾಡಿನ ಪ್ರಸಿದ್ಧ ಲೇಖಕರ ಸಾಲಿನಲ್ಲಿ ಬನ್ನೂರು ಕೆ.ರಾಜು ಕೂಡ ಒಬ್ಬರು. ಹಿರಿಯ ಅಂಕಣಕಾರ ಹೆಚ್‌ಎಸ್‌ಕೆ ನಂತರ ಬನ್ನೂರು ಕೆ.ರಾಜು ಆ ಸ್ಥಾನವನ್ನು ಅಲಂಕರಿಸಿದ್ದಾರೆ. ಇಂತಹ ಪ್ರತಿಭಾವಂತರನ್ನು ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸದಸ್ಯರು ಗುರುತಿಸಿ ಅಭಿನಂದಿಸಿರುವುದು ಉತ್ತಮ ಬೆಳವಣಿಗೆ ಎಂದರು.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದು, ಹಿರಿಯ ಲೇಖಕಿ ಡಾ.ಲೀಲಾ ಪ್ರಕಾಶ್, ನಟ ಸುಪ್ರೀತ್, ಉದ್ಯಮಿ ರವಿಕುಮಾರ್, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ನುಡಾ ಗೋಪಾಲ್, ಚನ್ನಬಸಪ್ಪ ಸೇರಿದಂತೆ ಇತರರು ಹಾಜರಿದ್ದರು. ಈ ವೇಳೆ ಅನೇಕ ಸಂಘ–ಸಂಸ್ಥೆಗಳ ಮುಖಂಡರು, ಕನ್ನಡ ಪರ ಹೋರಾಟಗಾರರು ಹೂಗುಚ್ಛ ನೀಡಿ, ಗೌರವಿಸಿದರು.

ಎಚ್‌ಡಿಕೆಗೆ ಮಹಿಳಾ ಆಯೋಗ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆ



ಬೆಂಗಳೂರು: ಗ್ಯಾರಂಟಿ ಯೋಜನೆಗಳಿಂದ ಹಳ್ಳಿಯ ತಾಯಂದಿರು ದಾರಿ ತಪ್ಪಿದ್ದಾರೆ ಎಂದು ಚುನಾವಣಾ ಪ್ರಚಾರ ವೇಳೆ ಹೇಳಿಕೆ ನೀಡಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ರಾಜ್ಯ ಮಹಿಳಾ ಆಯೋಗ ನೀಡಿದ್ದ ನೋಟಿಸ್‌ಗೆ ಹೈಕೋರ್ಟ್ ತಡೆ ನೀಡಿದೆ.


ಇದನ್ನು ಪ್ರಶ್ನಿಸಿ ಎಚ್.ಡಿ. ಕುಮಾರಸ್ವಾಮಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕುಮಾರಸ್ವಾಮಿ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಎ.ವಿ.ನಿಶಾಂತ್, ಆರೋಪಕ್ಕೆ ಸಂಬಂಧಿಸಿದಂತೆ ಆಯೋಗವು ಕುಮಾರಸ್ವಾಮಿ ಅವರಿಗೆ ನೋಟಿಸ್ ನೀಡಿ ಖುದ್ದು ಹಾಜರಾಗಲು ಸೂಚಿಸಿದೆ. ಆದರೆ, ಈ ನೋಟಿಸ್ ಪೂರ್ವಗ್ರಹ ಪೀಡಿತ ಭಾವನೆಯಿಂದ ಕೂಡಿದ್ದು ಸ್ವಾಭಾವಿಕ ನ್ಯಾಯ ತತ್ವಗಳಿಗೆ ವಿರುದ್ಧವಾಗಿದ್ದು, ಇದನ್ನು ರದ್ದುಗೊಳಿಸಬೇಕು ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ನೋಟಿಸ್‌ಗೆ ತಡೆ ನೀಡಿ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಮಹಿಳಾ ಆಯೋಗದ ಅಧ್ಯಕ್ಷರು ಜಾರಿ ಮಾಡಿರುವ ನೋಟಿಸ್‌ಗೆ ಅರ್ಜಿ ಇತ್ಯರ್ಥವಾಗುವರೆಗೂ ತಡೆ ವಿಧಿಸಲಾಗಿದೆ ಎಂದು ಆದೇಶಿಸಿ ವಿಚಾರಣೆ ಮುಂದೂಡಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com




ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಾರ್ಡ್ ನಂಬರ್ 55ರ ಮೇದರಕೇರಿಯಲ್ಲಿ ಮತಯಾಚಿಸಿದರು. ಬಿಜೆಪಿ ಮುಖಂಡರಾದ ಸಂದೀಪ್, ಭಾಸ್ಕರ್, ಧರ್ಮೇಂದ್ರ, ಧನುಷ್ ಗಿಡ ನೀಡುವ ಮೂಲಕ ಅವರನ್ನು ವಾರ್ಡಿಗೆ ಸ್ವಾಗತಿಸಿದರು.


ವರುಣಾ ಜೆಡಿಎಸ್ ಹಾಗೂ ಬಿಜೆಪಿ ಸಮನ್ವಯ ಸಭೆಗೆ ಹಾಜರಾದ ಮಾಜಿ ಶಾಸಕ ಅಶ್ವಿನ್ ಕುಮಾರ್ ಹಾಗೂ ಶಾಸಕ ಜಿ.ಟಿ.ಹರೀಶ್‌ಗೌಡ ಅವರನ್ನು ಅಭಿನಂದಿಸಲಾಯಿತು. ವರುಣಾ ಜೆಡಿಎಸ್ ಅಧ್ಯಕ್ಷ ಬಾಲಕೃಷ್ಣ, ವರುಣಾ ಹೋಬಳಿಯ ಅಧ್ಯಕ್ಷ ಬಾಬು, ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಮಂಜು, ನವೀನ್, ಉಮೇಶ್, ಮಹೇಶ್, ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಮೋದಿಗೆ ಜಿಂದಾಬಾದ್ ಹೇಳೋರು ಅಪ್ಪನಿಗೆ ಹುಟ್ಟಿದವರಲ್ಲ!

● ಪ್ರೊ.ಮಹೇಶ್‌ಚಂದ್ರಗುರು ವಿವಾದಾತ್ಮಕ ಹೇಳಿಕೆ ● ರೈತರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮೋದಿ ಆಳ್ವಿಕೆಯಲ್ಲಿ ಮಸಣದ ಹೂವಾಗಿದ್ದಾರೆ

ಮಂಡ್ಯ,ಏ.19– ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುವ ಭರದಲ್ಲಿ 'ಮೋದಿಗೆ ಜಿಂದಾಬಾದ್ ಹೇಳೋರು ಅಪ್ಪನಿಗೆ ಹುಟ್ಟಿದವರಲ್ಲ' ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮಗೆ ಕರ್ನಾಟಕ ಜಿಂದಾಬಾದ್, ಭಾರತ ಜಿಂದಾಬಾದ್ ಬೇಕು. ನಾವು ಗುಲಾಮಗಿರಿ ಒಪ್ಪಿಕೊಳ್ಳಲು ಸಿದ್ಧರಿಲ್ಲ. ಮೋದಿಗೆ ಜಿಂದಾಬಾದ್ ಹೇಳೋರು ಅಪ್ಪನಿಗೆ ಹುಟ್ಟಿದವರಲ್ಲ ಎಂದು ಹೇಳಿದರು.

ಪ್ರಸ್ತುತ ಹಿಂದುತ್ವ–ಬಹುತ್ವದ ನಡುವೆ ಸಂಘರ್ಷ ನಡೆಯುತ್ತಿದೆ. ಹಿಂದುತ್ವದಲ್ಲಿ ಯಾರು ಸುರಕ್ಷಿತರಾಗಿದ್ದಾರೆ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕಿದೆ. ಹಿಂದುತ್ವದಲ್ಲಿ ರಾಜಪ್ರಭುತ್ವದ ಪ್ರತಿನಿಧಿಗಳು ಸುಖವಾಗಿದ್ದಾರೆ. ಆದರೆ, ಸಮಸ್ತ ಹಿಂದುಳಿದವರು ಸುರಕ್ಷಿತರಾಗಿಲ್ಲ. ಇಂತಹ ಆಡಳಿತ ನಮಗೆ ಬೇಕೇ ಎಂದು ಪ್ರಶ್ನಿಸಿದರು. ಪ್ರಧಾನಿ ಮೋದಿ ಅವರ ಹತ್ತು ವರ್ಷದ ಆಡಳಿತದಲ್ಲಿ ರೈತರು ಸುರಕ್ಷಿತವಾಗಿಲ್ಲ. ಮೋದಿ ಆಡಳಿತದಲ್ಲಿ ರೈತರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮಸಣದ ಹೂವಾಗಿದ್ದಾರೆ. ವ್ಯಾಪಾರಿಗಳು, ಬಂಡವಾಳಶಾಹಿಗಳು, ರಾಜಪ್ರಭುತ್ವಕ್ಕೆ ಸೇರಿರುವವರನ್ನು ಮಾತ್ರ ಮೋದಿ ಪ್ರಭುತ್ವ ಕಾಪಾಡುತ್ತಿದೆ ಎಂದು ಕಿಡಿಕಾರಿದರು.


ಸುದ್ದಿಗೋಷ್ಠಿಯಲ್ಲಿ ಪ್ರಾಧ್ಯಾಪಕ ಪ್ರೊ.ಮಹೇಶ್ ಚಂದ್ರಗುರು ಮಾತನಾಡಿದರು. ಈ ವೇಳೆ ಪ್ರಗತಿಪರ ಮುಖಂಡರಾದ ಮಾ. ರಾಮಕೃಷ್ಣ, ಜಯಪ್ರಕಾಶ್‌ಗೌಡ, ಮಾಯೀಗೌಡ, ಪ್ರೊ.ನಾಗರಾಜು, ಡಾ.ಪ್ರದೀಪ್ ಕುಮಾರ್ ಉಪಸ್ಥಿತರಿದ್ದರು.

ಮೋದಿ ಆಡಳಿತದ ಹತ್ತು ವರ್ಷದ ಅವಧಿಯಲ್ಲಿ ರಾಕ್ಷಸಿ ಮತ್ತು ಪೈಶಾಚಿಕ ಪ್ರಭುತ್ವವಿದೆ. ಕೆಳವರ್ಗದವರು ಮತ್ತಷ್ಟು ತುಳಿತಕ್ಕೊಳಗಾಗಿದ್ದಾರೆ. ಹಾಗಾಗಿ ಬಹುಜನರು ಎಚ್ಚೆತ್ತುಕೊಂಡು ಹೀಗಿರುವ ಕೆಟ್ಟ ಸರ್ಕಾರವನ್ನು ಕಿತ್ತು ಹಾಕಬೇಕು ಎಂದು ಹೇಳಿದರು. ಬಿಜೆಪಿಯವರು ಸಂವಿಧಾನವನ್ನು ಬದಲಿಸುವ ಹೇಳಿಕೆ ಕೊಡುತ್ತಾರೆ. ಆದರೆ ಈ ದೇಶದಲ್ಲಿ ಸಂವಿಧಾನ ಬದಲಾವಣೆ ವಿಷಯಕ್ಕೆ ಬಂದರೆ ರಕ್ತಪಾತವಾಗುತ್ತದೆ. ಇದರ ಅರಿವಾಗಿ ಬಿಜೆಪಿ ನಾಯಕರು ಅಂಬೇಡ್ಕರ್ ಅವರೇ ಹುಟ್ಟಿ ಬಂದರೂ ಸಂವಿಧಾನ ಬದಲಾವಣೆ ಮಾಡುವುದಿಲ್ಲ ಎಂದು ಹೇಳ ಹೊರಟಿದ್ದಾರೆ. ಸಂವಿಧಾನ ಬದಲಾವಣೆ ಮಾಡುವ ಹೇಳಿಕೆ ಕೊಡುವವರ ವಿರುದ್ಧ ನಮ್ಮ ಹೋರಾಟವಿದ್ದು, ಜನರು ಸಂವಿಧಾನ ವಿರೋಧಿಗಳನ್ನು ಬೆಂಬಲಿಸಬಾರದು ಎಂದು ಮನವಿ ಮಾಡಿದರು.

ಕೇಂದ್ರದಲ್ಲಿ ಬಿಜೆಪಿ ರೀತಿಯ ಕೆಟ್ಟ ಸರ್ಕಾರವನ್ನು ಎಂದೂ ನಾವು ನೋಡಿಲ್ಲ. ಹಿಂದೆ ನೆಹರು ಹಾಗೂ ಇಂದಿರಾಗಾಂಧಿ ಉತ್ತಮ ಸರ್ಕಾರಗಳನ್ನು ನೀಡಿದ್ದರು. ಪ್ರಸ್ತುತ ರಾಜ್ಯದಲ್ಲಿ ಸಿದ್ದರಾಮಯ್ಯ ಕೊಟ್ಟಿರುವ ಐದು ಗ್ಯಾರಂಟಿಗಳು ಜನರಿಗೆ ಬಹಳ ಅನುಕೂಲವಾಗುತ್ತಿವೆ. ಗ್ಯಾರಂಟಿಗಳ ಅನುಕೂಲತೆಗಳನ್ನು ಜನರು ಬಳಸಿಕೊಳ್ಳುತ್ತಿದ್ದಾರೆ. ನಿವೃತ್ತ ಉಪನ್ಯಾಸಕ ಪ್ರೊ.ಬಿ.ಜಯಪ್ರಕಾಶಗೌಡ ಮಾತನಾಡಿ, ಈ ದೇಶದಲ್ಲಿ ಆಗುತ್ತಿರುವ ನಡವಳಿಕೆ, ನೀಡುತ್ತಿರುವ ಹೇಳಿಕೆಗಳ ಬಗ್ಗೆ ಚಿಂತನೆ ನಡೆಯಬೇಕಿದೆ. ಸಾಮಾನ್ಯ ಕುಟುಂಬದ ವ್ಯಕ್ತಿ ಬದುಕುವ ಅವಕಾಶವನ್ನು ಸಂವಿಧಾನ ಕಲ್ಪಿಸಿದೆ. ಆದರೆ, ಸಂವಿಧಾನದ ಆಶಯಗಳು ಕುಂಠಿತವಾಗುತ್ತಿರುವ ಹಿನ್ನೆಲೆಯಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಬೇಕಿದ್ದು, ಈ ನಿಟ್ಟಿನಲ್ಲಿ ಲೋಕಸಭಾ ಚುನಾವಣೆಯಲ್ಲಿ ಉತ್ತಮರನ್ನು ಆಯ್ಕೆ ಮಾಡಬೇಕು ಎಂದರು. ಸಾಹಿತಿ ಕೆ.ಮಾಯಿಗೌಡ ಮಾತನಾಡಿ, ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ದೊಡ್ಡ ಗಂಡಾಂತರ ಎದುರಾಗಿದ್ದು, ಈ ನಿಟ್ಟಿನಲ್ಲಿ ಮತದಾರರು ಎಚ್ಚೆತ್ತುಕೊಂಡು ಪ್ರಜಾಪ್ರಭುತ್ವದ ನಾಶಕ್ಕೆ ಮುಂದಾಗಿರುವ ಬಿಜೆಪಿಯನ್ನು ದೂರ ಇಡಬೇಕು ಎಂದು ತಿಳಿಸಿದರು.

ಸಂವಿಧಾನ ಉಳಿಸಿ ಎಂದು ಕೇಳುವ ದುಸ್ಥಿತಿ ಈಗ ಎದುರಾಗಿದೆ. ಹಾಗಾಗಿ ನಾವುಗಳು ಎಚ್ಚೆತ್ತುಕೊಳ್ಳಬೇಕಿದೆ. ರಾಜಕಾರಣಿಗಳು ವಿದ್ವಾಂಸರು ಬರಹಗಾರರು ಆಗಿರಬೇಕು. ಆದರೆ ಇಲ್ಲಿ ಬಟ್ಟೆ ಅದಕ್ಕೊಂದು ಬಣ್ಣ, ದೇವರು, ಧರ್ಮದ ಹೆಸರಿನಲ್ಲಿ ರಾಜಕೀಯ ನಡೆಯುತ್ತಿದೆ ಎಂದು ವಿಷಾದಿಸಿದರು. ಪ್ರಗತಿಪರ ಮುಖಂಡರಾದ ಪ್ರೊ.ನಾಗರಾಜು, ಡಾ.ಪ್ರದೀಪ್‌ಕುಮಾರ್, ರಾಮಕೃಷ್ಣ ಉಪಸ್ಥಿತರಿದ್ದರು.

ಮಹೇಶ್‌ಚಂದ್ರ ಗುರು ಹೇಳಿಕೆಗೆ ಜತೆಯಲ್ಲಿದ್ದವರ ವಿರೋಧ; ಸುದ್ದಿಗೋಷ್ಠಿ ಸ್ಥಗಿತ

ಮಂಡ್ಯ: ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ಮೋದಿ ಅವರ ಕುರಿತು ವಿವಾದಾತ್ಮಕ ಹೇಳಿಕೆ ನೀಡುತ್ತಿದ್ದಂತೆಯೇ ಇದಕ್ಕೆ ವಿರೋಧ ವ್ಯಕ್ತಪಡಿಸಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ಜಯಪ್ರಕಾಶ್‌ಗೌಡ ಹಾಗೂ ಸಾಹಿತಿ ಮಾಯಿಗೌಡ ಸುದ್ದಿಗೋಷ್ಠಿಯನ್ನು ಬಹಿಷ್ಕರಿಸಿ, ಎದ್ದು ಹೊರನಡೆದರು. ಬಳಿಕ ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಪ್ರೊ.ಜಯಪ್ರಕಾಶ್‌ಗೌಡ, ನಾವು ಮಹೇಶ್‌ಚಂದ್ರ ಗುರು ಜೊತೆಯಲ್ಲಿ ಸಂವಿಧಾನದ ಬಗ್ಗೆ ನಮ್ಮ ಅಭಿಪ್ರಾಯ ಮಂಡಿಸಲು ಸುದ್ದಿಗೋಷ್ಠಿ ಕರೆಯಲಾಗಿತ್ತು. ಆದರೆ ಆ ಸುದ್ದಿಗೋಷ್ಠಿಯಲ್ಲಿ ಮಹೇಶ್‌ಚಂದ್ರ ಗುರು ಪ್ರಧಾನಿ ಮೋದಿ ಅವರ ಬಗ್ಗೆ ಲಘುವಾಗಿ ಮಾತನಾಡಿದ್ದು ಕೇಳಿ ದಿಗ್ಭ್ರಾಂತವಾಗಿದೆ. ಒಬ್ಬ ಪ್ರಾಧ್ಯಾಪಕ ತನ್ನ ಘನತೆಗೆ ತಕ್ಕಂತೆ ಮಾತನಾಡಬೇಕು. ಶಿಷ್ಟ ಹಾಗೂ ಗೌರವಯುತ ಭಾಷೆಯಲ್ಲಿ ಮಾತನಾಡುತ್ತಾರೆಂಬ ನಂಬಿಕೆಯಿಂದ ಅವರೊಂದಿಗೆ ಸುದ್ದಿಗೋಷ್ಠಿ ವೇದಿಕೆ ಹಂಚಿಕೊಂಡೆ. ಆದರೆ ಇಂತಹ ವ್ಯಕ್ತಿತ್ವವುಳ್ಳ ವ್ಯಕ್ತಿಯ ಜೊತೆಗೆ ವೇದಿಕೆ ಹಂಚಿಕೊಂಡಿದ್ದು ನನಗೆ ನಾಚಿಕೆ ಎನ್ನಿಸುತ್ತಿದ್ದು, ಅವರ ಹೇಳಿಕೆಯನ್ನು ಖಂಡಿಸುತ್ತಾ ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸುವೆ ಎಂದು ತಿಳಿಸಿದ್ದಾರೆ.

ಮಹೇಶ್‌ಚಂದ್ರ ಗುರು ವಿರುದ್ಧ ಕ್ರಮಕ್ಕೆ ಎಸ್ಪಿಗೆ ದೂರು



ಮಂಡ್ಯ: ಪ್ರಧಾನಿ ನರೇಂದ್ರ ಮೋದಿ ಜಿಂದಾಬಾದ್ ಹೇಳುವವರು ಅಪ್ಪನಿಗೆ ಹುಟ್ಟಿದವರಲ್ಲ ಎಂದು ಹೇಳಿಕೆ ನೀಡಿರುವ ಪ್ರೊ.ಮಹೇಶ್ ಚಂದ್ರಗುರು ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಬಿಜೆಪಿ ವತಿಯಿಂದ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ದೂರು ಸಲ್ಲಿಸಲಾಗಿದೆ.

ಪ್ರಗತಿಪರ ಚಿಂತಕ ಪ್ರೊ.ಮಹೇಶ್ ಚಂದ್ರಗುರು, ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ, ಪ್ರಧಾನಿ ಮೋದಿಯವರ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದಾರೆ. ಇದು ಅಕ್ಷಮ್ಯ ಅಪರಾಧವಾಗಿದ್ದು, ಈ ಬಗ್ಗೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂದು ಕಾಂಗ್ರೆಸ್ ಪಕ್ಷದ ಪರಿಚಾರಕರ ರೀತಿ ಮಾತನಾಡಿ, ವಿವಾದಾತ್ಮಕ ಹೇಳಿಕೆ ನೀಡಿದ್ದು, ಇದು ಒಬ್ಬ ದೇಶದ ಪ್ರಧಾನಿ ಹಾಗೂ ಅವರಿಗೆ ಮತ ನೀಡಿರುವ ಕೋಟ್ಯಾಂತರ ಮತದಾರರಿಗೆ ಮಾಡಿರುವ ಅಪಮಾನವಾಗಿದೆ. ಹಾಗಾಗಿ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಬಗ್ಗೆ ಬಿಜೆಪಿ ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಮಾತನಾಡಿ, ಅಂಬೇಡ್ಕರ್ ಅವರು ಕಾಂಗ್ರೆಸ್ ಉರಿಯುತ್ತಿರುವ ಮನೆ ಅಲ್ಲಿಗೆ ಯಾರೂ ಹೋಗಬೇಡಿ ಎಂದು ಅವರ ಪತ್ರಿಕೆಯಲ್ಲಿ ಮನವಿ ಮಾಡಿಕೊಂಡಿದ್ದರು. ಅಂಬೇಡ್ಕರ್ ನಿಧನರಾದ ನಂತರ ದೆಹಲಿಯಲ್ಲಿ ಅವರ ಪಾರ್ಥೀವ ಶರೀರದ ಅಂತ್ಯಕ್ರಿಯೆಗೆ ನೆಹರು ಅವಕಾಶ ಮಾಡಿಕೊಡಲಿಲ್ಲ. ಅದೇ ನೆಹರು ತಾವು ಧರಿಸುವ ಇಸ್ತ್ರೀ ಮಾಡಿದ ಬಟ್ಟೆಯನ್ನು ಲಂಡನ್‌ನಿಂದ ವಿಮಾನದಲ್ಲಿ ತರಿಸಿಕೊಳ್ಳುತ್ತಿದ್ದರು. ಅಂಬೇಡ್ಕರ್ ಅವರ ಪಾರ್ಥೀವ ಶರೀರವನ್ನು ಮುಂಬೈಗೆ ಸಾಗಿಸಲು ಕನಿಷ್ಠ ಒಂದು ವಿಮಾನವನ್ನಾದರೂ ಮಾಡಿಕೊಡಲಿಲ್ಲ. ಇಂತಹ ದಲಿತ ವಿರೋಧಿ ಕಾಂಗ್ರೆಸ್‌ನ ಏಜೆಂಟರಂತೆ ಮಹೇಶ್ ಚಂದ್ರಗುರು ಮಾತನಾಡಿರುವುದು ಅವರ ಘನತೆಗೆ ತಕ್ಕುದಾದುದಲ್ಲ ಎಂದು ಹೇಳಿದರು. ಬಿಜೆಪಿ ಎಂದಿಗೂ ದಲಿತ ವಿರೋಧಿಯಾಗಿಲ್ಲ. ಅಂಬೇಡ್ಕರ್‌ಗೆ ಗೌರವ ಕೊಟ್ಟಿದೆ. ಅಂಬೇಡ್ಕರ್ ಬಾಳಿ ಬದುಕಿದ ತಾಣಗಳನ್ನು ಪಂಚಕ್ಷೇತ್ರಗಳನ್ನಾಗಿ ಅಭಿವೃದ್ಧಿ ಮಾಡಿದೆ. ಸಂವಿಧಾನ ದಿನವನ್ನು ಆಚರಿಸುವ ಮೂಲಕ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರಿಗೆ ಗೌರವ ತಂದುಕೊಡುವ ಕೆಲಸ ಮಾಡಿದೆ. ಸಂವಿಧಾನ ಕರ್ತೃ ಅಂಬೇಡ್ಕರ್ ಅವರಿಗೆ ಭಾರತ ರತ್ನ ಕೊಡಲಿಲ್ಲ. ನೆಹರು ಮತ್ತು ಇಂದಿರಾಗಾಂಧಿ ಭಾರತ ರತ್ನ ಪಡೆದಿದ್ದಾರೆ. ಈಗ ದಲಿತರ ಪರ ಮಾತನಾಡುವ ಮೂಲಕ ಗೋಸುಂಬೆ ಬಣ್ಣವನ್ನು ಪ್ರದರ್ಶಿಸುತ್ತಿದೆ ಎಂದು ಕಿಡಿಕಾರಿದರು. ಮುಖಂಡರಾದ ಹನುಮಂತು, ನಿತ್ಯಾನಂದ, ಬಿ.ಕೃಷ್ಣ, ಪ್ರಸನ್ನ, ನಾಗಾನಂದ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.


ಮೈಸೂರು ನಗರ ಬಿಜೆಪಿ ಎಸ್‌ಟಿ ಮೋರ್ಚಾ ವತಿಯಿಂದ ಕ್ಯಾತಮಾರನಹಳ್ಳಿಯಲ್ಲಿ ಯದುವೀರ್ ಪರ ಮತಯಾಚನೆ ಮಾಡಲಾಯಿತು. ಎಸ್‌ಟಿ ಮೋರ್ಚಾದ ನಗರಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ , ಪ್ರಧಾನ ಕಾರ್ಯದರ್ಶಿ ನಾರಾಯಣ ಲೋಲಪ್ಪ, ಸುಣ್ಣದಕೇರಿ ಕೃಷ್ಣನಾಯಕ, ಉಪಾಧ್ಯಕ್ಷರಾದ ಲೋಕೇಶ್ ಜಯಸಿಂಹ, ಅರುಣ, ಮಹದೇವ, ಕಿರಣ್, ಮುಕುಂದ, ಮಹಾದೇವಪ್ಪ ಮತ್ತಿತರಿದ್ದರು

ರಾಜ್ಯದ ಅಭಿವೃದ್ಧಿ ಬಗ್ಗೆ ರಾಹುಲ್ ಉತ್ತರಿಸಲಿ



ಮೈಸೂರು, ಏ.19–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗ್ಯಾರಂಟಿ ಹೊರತಾಗಿ ರಾಜ್ಯದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರಿಗೆ ತಿಳಿಸಬೇಕು ಎಂದು ಬಿಜೆಪಿ ಮುಖಂಡರಾದ ಮೈಕ ಪ್ರೇಮ್‌ಕುಮಾರ್ ಆಗ್ರಹಿಸಿದರು.

ನಗರದ ದೇವರಾಜ ಮಾರ್ಕೆಟ್, ಮನ್ನಾರ್ಸ್ ಮಾರ್ಕೆಟ್ ಮತ್ತು ಕೆ ಟಿ ಸ್ಟ್ರೀಟ್ ಅಂಗಡಿ ಮುಂಗಟ್ಟುಗಳಿಗೆ ತೆರಳಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಪರ ಕೇಂದ್ರ ಸರ್ಕಾರದ ಸಾಧನೆಯ ಕರಪತ್ರ ವಿತರಿಸಿ ಬಿರುಸಿನ ಮತಯಾಚನೆ ಮಾಡಿದರು. ನಂತರ ಮಾತನಾಡಿದ ಅವರು ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 11 ತಿಂಗಳುಗಳು ಕಳೆದರೂ ಯಾವುದೇ ಅಭಿವೃದ್ಧಿ ಕೆಲಸ ನಡೆದಿಲ್ಲ. ಇದರ ಕಾರಣವನ್ನು ರಾಹುಲ್ ಗಾಂಧಿ ಜನರ ಮುಂದಿಡಲಿ. ಶಾಸಕರ ನಿಧಿಯ ಹಣ ಬಿಡುಗಡೆಯಾಗಿಲ್ಲ. ಹಣಕಾಸು ಹೊಂದಾಣಿಕೆಗೆ ಪರದಾಡುತ್ತಿರುವ ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿ ಹಂತ ತಲುಪಿದೆ ಎಂದು ದೂರಿದರು. ಶ್ರೀರಾಮ ಕಾಲ್ಪನಿಕ ವ್ಯಕ್ತಿ ಎಂದಿದ್ದ ಕಾಂಗ್ರೆಸ್ ಈಗ ಚುನಾವಣೆಯ ವೇಳೆ ರಾಮನಾಮ ಜಪಿಸುತ್ತಿದೆ ಎಂದು ಟೀಕಿಸಿದ ಅವರು, ನಕ್ಸಲ್ ಚಟುವಟಿಕೆ ನಿಯಂತ್ರಣದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದರು. ಮುಖಂಡರಾದ ಆರ್ ಪರಮೇಶ, ಸುರೇಂದ್ರ ಕಿರಣ್, ಪ್ರಮೋದ್, ಶ್ರೀಮತಿ ಲಕ್ಷ್ಮಿ, ಸುನಿಲ್ ಪೈ, ಆನಂತರಾಯ ಪೈ, ಕೃಷ್ಣ, ಕುಮಾರ್, ಸಂತೋಷ್, ಇಂದ್ರಕುಮಾರ್ ಮುಂತಾದವರು ಹಾಜರಿದ್ದರು.

ತಮ್ಮನ್ನು ಬೆಂಬಲಿಸುವಂತೆ ಪಕ್ಷೇತರ ಅಭ್ಯರ್ಥಿ ಸಿ.ಜೆ.ಅಂಬೇಡ್ಕರ್ ಮನವಿ

ಮೈಸೂರು, ಏ.19(ಜಿಎ)–ಪಿರಿಯಾಪಟ್ಟಣ ತಾಲೂಕಿನ ಚಾಮರಾಜನಕೋಟೆ ಗ್ರಾಮದವರಾದ ತಾವು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದು, ಈ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ತಮ್ಮನ್ನು ಮತದಾರರು ಚುನಾಯಿಸಬೇಕೆಂದು ಸಿ.ಜೆ. ಅಂಬೇಡ್ಕರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿ, ತಾವು ರೈತ ಕುಟುಂಬಕ್ಕೆ ಸೇರಿದವರಾಗಿದ್ದು, ರೈತರ ಹಾಗೂ ಬಡ ಜನತೆಯ ಕಷ್ಟದ ಅರಿವಿದೆ. ಈ ಕ್ಷೇತ್ರದ ಜನತೆ ಆರ್ಥಿಕವಾಗಿ ದುರ್ಬಲರು, ಮೂಲ ಸೌಕರ್ಯ ವಂಚಿತರಾದವರಾಗಿದ್ದಾರೆ. ಹೀಗಾಗಿ ತಾವು ಆಯ್ಕೆಯಾದಲ್ಲಿ ಶಿಕ್ಷಣ, ಆರೋಗ್ಯ, ವ್ಯವಸಾಯ, ನೀರಾವರಿ, ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕ್ಷೇತ್ರ ಮುಂದುವರಿಯಲು ಶ್ರಮಿಸುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಕ್ರಂ ಪಾಷ, ನಂಜುಂಡಸ್ವಾಮಿ, ಜಗದೀಶ್ ಉಪಸ್ಥಿತರಿದ್ದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರ ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ವಿಜಯನಗರ ರೈಲ್ವೆ ಬಡಾವಣೆಯ ಪ್ರಮುಖ ರಸ್ತೆಗಳು, ಉದ್ಯಾನವನಗಳಲ್ಲಿ ಮತಯಾಚಿಸಲಾಯಿತು. ಮುಖಂಡರಾದ ಸುನೀಲ್, ಅರುಣ್‌ನಾಯಕ್, ಕುಮಾರಸ್ವಾಮಿ, ಪಾಪಣ್ಣ, ಗುರು, ಶಿವಸ್ವಾಮಿ, ರವಿ, ಸೋಮ, ಅಭಿ, ಉಮೇಶ್, ಅರುಣಕುಮಾರಿ ಮತ್ತಿತರರಿದ್ದರು.

ಶಾಂತಿ, ನೆಮ್ಮದಿ ಜೀವನಕ್ಕೆ ಈ ಬಾರಿ ಕಾಂಗ್ರೆಸ್ ಬೆಂಬಲಿಸಿ

ಮಾಜಿ ಶಾಸಕ ಡಾ.ಯತೀಂದ್ರ ಮನವಿ

ಮೈಸೂರು, ಏ.19(ಎಂಟಿವೈ)–ದೇಶದಲ್ಲಿ ಶಾಂತಿ ವಾತಾವರಣ ನೆಲೆಸಿ ಜನರು ನೆಮ್ಮದಿಯಿಂದ ಜೀವನ ನಡೆಸಬೇಕಾದರೆ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವಂತೆ ಮಾಜಿ ಶಾಸಕ ಡಾ.ಯತೀಂದ್ರ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕಿನ ಗೋಪಾಲಪುರದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿ ಮಾತನಾಡಿದ ಅವರು, ಕಳೆದ 10 ವರ್ಷದಿಂದ ದೇಶದಲ್ಲಿ ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಅಧಿಕಾರದಲ್ಲಿ ಅಭಿವೃದ್ಧಿಗಿಂತ ಕೋಮುಭಾವನೆ ಕೆರಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಜನರಿಗೆ ಉಪಯೋಗವಾಗುವ ಯೋಜನೆಗಳನ್ನು ಪ್ರಕಟಿಸದೇ ಕೇವಲ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಶಾಂತಿ ನೆಲೆಸಿ, ಎಲ್ಲಾ ವರ್ಗದ ಜನ ಪರಸ್ಪರ ಸಹಭಾಳ್ವೆಯಿಂದ ನೆಲೆಸಬೇಕಾದರೆ ಈ ಬಾರಿ ಬಿಜೆಪಿಯನ್ನು ತಿರಸ್ಕರಿಸಿ, ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.


ಚಾಮುಂಡೇಶ್ವರಿ ಕ್ಷೇತ್ರದ ಗೋಪಾಲಪುರದಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡುಗಳನ್ನು ವಿತರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದಂತೆ ನಡೆಯುವ ಮೂಲಕ ಐದು ಗ್ಯಾರಂಟಿ ಯೋಜನೆಗಳನ್ನು ಸಮರ್ಥವಾಗಿ ಜಾರಿಗೊಳಿಸಿದ್ದಾರೆ. ವಿರೋಧ ಪಕ್ಷದ ನಾಯಕರು ಗ್ಯಾರಂಟಿ ಯೋಜನೆಯನ್ನು ಅವಹೇಳನ ಮಾಡುತ್ತಿದ್ದಾರೆ. ಬಡವರಿಗೆ ಗ್ಯಾರಂಟಿ ಯೋಜನೆಯ ಸವಲತ್ತು ಸಿಗುತ್ತಿರುವುದನ್ನು ಬಿಜೆಪಿ ನಾಯಕರು ಸಹಿಸುತ್ತಿಲ್ಲ. ಈ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಬೆಂಬಲಿಸುವ ಮೂಲಕ ಗ್ಯಾರಂಟಿ ಯೋಜನೆಗಳ ವಿರುದ್ಧ ಅಪಹಾಸ್ಯ ಮಾಡುತ್ತಿರುವ ಬಿಜೆಪಿಗರಿಗೆ ತಕ್ಕ ಪಾಠ ಕಲಿಸಬೇಕು ಎಂದರು. ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಜಿ.ಕೆ.ಬಸವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ಅಹಿಂದ ಒಕ್ಕೂಟ ಬೆಂಬಲ

ಮೈಸೂರು, ಏ.19(ಜಿಎ)–ಈ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಪೂರ್ಣ ಬೆಂಬಲ ನೀಡಲಾಗುವುದು ಎಂದು ಒಕ್ಕೂಟದ ಕಾರ್ಯಾಧ್ಯಕ್ಷ ಬಿ.ಶಿವಣ್ಣ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಅಹಿಂದ ಸಮುದಾಯದ ಅಭಿವೃದ್ಧಿಗೆ ಬದ್ಧವಾಗಿದೆ. ಸಂವಿಧಾನ ವಿರೋಧಿ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ನಾಶಗೊಳಿಸುತ್ತಿರುವ ಬಿಜೆಪಿ ವಿರುದ್ಧ ಹೋರಾಡಲು ಕಾಂಗ್ರೆಸ್ ಗೆ ಮತ ನೀಡುವುದು ಅತ್ಯಗತ್ಯ. ಕಳೆದ ಹತ್ತು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಅಲ್ಪಸಂಖ್ಯಾತರು ಹಿಂದುಳಿದವರು ಮತ್ತು ದಲಿತರ ಪ್ರಗತಿಗೆ ಯಾವುದೇ ಕೆಲಸಗಳನ್ನು ಮಾಡಿಲ್ಲ. ಕೇವಲ ಬಂಡವಾಳ ಶಾಹಿಗಳ ಗುಲಾಮರಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ರಾಜ್ಯ ಸಂಚಾಲಕೃಷ್ಣಪ್ಪ ನಂಜನಗೂಡು ತಾಲ್ಲೂಕು ಅಧ್ಯಕ್ಷ ಆರ್.ಮಹದೇವ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷ ಪವಿತ್ರಾ, ಜಿಲ್ಲಾ ಘಟಕದ ಉಪಾಧ್ಯಕ್ಷ ಪ್ರವೀಣ್ ಉಪಸ್ಥಿತರಿದ್ದರು.

ಇಂದು ಮಂಡ್ಯದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕುಮಾರಸ್ವಾಮಿ ಮತ ಬೇಟೆ

ಮೈಸೂರು, ಏ.19(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಳೇ ಮೈಸೂರು ಭಾಗದಲ್ಲಿ ನಾಳೆ(ಏಪ್ರಿಲ್ 20) ಪ್ರತ್ಯೇಕವಾಗಿ ಪ್ರಚಾರ ನಡೆಸಲಿದ್ದಾರೆ.

ಹಾಸನ ಜಿಲ್ಲೆಯ ಪ್ರಚಾರ ಮುಗಿಸಿ ಇಂದು ರಾತ್ರಿಯೆ ಮೈಸೂರಿಗೆ ಆಗಮಿಸುವ ಸಿದ್ದರಾಮಯ್ಯ ಇಲ್ಲೇ ವಾಸ್ತವ್ಯ ಹೂಡುವರು. ನಾಳೆ (ಏಪ್ರಿಲ್ 20) ಬೆಳಿಗ್ಗೆ 10.45 ಗಂಟೆಗೆ ಹೆಲಿಕಾಪ್ಟರ್ ಮೂಲಕ ಕೆ.ಆರ್.ನಗರಕ್ಕೆ ತೆರಳುವ ಸಿದ್ದರಾಮಯ್ಯ 11 ಗಂಟೆಗೆ ಲೋಕಸಭಾ ಚುನಾವಣೆಯ ಪ್ರಜಾಧ್ವನಿ–2 ಪ್ರಚಾರ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 1.30 ಗಂಟೆಗೆ ಕೆ.ಆರ್.ಪೇಟೆಯಲ್ಲಿ ನಡೆಯುವ ಪ್ರಜಾಧ್ವನಿ–2 ಪ್ರಚಾರ ಸಭೆಯಲ್ಲಿ ಭಾಗವಹಿಸಿ ಸಂಜೆ 4 ಗಂಟೆಗೆ ನಾಗಮಂಗಲದಲ್ಲಿ ಬಿರುಸಿನ ಪ್ರಚಾರ ಕೈಗೊಳ್ಳಲಿದ್ದಾರೆ. ನಂತರ ಹೆಲಿಕಾಪ್ಟರ್ ಮೂಲಕ ಸಂಜೆ 5.30 ಗಂಟೆಗೆ ಬೆಂಗಳೂರಿಗೆ ತೆರಳುವರು.




ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾಳೆ ಬೆಳಿಗ್ಗೆ 11.15 ಗಂಟೆಗೆ ಹೆಲಿಕಾಪ್ಟರ್‌ನಲ್ಲಿ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ತರುವಾಯ ಸಿದ್ದರಾಮಯ್ಯ ಪಾಲ್ಗೊಳ್ಳುತ್ತಿರುವ ಕೆ.ಆರ್.ನಗರ, ಕೆ.ಆರ್.ಪೇಟೆ ಹಾಗೂ ನಾಗಮಂಗಲದ ಪ್ರಚಾರ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಈ ಮೂಲಕ ನಾಳೆ ಇಡೀ ದಿನ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಮತಶಿಕಾರಿ ನಡೆಸಲಿದ್ದಾರೆ. ಮಂಡ್ಯ ರಣಕಣವನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವ ಇಬ್ಬರು ನಾಯಕರು, ಕುಮಾರಸ್ವಾಮಿ ವಿರುದ್ಧ ರಣಕಹಳೆ ಮೊಳಗಿಸಲಿದ್ದಾರೆ.

ನಾಳೆ ರಾತ್ರಿ ಮೈಸೂರಿಗೆ ಬಂದು ವಾಸ್ತವ್ಯ ಹೂಡುವ ವಿಜಯೇಂದ್ರ

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದು ರಾತ್ರಿಯೇ ಮೈಸೂರಿಗೆ ಆಗಮಿಸಲಿದ್ದು, ನಾಳೆ ಬೆಳಿಗ್ಗೆ 9 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ರಾಮನಗರಕ್ಕೆ ತೆರಳಲಿದ್ದಾರೆ. ತರುವಾಯ ಬಿಡದಿಯಿಂದ ಹೊರಟು ಮಧ್ಯಾಹ್ನ 3.30 ಗಂಟೆಗೆ ಬನ್ನೂರಿನಲ್ಲಿ ಬಿರುಸಿನ ಪ್ರಚಾರ ನಡೆಸಲಿದ್ದಾರೆ. ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ಪರ ಪ್ರಚಾರ ಮಾಡುವರು. ನಂತರ ಹೆಲಿಕಾಪ್ಟರ್ ಮೂಲಕ 5 ಗಂಟೆಗೆ ಪಾಂಡವಪುರಕ್ಕೆ ತೆರಳಿ ಭರ್ಜರಿ ಪ್ರಚಾರ ನಡೆಸಲಿದ್ದಾರೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ತಮ್ಮನ್ನು ಸೋಲಿಸಲು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ರೂಪಿಸಿರುವ ರಾಜಕೀಯ ತಂತ್ರಗಾರಿಕೆಗೆ ಸೆಡ್ಡು ಹೊಡೆಯಲು ಕುಮಾರಸ್ವಾಮಿ ಕೂಡ ಪ್ರತಿ ತಂತ್ರ ರೂಪಿಸಿದ್ದಾರೆ. ಈ ಮೂಲಕ ನಾಳೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಮೂವರು ನಾಯಕರ ಮತಬೇಟೆಯಿಂದ ಪ್ರಚಾರ ಕಣ ಮತ್ತಷ್ಟು ರಂಗೇರಲಿದೆ.

ಪಾಂಡವಪುರದಲ್ಲಿ ಪ್ರಚಾರ ನಡೆಸಿದ ನಂತರ ಕುಮಾರಸ್ವಾಮಿ ನಾಳೆ ರಾತ್ರಿ ಮೈಸೂರಿಗೆ ಆಗಮಿಸಿ ಇಲ್ಲೇ ವಾಸ್ತವ್ಯ ಹೂಡುವರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಳೆ ಮಂಗಳೂರಿನಲ್ಲಿ ಪ್ರಚಾರ ನಡೆಸಿ ರಾತ್ರಿ ವಿಶೇಷ ವಿಮಾನದ ಮೂಲಕ ಮೈಸೂರಿಗೆ ಆಗಮಿಸಲಿದ್ದಾರೆ. ಭಾನುವಾರ ವಿಜಯೇಂದ್ರ ಮೈಸೂರಿನಲ್ಲಿ ಯದುವೀರ್ ಪರ ಬಿರುಸಿನ ಪ್ರಚಾರ ನಡೆಸಲಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದಲ್ಲಿ ಜಯಭೇರಿ ಬಾರಿಸಲು ಘಟಾನುಘಟಿ ನಾಯಕರು ಅಖಾಡಕ್ಕಿಳಿಯಲಿದ್ದಾರೆ. ಇದರಿಂದ ಮೈಸೂರು–ಕೊಡಗು, ಮಂಡ್ಯ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ರಣಕಣ ಮತ್ತಷ್ಟು ಕಾವು ಪಡೆಯಲಿದೆ.



ಮೈಸೂರು ಮಿತ್ರ

ಶನಿವಾರ 20 ಏಪ್ರಿಲ್ 2024

ಲಿಂಗಾಯಿತರಿಗೆ ಸಿಎಂ ಹುದ್ದೆ ವಂಚಿಸಿದ ಕುಮಾರಸ್ವಾಮಿ

ಬಸವ ತತ್ವದ ಕಾಂಗ್ರೆಸ್ ಬೆಂಬಲಿಸಿ, ಸ್ಟಾರ್ ಚಂದ್ರು ಗೆಲ್ಲಿಸಿ: ಎಂ.ಬಿ.ಪಾಟೀಲ್



ಕಾಂಗ್ರೆಸ್ ಬೆಂಬಲಿತ ವೀರಶೈವ ಲಿಂಗಾಯಿತ ಜನಜಾಗೃತಿ ಸಭೆಯನ್ನು ಸಚಿವ ಎಂ.ಬಿ.ಪಾಟೀಲ್ ಉದ್ಘಾಟಿಸಿದರು. ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಇತರರಿದ್ದಾರೆ.

ಮಂಡ್ಯ,ಏ.19–ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನಮ್ಮ ಸಮುದಾಯದ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಿಗಬೇಕಾಗಿದ್ದ ಮುಖ್ಯಮಂತ್ರಿ ಹುದ್ದೆಯನ್ನು ತಪ್ಪಿಸಿ ವಚನ ಭ್ರಷ್ಟರಾಗಿರುವುದನ್ನು ಜನತೆ ಮರೆತಿಲ್ಲ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಕನಕ ಭವನದಲ್ಲಿ ನಡೆದ ಕಾಂಗ್ರೆಸ್ ಬೆಂಬಲಿತ ವೀರಶೈವ ಲಿಂಗಾಯತ ಜನಜಾಗೃತಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು 2008ರಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದವು. ಮೊದಲ ಅವಧಿಯಲ್ಲಿ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿ ಅಧಿಕಾರ ಅನುಭವಿಸಿದ ಎಚ್.ಡಿ.ಕುಮಾರಸ್ವಾಮಿ ಒಪ್ಪಂದದಂತೆ ಇನ್ನುಳಿದ 20 ತಿಂಗಳ ಅವಧಿಗೆ ಲಿಂಗಾಯತ ಸಮುದಾಯದ ಬಿ.ಎಸ್.ಯಡಿಯೂರಪ್ಪನವರಿಗೆ ಸಿಎಂ ಸ್ಥಾನ ನೀಡದೆ ದೊಡ್ಡ ಅನ್ಯಾಯವೆಸಗಿ ರಾಜಕೀಯ ವಂಚನೆ ಮಾಡಿರುವುದನ್ನು ಸಮುದಾಯ ಅರಿತುಕೊಳ್ಳಬೇಕೆಂದರು.

ಬಸವ ತತ್ವದ ಆದಾರದಲ್ಲಿ ಆಡಳಿತ: ಬಿಜೆಪಿ ಪಕ್ಷ ಸಮಾನತೆಯ ಹರಿಕಾರ ಬಸವಣ್ಣನವರ ತತ್ವ ಸಿದ್ಧಾಂತವನ್ನು ಎಂದಿಗೂ ಒಪ್ಪುವುದಿಲ್ಲ, ಅಷ್ಟೇ ಅಲ್ಲದೆ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂಬುದನ್ನೂ ಒಪ್ಪುವುದಿಲ್ಲ. ಆದರೆ, ಕಾಂಗ್ರೆಸ್ ಪಕ್ಷ ಅಂಬೇಡ್ಕರ್ ಅವರ ಸಂವಿಧಾನ ಮತ್ತು ಬಸವಣ್ಣನವರ ಸಿದ್ಧಾಂತದ ಮೇಲೆ ಹೆಚ್ಚಿನ ನಂಬಿಕೆ ಇಟ್ಟಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷಹೀನಾಯವಾಗಿ ಸೋತ ಹಿನ್ನೆಲೆಯಲ್ಲಿ ಬಿ.ಎಸ್.ಯಡಿಯೂರಪ್ಪನವರ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದರು.

ವೀರಶೈವ–ಲಿಂಗಾಯಿತ ಸಮುದಾಯ ಓಲೈಕೆ ಮಾಡಲು ಇಂತಹ ತಂತ್ರ ಮಾಡಿರುವ ಬಿಜೆಪಿ ವರಿಷ್ಠರು ಕೇವಲ 3 ವರ್ಷ ಮಾತ್ರ ರಾಜ್ಯಾಧ್ಯಕ್ಷ ಸ್ಥಾನ ವಿಜಯೇಂದ್ರ ಅವರಿಗೆ ನಿಗದಿ ಮಾಡಿದೆ. ಅಷ್ಟರೊಳಗೆ ಎಲ್ಲಾ ಚುನಾವಣೆ ಮುಗಿಯುತ್ತದೆ. ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ಪಕ್ಷದ ಅಧ್ಯಕ್ಷ ಸ್ಥಾನವು ಲಿಂಗಾಯತ ಸಮುದಾಯದ ಕೈತಪ್ಪಲಿದೆ. ಆದರೆ ಕಾಂಗ್ರೆಸ್ ಪಕ್ಷ ಸಮುದಾಯದ ಹೆಚ್ಚಿನವರನ್ನು ಮುಖ್ಯಮಂತ್ರಿಯಾಗಲು ಅವಕಾಶ ಕಲ್ಪಿಸಿದೆ ಎಂದು ವಿವರಿಸಿದರು.

ಈ ಸಮಾವೇಶದ ಆಯೋಜಕರಾದ ವೀರಶೈವ ಲಿಂಗಯಿತ ಮುಖಂಡರಾದ ಆಲಕೆರೆ ಮಹದೇಶ್, ಸಂತೆಕಸಲಗೆರೆ ರುದ್ರಪ್ಪ, ಪ್ರಫುಲ್ಲಚಂದ್ರ, ವಕೀಲ ಎಂ. ಗುರುಪ್ರಸಾದ್, ಸುಂಡಹಳ್ಳಿ ಸೋಮಶೇಖರ್, ಮಲ್ಲಿಗೆರೆ ಆನಂದ್, ಬೇವುಕಲ್ಲು ಮೋಹನ್, ಸೌದೇನ ಹಳ್ಳಿ ರಮೇಶ್, ಅಮೃತಿ ರಾಜಶೇಖರ್ ಮತ್ತಿತರರನ್ನು ಸಚಿವ ಎನ್.ಚಲುವರಾಯಸ್ವಾಮಿ ಅಭಿನಂದಿಸಿದರು. ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷೆ ಜಗದಾಂಬ ಶಿವರಾಜ್, ಲಿಂಗಾಯಿತ ಮಹಾಸಭಾ ಅಧ್ಯಕ್ಷ ಎಂ.ಎಸ್.ಮಂಜುನಾಥ್ ಬೆಟ್ಟಹಳ್ಳಿ, ಆಲಕೆರೆ ಸರ್ವಮಂಗಳಾ ಸೇರಿದಂತೆ ನೂರಾರು ಮಂದಿ ಜಾ.ದಳ–ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡರು.

ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್ ಗಣಿಗ, ಮಾಜಿ ಶಾಸಕ ಎಂ.ಶ್ರೀನಿವಾಸ್, ಎಂ.ಎಸ್.ಚಿದಂಬರ್, ಕುರುಬರ ಸಂಘದ ಅಧ್ಯಕ್ಷ ಸುರೇಶ್ ಸಮಾಜದ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಮೇಕೆದಾಟು ಯೋಜನೆ ಏನಾಯಿತು...?



ನಿಖಿಲ್ ಅವರಿಗೆ ಭಾರಿ ಗಾತ್ರದ ಹೂವಿನ ಹಾರ ಹಾಕಿ ಅಭಿನಂದಿಸುತ್ತಿರುವುದು.

ಭಾರತೀನಗರ.ಏ.19– ನಮ್ಮ ನೀರು ನಮ್ಮ ಹಕ್ಕು ಘೋಷವಾಕ್ಯದೊಂದಿಗೆ ತೂರಾಡಿಕೊಂಡು ಹೋರಾಟ ನಡೆಸಿದ ಮೇಕೆದಾಟು ಯೋಜನೆಯ ಕಾಂಗ್ರೆಸ್ ಭರವಸೆ ಏನಾಯಿತು? ಎಂದು ಜಾ.ದಳ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಪ್ರಶ್ನಿಸಿದ್ದಾರೆ.

ಮೈತ್ರಿ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಪರ ಚುನಾವಣಾ ಪ್ರಚಾರದ ವೇಳೆ ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಮಾತನಾಡಿದ ಅವರು, ಕಳೆದ 11 ತಿಂಗಳ ಹಿಂದೆ ಮೇಕೆದಾಟು ಯೋಜನೆ ಮಾಡುತ್ತೇವೆಂದು ತೂರಾಡಿಕೊಂಡು ಹೋರಾಟ ನಡೆಸಿದರು. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ಆ ಯೋಜನೆಯನ್ನು ಪೂರ್ಣಗೊಳಿಸಿಲ್ಲ ಈಗ ಆ ಸಮಸ್ಯೆಯತ್ತ ಮುಖ ಮಾಡದಿರುವುದು ಏಕೆ ಎಂದು ರಾಜ್ಯದ ಜನತೆ ಚಿಂತಿಸಬೇಕಾಗಿದೆ ಎಂದರು.

5 ಗ್ಯಾರಂಟಿಗಳನ್ನು ನೀಡಿದ್ದೇವೆಂದು ಕಾಂಗ್ರೆಸ್‌ನವರು ಬೆನ್ನು ತಟ್ಟಿಕೊಂಡು ಓಡಾಡುತ್ತಿದ್ದಾರೆ. ತೆರಿಗೆ ಹಣವನ್ನು ದುರುಪಯೋಗ ಪಡಿಸಿಕೊಂಡು ಆಡಳಿತ ನಡೆಸುತ್ತಿದ್ದಾರೆಂದು ಕುಟುಕಿದರು.

ಪಟಾಕಿ ಆರ್ಭಟ: ನಿಖಿಲ್ ಅವರು ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಗೆ ಆಗಮಿಸುತ್ತಿದ್ದಂತೆ ಪಟಾಕಿಗಳ ಆರ್ಭಟ ಹೆಚ್ಚಾಗಿತ್ತು. ಜೊತೆಗೆ ಕಾರ್ಯಕರ್ತರ ಜೈಕಾರ ಮುಗಿಲು ಮುಟ್ಟಿತ್ತು. ಇದೇ ವೇಳೆ ಮನ್ಮುಲ್ ನಿರ್ದೇಶಕ ಎಸ್.ಪಿ. ಸ್ವಾಮಿ, ಮುಖಂಡರಾದ ಅಣ್ಣೂರು ನವೀನ್, ಹನುಮಂತೇಗೌಡ, ಗುರುದೇವರಹಳ್ಳಿ ಅರವಿಂದ್ ಸೇರಿದಂತೆ ಹಲವರಿದ್ದರು.

ದೇಶದಲ್ಲಿ ಮೋದಿ, ಮಂಡ್ಯದಲ್ಲಿ ಕುಮಾರಸ್ವಾಮಿ ಗೆಲುವಿಗೆ ಬಿಜೆಪಿ–ಜೆಡಿಎಸ್ ಒಗ್ಗಟ್ಟಿನ ಹೋರಾಟ



ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಅವರು ಶ್ರೀರಂಗಪಟ್ಟಣ ಸುತ್ತ ಮುತ್ತ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರೊಂದಿಗೆ ಮನೆಮನೆಗೆ ತೆರಳಿ ಮತ ಯಾಚಿಸಿದರು. ಈ ವೇಳೆ ಮುಖಂಡರಾದ ಸಿದ್ದರಾಮಯ್ಯ, ರಮೇಶ್, ಗಂಜಾಂ ಕೃಷ್ಣಪ್ಪ, ಎಸ್.ಟಿ.ರಾಜು,ಕುಬೇರ್‌ಸಿಂಗ್ ಇತರರು ಉಪಸ್ಥಿತರಿದ್ದರು.

ಶ್ರೀರಂಗಪಟ್ಟಣ,ಏ.19–ದೇಶದಲ್ಲಿ ನರೇಂದ್ರ ಮೋದಿ ಹಾಗೂ ಮಂಡ್ಯ ಜಿಲ್ಲೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರ ಗೆಲುವಿಗೆ ಬಿಜೆಪಿ–ಜೆಡಿಎಸ್ ಪಕ್ಷದ ಎಲ್ಲಾ ಕಾರ್ಯಕರ್ತರು ಸಮನ್ವಯದಿಂದ ಒಗ್ಗಟ್ಟಾಗಿ ಶ್ರಮಿಸಬೇಕು ಎಂದು ಬಿಜೆಪಿ ಮುಖಂಡ ಇಂಡುವಾಳು ಎಸ್.ಸಚ್ಚಿದಾನಂದ ಮನವಿ ಮಾಡಿದರು.

ಪಟ್ಟಣದಲ್ಲಿ ಬಿಜೆಪಿ–ಜೆಡಿಎಸ್ ಪಕ್ಷದ ಕಾರ್ಯಕರ್ತರೊಂದಿಗೆ ಮನೆ ಮನೆಗೆ ತೆರಳಿ ಮಂಡ್ಯ ಲೋಕಸಭಾ ಮೈತ್ರಿ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಅವರ ಪರ ಚುನಾವಣಾ ಪ್ರಚಾರ ನಡೆಸಿ ಮಾತನಾಡಿ, ದೇಶದಲ್ಲಿ 400ಕ್ಕೂ ಹೆಚ್ಚು ಸ್ಥಾನದಲ್ಲಿ ಬಿಜೆಪಿಗೆ ಗೆಲುವು, ದೇಶಕ್ಕೆ ನರೇಂದ್ರ ಮೋದಿ ಹಾಗೂ ಮಂಡ್ಯ ಜಿಲ್ಲೆಗೆ ಎಚ್.ಡಿ.ಕುಮಾರಸ್ವಾಮಿ ಎಂಬ ಘೋಷವಾಕ್ಯದೊಂದಿಗೆ ಸ್ಥಳೀಯ ಕಾರ್ಯಕರ್ತರಲ್ಲಿರುವ ಸ್ವ ಪ್ರತಿಷ್ಠೆ ಬಿಟ್ಟು ಗೆಲುವಿಗೆ ಸಹಕರಿಸಬೇಕು ಎಂದರು.

ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದ ಎಲ್ಲಾ ಮಹಿಳೆಯರು ಸಂಮೃದ್ದಿ ಜೀವನ ನಡೆಸಲು ಲಾಟರಿ ನಿಷೇದ, ರೈತರ ಸಾಲ ಮನ್ನಾ, ಸೇರಿದಂತೆ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಅವರ ವಿರುದ್ಧವಾಗಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿರುವ ಸ್ಟಾರ್ ಚಂದ್ರು, ಹೆಚ್‌ಡಿಕೆ ಅವರ ವ್ಯಕ್ತಿತ್ವದ ಮುಂದೆ ಸ್ಪರ್ಧಾಳುನೇ ಅಲ್ಲ. ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಇದೇ ರೀತಿ ಒಗ್ಗಟ್ಟಾಗಿ ಚುನಾವಣೆ ಮಾಡಬೇಕು. ಶ್ರೀರಂಗಪಟ್ಟಣ ಕ್ಷೇತ್ರದಿಂದ ಕನಿಷ್ಠ 30 ರಿಂದ 40 ಸಾವಿರ ಅಂತರದಲ್ಲಿ ಅವರ ಗೆಲುವಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಡಾ. ಸಿದ್ದರಾಮಯ್ಯ, ತಾಲೂಕು ಅಧ್ಯಕ್ಷ ಪೀಹಳ್ಳಿ ರಮೇಶ್, ಪುರಸಭಾ ಸದಸ್ಯರಾದ ಗಂಜಾಂ ಕೃಷ್ಣಪ್ಪ, ಎಸ್.ಪ್ರಕಾಶ್, ಎಸ್.ಟಿ ರಾಜು, ಮುಖಂಡರಾದ ಉಮೇಶ್, ಕುಬೇರ್‌ಸಿಂಗ್ ಸೇರಿದಂತೆ ನೂರಾರು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಮನೆ ಮನೆಗೆ ತೆರಳಿ ಮತ ಯಾಚಿಸಿದರು.

ಸ್ಟಾರ್‌ಚಂದ್ರು ಪರ ನಟ ದರ್ಶನ್ ರೋಡ್ ಶೋ

ಕೆ.ಆರ್.ಪೇಟೆ: ಚಾಲೆಂಜಿಂಗ್ ಸ್ಟಾರ್ ದರ್ಶನ್ ತಾಲೂಕಿನ ಅಕ್ಕಿಹೆಬ್ಬಾಳು, ಬೂಕನಕೆರೆ, ಹೊಸಹೊಳಲು, ಕಿಕ್ಕೇರಿ, ಅಗ್ರಹಾರ ಬಾಚಹಳ್ಳಿ, ಗ್ರಾಮಗಳಲ್ಲಿ ರೋಡ್ ಶೋ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಪರ ಮತ ಯಾಚಿಸಿದರು.

ಬಳಿಕ ಮಾತನಾಡಿದ ನಟ ದರ್ಶನ್, ನಾನು ಉತ್ತಮವಾದ ವ್ಯಕ್ತಿಗಳ ಪರವಾಗಿ ಪ್ರಚಾರ ಮಾಡುತ್ತಿದ್ದೇನೆ. ಮಂಡ್ಯ ಜಿಲ್ಲೆಯ ಸ್ವಾಭಿಮಾನದ ಉಳಿವಿಗಾಗಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು)ಅವರಿಗೆ ಮತ ಚಲಾಯಿಸಿ ಭರ್ಜರಿ ಗೆಲುವು ತಂದುಕೊಡಬೇಕು ಎಂದು ಮನವಿ ಮಾಡಿದರು.

ರಾಜ್ಯದ ಬಡ ಜನರಿಗೆ ಪಂಚ ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ಬರಗಾಲದಲ್ಲಿಯೂ ನೆಮ್ಮದಿಯ ಜೀವನ ನಡೆಸಲು ಅವಕಾಶ ಮಾಡಿಕೊಟ್ಟಿರುವ ಕಾಂಗ್ರೆಸ್ ಬಡವರ ಪಕ್ಷವಾಗಿದೆ. ಸರಳ ಸಜ್ಜನ ವ್ಯಕ್ತಿತ್ವ ಹೊಂದಿರುವ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಜಿಲ್ಲೆಯ ಸ್ವಾಭಿಮಾನ ಉಳಿಸಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿ ವಿಜಯಮಾಲೆ ತೊಡಿಸಿ ಭರ್ಜರಿ ಗೆಲುವು ತಂದುಕೊಡಬೇಕು ಎಂದು ಹೇಳಿದರು.

ಬಳಿಕ ಮಾತನಾಡಿದ ಕಾಂಗ್ರೆಸ್ ಮುಖಂಡ ಬೂಕನಕೆರೆ ವಿಜಯ ರಾಮೇಗೌಡ, ನಮ್ಮ ಅಭ್ಯರ್ಥಿ ಸ್ಟಾರ್ ಚಂದ್ರು ಅವರಿಗೆ ಹಣ ಆಸ್ತಿಯ ಮೇಲೆ ವ್ಯಾಮೋಹವಿಲ್ಲ, ಅವರು ಒಬ್ಬ ಬಡ ರೈತನ ಮಗನಾಗಿದ್ದು, ಉತ್ತು ಬಿತ್ತಿ ವ್ಯವಸಾಯ ಮಾಡಿದ್ದಾರೆ. ರೈತಾಪಿ ಜನರ ಕಷ್ಟ ಸುಖವನ್ನು ಹತ್ತಿರದಿಂದ ನೋಡಿರುವ ಅವರು ಬಡ ಜನರ ಸೇವೆ ಮಾಡಲೆಂದು ರಾಜಕಾರಣಕ್ಕೆ ಬಂದಿದ್ದಾರೆ ಎಂದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್. ದೇವರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹರಳಹಳ್ಳಿ ವಿಶ್ವನಾಥ್, ಐಪನಹಳ್ಳಿ ನಾಗೇಂದ್ರ ಕುಮಾರ್, ಪುರಸಭಾ ಸದಸ್ಯರಾದ ಡಿ.ಪ್ರೇಮಕುಮಾರ್, ಕೆ.ಸಿ.ಮಂಜುನಾಥ್, ಯುವ ಮುಖಂಡ ಡಾ.ಶ್ರೀಕಾಂತ್, ಹೊಸಹೊಳಲು ಶಿವಣ್ಣ, ರಾಜಯ್ಯ, ಡಾ.ಬಸ್ತಿರಂಗಪ್ಪ, ತಾಲೂಕು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ಮಹೇಶ್, ಇಂದಿರಾ ಸತೀಶ್ ಬಾಬು, ಶಿವಮ್ಮ, ಪ್ರತಿಭಾ, ಸೇರಿದಂತೆ ಸಾವಿರಾರು ಜನರು ರೋಡ್ ಶೋನಲ್ಲಿ ಭಾಗವಹಿಸಿದ್ದರು.



ದರ್ಶನ್ ಪ್ರಚಾರ ವಾಹನಕ್ಕೆ ವಿದ್ಯುತ್ ಸ್ಪರ್ಶ: ಪ್ರಾಣಾಪಾಯದಿಂದ ಪಾರು

ಕೆ.ಆರ್.ಪೇಟೆ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಕೆ.ಆರ್.ಪೇಟೆಯಲ್ಲಿ ರೋಡ್ ಶೋ ನಡೆಸುತ್ತಿದ್ದ ವೇಳೆ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಪ್ರಚಾರ ವಾಹನಕ್ಕೆ ವಿದ್ಯುತ್ ತಗುಲಿದ್ದು, ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಿಲ್ಲ. ನಿನ್ನೆಯಿಂದ ಮಂಡ್ಯದ ಮಳವಳ್ಳಿಯಲ್ಲಿ ಚುನಾವಣಾ ಪ್ರಚಾರ ನಡೆಸಿದ್ದ ದರ್ಶನ್, ಇಂದು ಕೆ.ಆರ್.ಪೇಟೆ ಹಾಗೂ ಕೆ.ಆರ್.ನಗರ ತಾಲೂಕಿನಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಕೆ.ಆರ್.ಪೇಟೆಯ ಅಗ್ರಹಾರ ಬಾಚಹಳ್ಳಿ ಬಳಿ ರೋಡ್‌ಶೋ ನಡೆಸುವಾಗ ಪ್ರಚಾರ ವಾಹನಕ್ಕೆ ವಿದ್ಯುತ್ ಸ್ಪರ್ಶಿಸಿ ಸ್ವಲ್ಪ ಭಾಗ ಜಖಂಗೊಂಡಿದೆ. ಈ ಘಟನೆಯಿಂದ ನಟ ದರ್ಶನ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಕೂದಲೆಳೆಯಿಂದ ಪ್ರಾಣಾಪಾಯದಿಂದ ಪಾರಾಗಿದ್ದು, ನಟ ದರ್ಶನ್ ರೋಡ್‌ಶೋ ವನ್ನು ಅಲ್ಲೇ ಸ್ಥಗಿತಗೊಳಿಸಿ, ವಾಹನ ರಿಪೇರಿಗೆ ಸೂಚನೆ ಕೊಟ್ಟು ಅಲ್ಲಿಂದ ತೆರಳಿದ್ದಾರೆ.

ಮೂರನೇ ಪುಟದಿಂದ

ರೋಡ್ ಶೋ ಮೂಲಕ ಮತಯಾಚನೆ

ಯದುವಂಶದ ಕೊಡುಗೆ ಅಪಾರ. ನಾವಿಂದು ನೆಮ್ಮದಿಯಿಂದ ಮೈಸೂರಿನಂತಹ ಸಾಂಸ್ಕೃತಿಕ ನಗರದಲ್ಲಿ ವಾಸವಾಗಿದ್ದೇವೆ ಎಂದರೆ ಅದು ಮೈಸೂರು ಅರಸರ ಕೊಡುಗೆ. ಅವರ ಋಣದ ಬಾರ ಕಡಿಮೆ ಮಾಡಿಕೊಳ್ಳಬೇಕಾದರೆ ಯದುವೀರ್ ಅವರಿಗೆ ಮತ ನೀಡಿ. ಅವರನ್ನು ಗೆಲ್ಲಿಸಿ ಎಂದು ಕರೆ ನೀಡಿದರು. ಮಾಜಿ ಸಚಿವ ಎಸ್.ಎ.ರಾಮದಾಸ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್‌ಗೌಡ, ಬಿಜೆಪಿ ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ನಗರಪಾಲಿಕೆ ಮಾಜಿ ಸದಸ್ಯ ಸಾತ್ವಿಕ್, ಎನ್.ಆರ್ ಕ್ಷೇತ್ರದ ಮಂಡಲ ಅಧ್ಯಕ್ಷ ಸ್ಮಾರ್ಟ್ ಮಂಜು, ಕಾರ್ಯದರ್ಶಿಗಳಾದ ಮಂಜು ಸಿ.ಗೌಡ, ಪದ್ಮನಾಭ್, ಸು.ಮುರಳಿ ಮತ್ತಿತರರು ಉಪಸ್ಥಿತರಿದ್ದರು.

ಜೈ ಭೀಮ್ ಘೋಷಣೆ, ಫೋಟೊ ಉಡುಗೊರೆ...



ಯದುವೀರ್ ಗಾಂಧಿನಗರಕ್ಕೆ ಆಗಮಿಸುತ್ತಿದ್ದಂತೆ ಅದ್ಧೂರಿ ಸ್ವಾಗತ ನೀಡಲಾಯಿತು. ರೋಡ್ ಶೋ ಮಾರ್ಗದುದ್ದಕ್ಕೂ ಪ್ರಚಾರ ವಾಹನ ಸುತ್ತುವರಿದಿದ್ದ ಗಾಂಧಿನಗರ ನಿವಾಸಿಗಳು, ಬಿಜೆಪಿ ಕಾರ್ಯಕರ್ತರು ಜೈ ಭೀಮ್ ಘೋಷಣೆ ಮೊಳಗಿಸಿ ಅಂಬೇಡ್ಕರ್ ಅಭಿಮಾನ ಮೆರೆದರು. ಅಲ್ಲದೆ ಯುವಕನೋರ್ವ ಯದುವೀರ್ ಅವರಿಗೆ ಅಂಬೇಡ್ಕರ್ ಅವರ ಫೋಟೋವನ್ನು ಉಡುಗೊರೆಯಾಗಿ ನೀಡಿದರೆ, ಬಾಲಕನೋರ್ವ ಯದುವೀರ್ ಚಿತ್ರ ಬಿಡಿಸಿ ಗಮನ ಸೆಳೆದದ್ದು ವಿಶೇಷವಾಗಿತ್ತು.

ಯದುವೀರ್ ಗೆಲ್ಲಿಸಿಕೊಂಡೇ ಬರಬೇಕು...



ಮೈಸೂರಿನ ಕ್ಷತ್ರೀಯ ಮರಾಠ ಸಮಾಜದ ವತಿಯಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಅಭಿನಂದಿಸಲಾಯಿತು. ಮಾಜಿ ಶಾಸಕರಾದ ಈ.ಮಾರುತಿ ರಾವ್ ಪವಾರ್, ಎಲ್.ನಾಗೇಂದ್ರ ಮತ್ತಿತರರಿದ್ದರು.

ಬಿಜೆಪಿ ಕಾರ್ಯಕರ್ತರಿಗಿಂತಲೂ ಯದುವೀರ್ ಅವರ ಪರವಾಗಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಬೇಕು. ಮರಾಠ ಸಮಾಜದ ಎಲ್ಲರೂ ಸೇರಿ ಯದುವೀರ್ ಅವರನ್ನು ಗೆಲ್ಲಿಸಿ ಸಂಭ್ರಮಿಸೋಣ ಎಂದು ಕರೆ ನೀಡಿದರು.

ಅವಿನಾಭಾವ ಸಂಬಂಧ: ಮೈಸೂರು ಒಡೆಯರಿಗೂ ಮರಾಠ ಸಂಸ್ಥಾನಕ್ಕೂ ಅವಿನಾಭಾವ ಸಮಬಂಧವಿದೆ. ಛತ್ರಪತಿ ಶಿವಾಜಿ ಮಹಾರಾಜರು ವಾಸವಿದ್ದ ಕೋಟೆ ಚಿಕ್ಕದೇವರಾಜ ಒಡೆಯರ್ ಅವರಿಗೆ ಬಂದ ಇತಿಹಾಸವಿದೆ. ಮುಂದಿನ ದಿನಗಳಲ್ಲಿ ಮರಾಠ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು. ಇದೇ ವೇಳೆ ಮರಾಠ ಸಮಾಜದ ಮುಖಂಡರಿಂದ ಯದುವೀರ್ ಅವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಎಲ್.ನಾಗೇಂದ್ರ, ಜೀವಧಾರ ಗಿರೀಶ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್‌ಗೌಡ, ಮೈಸೂರು ಕ್ಷತ್ರೀಯ ಮರಾಠ ಸಮಾಜದ ಮುಖಂಡರಾದ ಶ್ರೀನಿವಾಸ ರಾವ್, ಮಂಜುನಾಥ್ ರಾವ್ ಕ್ಷೀರ ಸಾಗರ್, ರಾಮರಾವ್, ಜ್ಞಾನ ಪ್ರಕಾಶ್, ಕೃಷ್ಣ ಜೀ ರಾವ್, ತುಕರಾಮ್ ರಾವ್, ಜಗನ್ನಾಥ್ ಮತ್ತಿತರರಿದ್ದರು.

ಮೈಸೂರು ವಿವಿಯಲ್ಲಿ ಹಣ ದುರುಪಯೋಗ

ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣಾ ಸಮಿತಿ ರಚನೆ

ಮೈಸೂರು,ಏ.19(ಎಸ್‌ಪಿಎನ್)– ರಾಜ್ಯ ಲೆಕ್ಕಪತ್ರ ಮತ್ತು ಹಣಕಾಸು ಇಲಾಖೆ ಆಡಿಟ್ ವರದಿಯಲ್ಲಿ ಮೈಸೂರು ವಿವಿಯಲ್ಲಿ 55 ಕೋಟಿ ದುರುಪಯೋಗ ಆಗಿರುವ ಕುರಿತು ಉಲ್ಲೇಖಿಸಿರುವ ಹಿನ್ನೆಲೆಯಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಜಿಲ್ಲಾ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣೆ ಸಮಿತಿ ರಚಿಸಿ ಆದೇಶಿಸಿದ್ದಾರೆ. ಪ್ರಧಾನ ಜಿಲ್ಲಾ ನಿವೃತ್ತ ನ್ಯಾಯಾಧೀಶರಾದ ಬಸವರಾಜ್ ಶಿವಪ್ಪ ತಡಹಾಳ್ ನೇತೃತ್ವದಲ್ಲಿ ವಿಚಾರಣಾ ಸಮಿತಿ ನೇಮಿಸಿದ್ದು, ಸಮಿತಿ ಸದಸ್ಯರಾಗಿ ರಾಜ್ಯ ಹಣಕಾಸು ಇಲಾಖೆ ನಿವೃತ್ತ ಹೆಚ್ಚುವರಿ ನಿರ್ದೇಶಕ ಕ್ಯಾಪ್ಟನ್ ಟಿ.ವೇಣುಗೋಪಾಲ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ. ಈ ಸಮಿತಿ ಹಣಕಾಸು ಇಲಾಖೆ ಹಾಗೂ ಲೆಕ್ಕಪತ್ರ ಇಲಾಖೆ ನೀಡಿರುವ ಆಡಿಟ್ ವರದಿ ಅನ್ವಯ, ಹಣ ದುರುಪಯೋಗ ಸಂಬಂಧದ ಸಂಪೂರ್ಣ ವಿಚಾರಣೆ ನಡೆಸಿ ಮಾಹಿತಿ ಕಲೆ ಹಾಕಬೇಕು. ಈ ವಿಚಾರಣೆಯನ್ನು ಎರಡು ತಿಂಗಳೊಳಗೆ ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ವಿಚಾರಣೆಗೊಳಪಡುವ ಅಧಿಕಾರಿಗಳ ಪಟ್ಟಿ: ಪ್ರೊ.ಮಾನೆ ಡಿ.ಎ, ಪ್ರೊ.ಸಿ. ಬಸವರಾಜು, ಡಾ.ನಿಂಗಮ್ಮ ಬೆಸ್ತೂರು. ಪ್ರೊ.ಟಿ.ಕೆ.ಉಮೇಶ್, ಪ್ರೊ.ಆಯಿಷಾ ಶರೀಫ್ ಹಾಗೂ ಪ್ರೊ. ಜಿ.ಹೇಮಂತ್ ಕುಮಾರ್ (ವಿಶ್ರಾಂತ ಕುಲಪತಿಗಳು), ಪ್ರೊ.ಆರ್.ರಾಜಣ್ಣ, ಡಿ ಭಾರತಿ (ಕೆಎಎಸ್), ಪ್ರೊ.ಲಿಂಗರಾಜ್ ಗಾಂಧಿ, ಪ್ರೊ.ಆರ್. ಶಿವಪ್ಪ (ಕುಲಸಚಿವರು), ಪ್ರೊ.ಬಿ. ಮಹಾದೇವಪ್ಪ, ಪ್ರೊ.ಟಿ.ದೇವರಾಜು (ಹಣಕಾಸು ಅಧಿಕಾರಿ), ಚೇತನ್ (ಕುಲಪತಿ ವಿಶೇಷಾಧಿಕಾರಿ) ಇವರನ್ನು ವಿಚಾರಣೆಗೆ ಒಳಪಡಿಸಿ ಎರಡು ತಿಂಗಳೊಳಗೆ ರಾಜ್ಯಪಾಲರ ಕಚೇರಿಗೆ ವರದಿ ನೀಡುವಂತೆ ಆದೇಶಿಸಿದ್ದಾರೆ.

ಶೇ.59.71ರಷ್ಟು ಮತದಾನ

ಶೇ. 57.54, ಉತ್ತರಾಖಂಡದ 5 ಕ್ಷೇತ್ರಗಳಲ್ಲಿ ಶೇ. 53.56 ರಷ್ಟು ಮತದಾನ ನಡೆದಿದೆ.

ಮಣಿಪುರದಲ್ಲಿ ಗುಂಡಿನ ದಾಳಿ, ಬಂಗಾಳದಲ್ಲಿ ಹಿಂಸಾಚಾರ: ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ಪ್ರಕ್ರಿಯೆಯಲ್ಲಿ 21 ಹಿಂಸಾಚಾರ ನಡೆದಿದೆ.

ಕಳೆದ ಕೆಲ ತಿಂಗಳ ಹಿಂದೆ ಭಾರೀ ಗಲಭೆ ನಡೆದು ವಿಶ್ವದಾದ್ಯಂತ ಸುದ್ದಿಗೆ ಗ್ರಾಸವಾಗಿದ್ದ ಮಣಿಪುರದಲ್ಲಿ ಇಂದು ಮತ್ತೆ ಹಿಂಸಾಚಾರ ಸಂಭವಿಸಿದೆ. ಮತದಾನ ನಡೆಯುವ ವೇಳೆ ಗುಂಡಿನ ದಾಳಿ ನಡೆದಿದೆ. ಪೂರ್ವ ಇಂಫಾಲ್‌ನ ಮತಗಟ್ಟೆಯೊಂದರಲ್ಲಿ ಶಾಂತಿಯುತವಾಗಿ ಮತದಾನ ನಡೆಯುತ್ತಿತ್ತು. ಈ ವೇಳೆ ದುಷ್ಕರ್ಮಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಆಗ ರಕ್ಷಣಾ ಸಿಬ್ಬಂದಿ ಸಹ ಪ್ರತಿದಾಳಿ ನಡೆಸಿದ್ದಾರೆ. ಈ ವೇಳೆ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಘಟನೆಯಿಂದ ಆತಂಕಗೊಂಡ ಮತದಾರರು ಸ್ಥಳದಿಂದ ಪಾರಾಗಲು ಏಕಾಏಕಿ ಎಲ್ಲೆಂದರಲ್ಲಿ ಓಡಿದ್ದಾರೆ. ಚುನಾವಣಾ ಆಯೋಗ ಶಾಂತಿಯುತ ಮತದಾನ ನಡೆಸಲು ಎಷ್ಟೇ ಮುಂಜಾಗ್ರತಾ ಕ್ರಮ ಕೈಗೊಂಡರೂ ಸಹ ದುಷ್ಕರ್ಮಿಗಳು ಅಶಾಂತಿ ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪಶ್ಚಿಮ ಬಂಗಾಳದ ಕೂಚ್ ಬೆಹಾರ್‌ನಲ್ಲಿ ಕಲ್ಲು ತೂರಾಟ ನಡೆದಿದೆ. ಚಂದ್ಮರಿ ಮತ್ತು ಇತರ ಸ್ಥಳಗಳಲ್ಲಿ ದುಷ್ಕರ್ಮಿಗಳು ಇಟ್ಟಿಗೆಗಳನ್ನು ಎಸೆದು ಮತದಾರರನ್ನು ಬೆದರಿಸಿದ್ದಾರೆ. ಮತದಾನ ಕೇಂದ್ರಗಳಿಗೆ ಹೋಗದಂತೆ ತಡೆದಿದ್ದಾರೆ. ಕೂಚ್‌ಬೆಹರ್‌ನ ದಿನ್‌ಹಟಾ ಗ್ರಾಮದಿಂದ ಬಾಂಬ್ ವಶಪಡಿಸಿಕೊಳ್ಳಲಾಗಿದ್ದು, ಈ ಭಾಗದ ಬಿಜೆಪಿ ಬೂತ್ ಅಧ್ಯಕ್ಷರ ಮನೆ ಮೇಲೆ ತೃಣಮೂಲ ಕಾರ್ಯಕರ್ತರು ಬಾಂಬ್ ಎಸೆದಿದ್ದಾರೆ. ಚಂದಮಾರಿ ಪ್ರದೇಶದಲ್ಲಿ ಟಿಎಂಸಿ ಕಾರ್ಯಕರ್ತರು ಕಲ್ಲು ತೂರಾಟ ನಡೆಸಿದ್ದು, ಬಿಜೆಪಿ ಬೂತ್ ಅಧ್ಯಕ್ಷರು ಗಾಯಗೊಂಡಿದ್ದಾರೆ. ಜೊತೆಗೆ ತಮ್ಮ ಪಕ್ಷದ ಪೋಲಿಂಗ್ ಏಜೆಂಟ್ ಬಿಸ್ವನಾಥ್ ಪಾಲ್ ಅವರನ್ನು ಟಿಎಂಸಿ ಪಕ್ಷದ ಕಾರ್ಯಕರ್ತರು ಮತಗಟ್ಟೆಯಿಂದ ಅಪಹರಿಸಿದ್ದಾರೆ ಎಂದು ಬಂಗಾಳದ ಬಿಜೆಪಿ ಹೇಳಿಕೊಂಡಿದೆ. ಛತ್ತೀಸ್‌ಗಢದ ಬಿಜಾಪುರದ ಗಲ್ಗಾಮ್ ಪ್ರದೇಶದ ಮತಗಟ್ಟೆಯಿಂದ 500 ಮೀಟರ್ ದೂರದಲ್ಲಿರುವ ನಕ್ಸಲ್ ಪೀಡಿತ ಬಸ್ಗಾರ್ ಪ್ರದೇಶದಲ್ಲಿ ಚುನಾವಣೆ ನಡೆಯುತ್ತಿರುವಾಗ ಬರೇಲ್ ಗ್ರೆನೇಡ್ ಲಾಂಚರ್ (UBGL) ಸೆಲ್ ಸ್ಫೋಟಗೊಂಡಿದೆ. ಈ ವೇಳೆ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದ ಭದ್ರತಾ ಸಿಬ್ಬಂದಿಯೊಬ್ಬರು ಗಾಯಗೊಂಡಿದ್ದಾರೆ.

ಮತದಾನವಷ್ಟೇ ಬಾಕಿ

ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ ಜಾರಕಿಹೊಳಿ ಚಿಕ್ಕೋಡಿಯಿಂದಲೂ, ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತ ಪಾಟೀಲ್ ಬಾಗಲಕೋಟೆಯಿಂದಲೂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಳಿಯ ರಾಧಾಕೃಷ್ಣ ಕಲಬುರಗಿಯಿಂದ, ಈಶ್ವರಖಂಡ್ರೆ ಪುತ್ರ ಸಾಗರ್ ಖಂಡ್ರೆ ಬೀದರ್‌ನಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿದಿದ್ದಾರೆ. ಇನ್ನು ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಬೆಳಗಾವಿಯಿಂದ, ಬಸವರಾಜ ಬೊಮ್ಮಾಯಿ ಹಾವೇರಿಯಿಂದಲೂ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ ಶಿವಮೊಗ್ಗದಿಂದ, ಮಾಜಿ ಸಚಿವ ಬಿ.ಶ್ರೀರಾಮುಲು ಬಳ್ಳಾರಿಯಿಂದ, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಧಾರವಾಡದಿಂದ, ಮತ್ತೊಬ್ಬ ಮಂತ್ರಿ ಭಗವಂತ ಖೂಬಾ ಬೀದರ್‌ನಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಮೊದಲನೇ ಹಂತಕ್ಕಿಂತ ಎರಡನೇ ಹಂತದಲ್ಲಿ ಪ್ರಭಾವಿಗಳ ಮುಂದೆ ಪ್ರಭಾವಿಗಳೇ ಸೆಣಸಾಟಕ್ಕೆ ಇಳಿದಿದ್ದಾರೆ. ಕೇಂದ್ರ ಮತ್ತು ರಾಜ್ಯದ ಪ್ರಭಾವೀ ಮುಖಂಡರು ಮೊದಲ ಹಂತದ 14 ಕ್ಷೇತ್ರಗಳಲ್ಲೇ ಚುನಾವಣಾ ಪ್ರಚಾರ ಕೈಗೊಂಡಿದ್ದು, ಈ ಭಾಗದಲ್ಲಿ ಏಪ್ರಿಲ್ 24ರ ಸಂಜೆಗೆ ಬಹಿರಂಗ ಪ್ರಚಾರ ಅಂತ್ಯ ಗೊಳ್ಳಲಿದೆ.

ಇಂದಿನಿಂದ ಅವಕಾಶ

25 ಅಂಕಗಳಿಗೆ ಪ್ರಾಧಿಕಾರದಿಂದ ಗ್ರೇಸ್ ಮಾರ್ಕ್ ಏನಾದರೂ ಕೊಡಲಾಗುವುದೇ? ಅಥವಾ ಕೆಇಎ ಉಂಟು ಮಾಡಿರುವ ಈ ಗೊಂದಲದಿಂದ ಬಲಿಪಶುಗಳಾಗುತ್ತಿರುವ ವಿದ್ಯಾರ್ಥಿಗಳಿಗೆ ಪರಿಹಾರವೇನು? ಎಂಬುದರ ಬಗ್ಗೆ ಏನನ್ನೂ ಹೇಳಿಲ್ಲ. ಆಕ್ಷೇಪಣೆ ಸಲ್ಲಿಸಲು ನಾಳೆ ಕೆಇಎ ವೆಬ್‌ಸೈಟ್‌ನಲ್ಲಿ ಲಿಂಕ್ ಬಿಡುಗಡೆ ಮಾಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಸದರಿ ಲಿಂಕ್ ಮೂಲಕ ಆಕ್ಷೇಪಣೆ ಸಲ್ಲಿಸುವ ವಿದ್ಯಾರ್ಥಿಗಳ ವಿಚಾರದಲ್ಲಿ ಮಾತ್ರ ಕೆಇಎ ತೀರ್ಮಾನ ಕೈಗೊಳ್ಳುತ್ತದೆಯೇ? ಅಥವಾ ಪರೀಕ್ಷೆ ಬರೆದಿರುವ 3 ಲಕ್ಷಕ್ಕೂ ಅಧಿಕವಿರುವ ವಿದ್ಯಾರ್ಥಿಗಳ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುತ್ತದೆಯೇ ಎಂಬುದೂ ಕೂಡ ಗೊಂದಲದ ಗೂಡಾಗಿದೆ. ಪಠ್ಯಕ್ಕೆ ಹೊರತಾದ 25 ಪ್ರಶ್ನೆಗಳನ್ನು ಕೇಳಿರುವುದು ಸ್ಪಷ್ಟವಾಗಿರುವಾಗ ಸದರಿ ಪ್ರಶ್ನೆಗಳಿಗೆ ಸಂಬಂಧಿಸಿದ ಅಂಕಗಳ ವಿಚಾರವಾಗಿ ಕೆಇಎ ಸಾಮೂಹಿಕವಾಗಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ತೀರ್ಮಾನ ಕೈಗೊಳ್ಳಬೇಕು. ಅದನ್ನು ಬಿಟ್ಟು ಆಕ್ಷೇಪಣೆ ಸಲ್ಲಿಸುವಂತೆ ಕೇಳಿರುವುದು ಯಾಕೆ? ಎಂದು ಪೋಷಕರೊಬ್ಬರು ಪ್ರಶ್ನಿಸಿದ್ದಾರೆ.

ಸಾವಿರಾರು ವಿದ್ಯಾರ್ಥಿಗಳು ಗೈರು: ಎರಡನೇ ದಿನವಾದ ಇಂದು ಮೈಸೂರಿನಲ್ಲಿ ನಡೆದ ಸಿಇಟಿಗೆ ಒಟ್ಟು 2263 ವಿದ್ಯಾರ್ಥಿಗಳು ಗೈರಾಗಿದ್ದಾರೆ ಎಂದು ಮೈಸೂರು ಜಿಲ್ಲಾ ಡಿಡಿಪಿಯು ಎಂ.ಮರಿಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಭೌತಶಾಸ್ತ್ರ ವಿಷಯದ ಪರೀಕ್ಷೆಗೆ ಜಿಲ್ಲೆಯಲ್ಲಿ 17,137 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಅವರಲ್ಲಿ 1185 ಮಂದಿ ಗೈರು ಹಾಜರಾಗಿ 15,952 ಮಂದಿ ಪರೀಕ್ಷೆ ಬರೆದಿದ್ದಾರೆ. ರಸಾಯನ ಶಾಸ್ತ್ರ ವಿಷಯದ ಪರೀಕ್ಷೆಗೆ 17,137 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಅವರ ಪೈಕಿ 1078 ಮಂದಿ ಗೈರಾಗಿದ್ದು, 16,059 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ ಎಂದು ಹೇಳಿದರು. ಗುರುವಾರ ನಡೆದ ಜೀವಶಾಸ್ತ್ರ ಮತ್ತು ಗಣಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಗೊಂದಲವಿತ್ತು ಎಂದು ಕೆಲ ವಿದ್ಯಾರ್ಥಿಗಳು ನನಗೆ ತಿಳಿಸಿದ್ದರು. ಆದರೆ ಆ ಬಗ್ಗೆ ಅಧಿಕೃತವಾಗಿ ಯಾರೂ ದೂರು ಸಲ್ಲಿಸಿಲ್ಲ. ಇಂದು ನಡೆದ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಗಳಲ್ಲಿ ಗೊಂದಲವಿದ್ದುದಾಗಿ ಯಾವೊಬ್ಬ ವಿದ್ಯಾರ್ಥಿಯೂ ಮೌಖಿಕವಾಗಿ ಕೂಡ ತಮಗೆ ತಿಳಿಸಿಲ್ಲ ಎಂದು ಹೇಳಿದ ಮರಿಸ್ವಾಮಿ, ಮೈಸೂರು ನಗರ ಸೇರಿ ಜಿಲ್ಲೆಯಾದ್ಯಂತ ಒಟ್ಟು 39 ಕೇಂದ್ರಗಳಲ್ಲಿ ನಡೆದ ಸಿಇಟಿಗೆ ಸಮರ್ಪಕವಾದ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ಹೇಳಿದರು.

ಬೆಂಗಳೂರಲ್ಲಿ ಅನ್ಯಕೋಮಿನ ಗುಂಪಿನಿಂದ ನಟಿ ಹರ್ಷಿಕಾ ದಂಪತಿ ಮೇಲೆ ಹಲ್ಲೆ




ಬೆಂಗಳೂರು, ಏ.19– ಸ್ಯಾಂಡಲ್‌ವುಡ್ ನಟಿ ಹರ್ಷಿಕಾ ಮತ್ತು ನಟ ಭುವನ್ ಪೊನ್ನಣ್ಣ ದಂಪತಿ ಬೆಂಗಳೂರಿನಲ್ಲಿ ರೆಸ್ಟೋರೆಂಟ್‌ವೊಂದಕ್ಕೆ ಊಟಕ್ಕೆ ಹೋದಾಗ, ಅಲ್ಲಿನ ಕೆಲವರು ಇವರ ಮೇಲೆ ಹಲ್ಲೆ ಮಾಡಿದ್ದಾರೆಂದು ತಿಳಿದುಬಂದಿದೆ. ಈ ಬಗ್ಗೆ ಸ್ವತಃ ಹರ್ಷಿಕಾ ಅವರೇ ಸಾಮಾಜಿಕ ಜಾಲತಾಣಗಲ್ಲಿ ಪೋಸ್ಟ್ ಮಾಡಿದ್ದಾರೆ.

ಒಂದೆರಡು ದಿನಗಳ ಹಿಂದೆ ಫ್ರೇಜರ್ ಟೌನ್ ಪ್ರದೇಶದ ಸಮೀಪವಿರುವ ಪುಲಿಕೇಶಿ ನಗರದ ಮಸೀದಿ ರಸ್ತೆಯಲ್ಲಿರುವ ರೆಸ್ಟೋರೆಂಟ್‌ವೊಂದರಲ್ಲಿ ಸಂಜೆ ಕುಟುಂಬದೊಂದಿಗೆ ಊಟ ಮಾಡಲು ತೆರಳಿದ್ದೆ. ಭೋಜನ ಮುಗಿಸಿದ ನಂತರ ನಾವು ಪಾರ್ಕಿಂಗ್‌ನಿಂದ ನಮ್ಮ ವಾಹನವನ್ನು ತೆಗೆದುಕೊಂಡು ಹೊರಡುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಬಂದು ನಿಮ್ಮ ವಾಹನ ತುಂಬಾ ದೊಡ್ಡದಾಗಿದೆ, ಇದ್ದಕ್ಕಿದ್ದಂತೆ ಚಲಿಸಿದಲ್ಲಿ ಅದು ನಮಗೆ ತಗುಲಬಹುದು' ಎಂದು ವಾದಿಸಿದರು.

ಬಳಿಕ ನಾವು ವಾಹನವನ್ನು ಸ್ವಲ್ಪ ಮುಂದಕ್ಕೆ ಚಲಾಯಿಸಿದೆವು. ಅಷ್ಟರೊಳಗೆ ಆ ಇಬ್ಬರು ವ್ಯಕ್ತಿಗಳು ಈ ಲೋಕಲ್ ಕನ್ನಡಿಗರಿಗೆ ಪಾಠ ಕಲಿಸಬೇಕು ಎಂದು ಹೇಳಿ ನನ್ನ ಪತಿಯ ಮುಖದ ಮೇಲೆ ಹೊಡೆಯಲು ಪ್ರಯತ್ನಿಸಿದರು.

2–3 ನಿಮಿಷಗಳಲ್ಲಿ ಅದೇ ಗ್ಯಾಂಗ್‌ನ 20–30 ಸದಸ್ಯರ ಗುಂಪು ಸ್ಥಳದಲ್ಲಿ ಜಮಾಯಿಸಿತು. ಅವರಲ್ಲಿ ಇಬ್ಬರು ನನ್ನ ಗಂಡನ ಚಿನ್ನದ ಸರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ನನ್ನ ಪತಿ ತಕ್ಷಣವೇ ಸರವನ್ನು ನನ್ನ ಕೈಗೆ ಕೊಟ್ಟರು. ಇದರಿಂದ ರೊಚ್ಚಿಗೆದ್ದ ಗುಂಪು ನಮ್ಮ ವಾಹನಕ್ಕೆ ಹಾನಿ ಮಾಡಿ, ನಮಗೆ ಅಥವಾ ಯಾರಿಗೂ ಅರ್ಥವಾಗದ ಭಾಷೆಯಲ್ಲಿ ನಮ್ಮನ್ನು ನಿಂದಿಸಲು ಆರಂಭಿಸಿದರು.

ನಾವು ಪಾಕಿಸ್ತಾನದಲ್ಲಿ ಅಥವಾ ಅಫ್ಘಾನಿಸ್ತಾನದಲ್ಲಿ ವಾಸಿಸುತ್ತಿದ್ದೇವೆಯೇ? ಹಾಗಿದ್ದರೆ ನಾವು ನಮ್ಮ ಊರಿನಲ್ಲಿ ಕನ್ನಡ ಮಾತನಾಡುವುದೇ ತಪ್ಪಾ? ನಮ್ಮ ಸ್ವಂತ ನಗರದಲ್ಲಿ ನಾವು ಎಷ್ಟು ಸುರಕ್ಷಿತವಾಗಿದ್ದೇವೆ? ನಮ್ಮ ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು, ಇಂತಹ ದೀರ್ಘಾವಧಿಯ ಮಾನಸಿಕ ಆಘಾತಕ್ಕೆ ಕಾರಣವಾಗುವ ಇಂತಹ ಘಟನೆಗಳನ್ನು ಮುಚ್ಚಿ ಹಾಕಬೇಕೆ? ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕರ್ನಾಟಕದ ರಾಜ್ಯ ಪೊಲೀಸ್ ಇಲಾಖೆಯವರು ಈ ಬಗ್ಗೆ ವಿಚಾರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ ಎಂದು ಹರ್ಷಿಕಾ ಮನವಿ ಮಾಡಿಕೊಂಡಿದ್ದಾರೆ.



ಸೃಷ್ಟಿಕರ್ತ ಬ್ರಹ್ಮನೆ ಬಂದರೂ ಸಂವಿಧಾನ ಬದಲಾವಣೆ ಅಸಾಧ್ಯ

ಆದರೂ ಬಿಜೆಪಿ ವಿರುದ್ಧ ಕಾಂಗ್ರೆಸ್ ನಾಯಕರಿಂದ ಅಪಪ್ರಚಾರ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಮುಖಂಡ ಅಪ್ಪಣ್ಣ ಮಾತನಾಡಿದರು.

ಮೈಸೂರು, ಏ.19(ಬಿಎಲ್‌ಯು)– ಬಿಜೆಪಿ ಸಂವಿಧಾನ ಬದಲಾಯಿಸುತ್ತದೆ ಎಂದು ಕಾಂಗ್ರೆಸ್ ನಾಯಕರು ಆಧಾರ ರಹಿತ ಆರೋಪ ಮಾಡುತ್ತಿದ್ದು, ಸೃಷ್ಟಿಕರ್ತ ಬ್ರಹ್ಮನೆ ಬಂದರೂ ಸಂವಿಧಾನ ಬದಲಾವಣೆ ಅಸಾಧ್ಯ ಈ ವಾಸ್ತವತೆ ತಿಳಿದೂ ಕಾಂಗ್ರೆಸ್ ನಾಯಕರು ರಾಜಕೀಯ ಲಾಭಕ್ಕಾಗಿ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಅಪ್ಪಣ್ಣ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಸಂವಿಧಾನ ಬದಲಾವಣೆ ಮಾಡುವುದು ಸಾಧ್ಯವಿಲ್ಲ. ಸ್ವತಃ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೇ ಇದನ್ನು ಸಾಕಷ್ಟು ಬಾರಿ ಸ್ಪಷ್ಟಪಡಿಸಿದ್ದಾರೆ. ಆದರೂ ಬಿಜೆಪಿ ವಿರುದ್ಧ ಇಂತಹ ಸುಳ್ಳು ಆರೋಪ ಮಾಡಿ ಒಂದು ವರ್ಗವನ್ನು ಬಿಜೆಪಿ ವಿರುದ್ಧ ಎತ್ತಿಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ನಾಯಕ ಸಮುದಾಯಕ್ಕೆ ಏನಾದರೂ ಸ್ಥಾನಮಾನ ಹಾಗೂ ನ್ಯಾಯ ಸಿಕ್ಕಿದ್ದರೆ ಅದಕ್ಕೆ ಬಿಜೆಪಿ ಕಾರಣ. ಬಿಜೆಪಿ ಸರ್ಕಾರ ಇದ್ದಾಗ ನಾಯಕ ಸಮುದಾಯದ ಪರ ಹಲವು ಯೋಜನೆಗಳು ಜಾರಿಗೊಂಡಿದ್ದವು. ಆದರೆ ನಾಯಕ ಸಮುದಾಯಕ್ಕೆ ಯಾವುದೇ ಸೌಲಭ್ಯ ಕಲ್ಪಿಸದೆ, ನಾಯಕ ಸಮುದಾಯದ ಪರ ಯಾವುದೇ ಯೋಜನೆ ಜಾರಿಗೊಳಿಸದ ಕಾಂಗ್ರೆಸ್ ಮೂಗಿಗೆ ತುಪ್ಪ ಸವರಿದೆ ಎಂದು ಅಪ್ಪಣ್ಣ ಕಿಡಿಕಾರಿದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ ಹೆಚ್.ಡಿ.ಕುಮಾರಸ್ವಾಮಿ, ಪ್ರತಾಪ್‌ಸಿಂಹ ಸೇರಿದಂತೆ ಹಲವು ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ನಾಯಕ ಸಮುದಾಯದ ಪರ ಹೋರಾಟ ಮಾಡಿ ನ್ಯಾಯ ಕಲ್ಪಿಸಿದ್ದಾರೆ ಎಂದು ತಿಳಿಸಿದರು.

ಮೈಸೂರು ಕೊಡಗು ಹಾಗೂ ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಯಲ್ಲಿ ನಾಯಕ ಸಮುದಾಯದವರು ಬಿಜೆಪಿ ಹಾಗೂ ಜೆಡಿಎಸ್ ಅಭ್ಯರ್ಥಿಗಳನ್ನು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಾಯಕ ಸಮುದಾಯಕ್ಕೂ ಮೈಸೂರು ಅರಮನೆಗೂ ಭಾವನಾತ್ಮಕ ಸಂಬಂಧವಿದೆ. ಇದರಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ನಾಯಕ ಸಮುದಾಯದವರು ಸಂಪೂರ್ಣವಾಗಿ ಬೆಂಬಲಿಸಲಿದ್ದಾರೆ ಎಂದು ಅಪ್ಪಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಸಿದ್ದರಾಜು, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಶಾರದಾದೇವಿನಗರದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ್ ಒಡೆಯರ್ ಅವರ ಪರವಾಗಿ ಮೈಸೂರು ನಗರ ಬಿಜೆಪಿ ಪ್ರಧಾನಕಾರ್ಯದರ್ಶಿ ಬಿ.ಎಂ.ರಘು ಮತಯಾಚಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಉಪಾಧ್ಯಕ್ಷರಾದ ಹೆಚ್.ಜಿ.ರಾಜಮಣಿ, ಲಲಿತಾ, ಶಿವಕುಮಾರ್, ಹೇಮಲತಾ, ಲೀಲಾ, ರಮಬಾಯಿ, ರವಿ ಅರಸ್, ರಮೇಶ್, ಕಲಾವತಿ, ಲಕ್ಷ್ಮಿ, ನೇತ್ರಾವತಿ, ಪದ್ಮಾವತಿ, ರಾಧಾಮಣಿ, ಪ್ರವೀಣ, ರಾಧಾ, ಸುಮಾ, ಶ್ರುತಿ ಮತ್ತಿತರರು ಪ್ರಚಾರದಲ್ಲಿ ಪಾಲ್ಗೊಂಡಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್ ಗ್ರಾಮದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಒಡೆಯರ್ ಅವರ ಪರವಾಗಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿಯ ಮುಖಂಡರಾದ ಎ.ಶ್ರೀನಿವಾಸ್, ರಾಜ್‌ಕುಮಾರ್, ಕೇಬಲ್ ಪಾಪಣ್ಣ, ಕ್ಷೇತ್ರದ ಉಪಾಧ್ಯಕ್ಷ ಹಿನಕಲ್ ಗಣೇಶ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷೆ ಶಾಲಿನಿ ಕುಮಾರ್, ಪ್ರಧಾನ ಕಾರ್ಯದರ್ಶಿ ನಾರಾಯಣ್, ಶಿವಣ್ಣ, ರಮೇಶ, ವೆಂಕಟೇಶ ರಾವ್, ಪಿಗ್ಮಿ ಪ್ರಕಾಶ್, ಇಂದ್ರ, ಶಿವಣ್ಣಚಾರ್, ಹರೀಶ, ಕೆ.ಜಿ. ಪ್ರಕಾಶ್, ನಾಗರಾಜು, ರಾಘವೇಂದ್ರ ಪ್ರಸಾದ್, ಟಿ.ಆರ್.ರಾಜು, ಜಯಂತು ಸೇರಿದಂತೆ ಇನ್ನಿತರರು ಹಾಜರಿದ್ದರು.

ಶಾಂತಿ, ಸಹಬಾಳ್ವೆಗೆ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿ

ಸಚಿವ ಕೆ.ವೆಂಕಟೇಶ್ ಮನವಿ



ಪಿರಿಯಾಪಟ್ಟಣ, ಏ.19(ಎಂಟಿವೈ)– ಶ್ರೀಮಂತರ ಪರ, ಒಡೆದು ಆಳುವ ನೀತಿ ಅನುಸರಿಸುತ್ತಿರುವ ಬಿಜೆಪಿಯಿಂದ ಸಮಾಜದ ಸಾಮರಸ್ಯ ಹಾಳಾಗುತ್ತಿದ್ದು, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡಿ ಜನರಿಗೆ ಶಾಂತಿ, ಸಹಬಾಳ್ವೆಯ ಜೀವನ ಕಲ್ಪಿಸಲು ಎಲ್ಲರೂ ಪಣ ತೊಡಬೇಕು ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ, ಕಿರನಲ್ಲಿ, ಬೆಟ್ಟದಪುರ, ರಾಮನಾಥತುಂಗಾ, ದೊಡ್ಡಬೇಲಾಳು, ರಾವಂದೂರು, ಎನ್.ಶೆಟ್ಟಿಹಳ್ಳಿ, ಹಂಡಿತವಳ್ಳಿ, ಕಿತ್ತೂರು, ಬೆಟ್ಟದತುಂಗ, ಹಲಗನಹಳ್ಳಿ, ಚಪ್ಪರದಳ್ಳಿ, ಕಣಗಾಲು, ದೊಡ್ಡಕಮರವಳ್ಳಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಬಿರುಸಿನ ಮತಯಾಚನೆ ಮಾಡಿ, ಮಾತನಾಡಿದರು.

ಕೇಂದ್ರದಲ್ಲಿ ಕಳೆದ 10 ವರ್ಷದಿಂದ ಅಧಿಕಾರ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಬಡವರ ಪರ ಒಂದೇ ಒಂದು ಯೋಜನೆಯನ್ನೂ ಜಾರಿಗೊಳಿಸಲಿಲ್ಲ. ಆದರೆ, ಶ್ರೀಮಂತರ ಪರ ನಿಲುವು ತಾಳುವ ಮೂಲಕ ಬಡವರನ್ನು ನಿರ್ಲಕ್ಷಿಸಿದೆ. ಬಡವರ ಕಷ್ಟ, ನೋವು ಆಲಿಸುವುದಕ್ಕೂ ಬಿಜೆಪಿ ಹಿಂದೇಟು ಹಾಕಿದೆ. ಕೇವಲ ಹಿಂದು–ಮುಸ್ಲಿಂ ಅಸ್ತ್ರವನ್ನು ಪ್ರಯೋಗಿಸಿ ಜನರನ್ನು ಪ್ರಚೋದಿಸುತ್ತಿದೆ. ಇದರಿಂದ ಸಮಾಜದಲ್ಲಿ ಶಾಂತಿ ಹಾಳಾಗಿದೆ. ಅಲ್ಪಸಂಖ್ಯಾಂತರನ್ನು ಕಡೆಗಣಿಸಿದೆ. ಒಡೆದು ಆಳುವ ನೀತಿ ಅನುಸರಿಸಿ ರಾಜಕೀಯ ಲಾಭ ಮಾಡಿಕೊಳ್ಳುತ್ತಿದೆ. ಸಹೋದರರಂತೆ ಜೀವಿಸುತ್ತಿರುವ ಹಿಂದೂ–ಮುಸ್ಲಿಂ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಜನ ಬೇಸತ್ತಿದ್ದು, ಲೋಕಸಭಾ ಚುನಾವಣೆಯಲ್ಲಿ ಕೋಮುವಾದಿ ಶಕ್ತಿಗಳಿಗೆ ತಕ್ಕ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಪಿರಿಯಾಪಟ್ಟಣದಲ್ಲಿ ಹೆಚ್ಚಿನ ಲೀಡ್ ಕೊಡಬೇಕು. ಕಾಂಗ್ರೆಸ್ ಪಕ್ಷ ಬಲಗೊಳಿಸುವ ಸಂದರ್ಭ ಬಂದಿದೆ. ಇದನ್ನು ಸದುಪಯೋಗ ಮಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. ದೇಶದ ಪರಿಸ್ಥಿತಿ ಹೇಗಿದೆ ಎಂಬುದನ್ನು ಅರಿಯಬೇಕು. ಮತ ನೀಡಬೇಕು. ಕಾಂಗ್ರೆಸ್ ಪಕ್ಷ ಎಂದಿಗೂ ಜಾತಿ ಭೇದ ಮಾಡಲ್ಲ. ತುಳಸಿ ದಾಸಪ್ಪ ಅವರ ಬಳಿಕ ಒಕ್ಕಲಿಗ ಸಮುದಾಯದವರಿಗೆ ಒಂದು ಅವಕಾಶ ಕೊಟ್ಟಿದೆ. ಎಲ್ಲಾ ಸಮುದಾಯದವರಿಗೂ ಅವಕಾಶ ಕೊಡುವುದು ಕಾಂಗ್ರೆಸ್ ಪಕ್ಷ ಮಾತ್ರ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ಕೇವಲ ಮೂರು ಸ್ಥಾನ ತೆಗೆದುಕೊಂಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಅವಕಾಶ ಕೊಡಬೇಕು ಸ್ವಾರ್ಥಕ್ಕಾಗಿ ರಾಜಕಾರಣ ಮಾಡಬಾರದು. ಅದಕ್ಕೆ ನಮ್ಮ ಪಕ್ಷ ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ನೀಡಿರುವುದು. ಈ ಬಾರಿ ದಯಮಾಡಿ ಅವರನ್ನು ಗೆಲ್ಲಿಸಿ ಕೊಡಿ ತಪ್ಪದೇ ಮತದಾನ ಮಾಡಿ ಎಂದರು.

ಹಲಗನಹಳ್ಳಿಯಲ್ಲಿ ಪ್ರಚಾರದ ವೇಳೆ ನಜ್ಮಾ ನಜೀರ್ ಮಾತನಾಡಿ, ಈ ಚುನಾವಣೆಯು ಸ್ವಾತಂತ್ರ್ಯ ಹೋರಾಟದಂತೆ ನಡೆಯುತ್ತಿದೆ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ದಲಿತರಿಗೆ ಅವರ ಹಕ್ಕುಗಳು ಸಿಗಬೇಕಾದರೆ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಇರಬೇಕು ಎಂದರು.

ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ನಮ್ಮ ನಾಯಕರ ಸಂಪೂರ್ಣ ಬೆಂಬಲ ನನ್ನ ಮೇಲೆ ಇದೆ. ನಮ್ಮ ಜಿಲ್ಲೆಯಲ್ಲಿ ಅತೀ ಹೆಚ್ಚು ರೈತರು ಇದ್ದಾರೆ. ದೇಶದಲ್ಲಿ 3 ಲಕ್ಷ ಕೋಟಿ ರೈತರ ಸಾಲ ಇದೆ. ಅದನ್ನು ಮನ್ನಾ ಮಾಡಲು ಬಿಜೆಪಿ ಮುಂದಾಗಿಲ್ಲ. ರೈತರ ವಿರೋಧಿಗಳಾಗಿದ್ದಾರೆ. ದೇಶದ ಜನರನ್ನು ಭಿಕ್ಷೆ ಬೇಡಲು ಬಿಡುತ್ತಿದ್ದಾರೆ ಅಶಾಂತಿ ನಿರ್ಮಿಸಿ, ಬಡಮಕ್ಕಳನ್ನು ಪ್ರಚೋದಿಸಿ ತಮ್ಮ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿರುವ ಬಿಜೆಪಿಯನ್ನು ತಿರಸ್ಕರಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್, ಸಚಿವ ಕೆ.ವೆಂಕಟೇಶ್ ಪುತ್ರ ನಿತಿನ್, ಬ್ಲಾಕ್ ಕಾಂಗ್ರೆಸ್ ಹಾಲಿ, ಮಾಜಿ ಅಧ್ಯಕ್ಷರು, ಮಾಜಿ ಜಿಪಂ ಸದಸ್ಯರು, ಪದಾಧಿಕಾರಿಗಳು, ಮಾಜಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷರು, ಗ್ರಾಮದ ಮುಖಂಡರು, ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

ಯದುವೀರ್ ಗೆಲುವಿಗಾಗಿ ಮಹಿಳೆಯರಿಂದ ನಾಳೆ ಚಾಮುಂಡಿಬೆಟ್ಟ ಹತ್ತುವ ಕಾರ್ಯಕ್ರಮ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಗೆಲುವಿಗೆ ಮಹಿಳೆಯರು ಏಪ್ರಿಲ್ 21 ರಂದು ಹಮ್ಮಿಕೊಂಡಿರುವ ಚಾಮುಂಡಿಬೆಟ್ಟ ಹತ್ತುವ ಕಾರ್ಯಕ್ರಮದ ಪೋಸ್ಟರ್ ಅನ್ನು ಮೈಸೂರು ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಬಿಡುಗಡೆ ಮಾಡಲಾಯಿತು.

ಮೈಸೂರು, ಏ.19(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಗೆಲುವಿಗಾಗಿ ಸಾವಿರಾರು ಮಹಿಳೆಯರು ನಾಡದೇವತೆ ತಾಯಿ ಚಾಮುಂಡೇಶ್ವರಿ ಪ್ರಾರ್ಥಿಸಿ, ಏಪ್ರಿಲ್ 21ರಂದು ಚಾಮುಂಡಿ ಬೆಟ್ಟ ಹತ್ತಲಿದ್ದಾರೆ ಎಂದು ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರದ ಮಹಿಳಾ ಕಾರ್ಯದ ಸಂಚಾಲಕಿ ಹೇಮಾ ನಂದೀಶ್ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, 'ವರವ ಕೊಡೆ ಚಾಮುಂಡಿ ವರವ ಕೊಡೆ' ಎಂಬ ಘೋಷ ವಾಕ್ಯದೊಂದಿಗೆ ಮೆಟ್ಟಿಲು ಹತ್ತುವ ಮೂಲಕ ಯದುವೀರ್ ಗೆಲುವಿಗೆ ಶಕ್ತಿ ದೇವತೆ ಚಾಮುಂಡೇಶ್ವರಿಯ ಪ್ರಾರ್ಥಿಸಲಾಗುವುದು ಎಂದರು.

ಭಾನುವಾರ ಬೆಳಿಗ್ಗೆ 6.30 ಗಂಟೆಗೆ ಮೆಟ್ಟಿಲು ಹತ್ತಲು ಆರಂಭಿಸಲಾಗುವುದು. ಸುಮಾರು ಮೂರು ಸಾವಿರ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮಹಿಳೆಯರ ನಡಿಗೆ ವಿಜಯದ ಕಡೆಗೆ ಹೆಸರಿನ ಅಂದಿನ ಕಾರ್ಯಕ್ರಮದಲ್ಲಿ ಮಹಿಳೆಯರು ಉತ್ಸಾಹದಿಂದ ಚಾಮುಂಡಿಬೆಟ್ಟ ಹತ್ತಲಿದ್ದಾರೆ. ಮಹಿಳಾ ಸ್ವಸಹಾಯ ಸಂಘಗಳು, ಧರ್ಮಸ್ಥಳ ಸಂಘಗಳು, ಯೋಗ ಸಂಸ್ಥೆಗಳು, ಕ್ರೀಡಾ ಸಂಸ್ಥೆಗಳು ಸೇರಿದಂತೆ ಹಲವು ಸಂಘಟನೆಯ ಮಹಿಳೆಯರು ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಮೈಸೂರು ರಾಜ್ಯವನ್ನಾಳಿದ ಯದುವಂಶಸ್ಥರಿಗೆ ಚಾಮುಂಡೇಶ್ವರಿ ಬಗ್ಗೆ ಅಪಾರ ಭಕ್ತಿ. ಈ ಹಿನ್ನೆಲೆಯಲ್ಲಿ ನಾವು ಕೂಡ ಯದುವೀರ್ ಗೆಲುವಿಗಾಗಿ ಯದುವಂಶಸ್ಥರ ಕುಲದೇವತೆ ಚಾಮುಂಡೇಶ್ವರಿ ಸ್ಮರಿಸಿ, ಪಾದಯಾತ್ರೆ ನಡೆಸುತ್ತಿದ್ದೇವೆ ಎಂದು ಹೇಳಿದರು.

ಕರ್ನಾಟಕ ಮಾತ್ರವಲ್ಲದೆ ಇಡೀ ದೇಶಕ್ಕೆ ಮೈಸೂರು ರಾಜರ ಕೊಡುಗೆ ಅವಿಸ್ಮರಣೀಯ. ಈಗ ಅವರ ಮನೆತನದವರು ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದು, ಅವರನ್ನು ಗೆಲ್ಲಿಸುವಂತೆ ಹೇಮಾ ನಂದೀಶ್ ಮನವಿ ಮಾಡಿದರು.

ಬಿಜೆಪಿ ಮುಖಂಡರಾದ ಲಕ್ಷ್ಮಿ, ಪ್ರಮೀಳಾ ಭರತ್, ಛಾಯ, ಉಷಾ, ಸೌಭಾಗ್ಯ ಮೂರ್ತಿ, ಸವಿತಾ, ಉಮಾ ಜಾದವ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಸಹೋದರ, ದಲಿತ ಮುಖಂಡ ವಿ.ರಾಮಸ್ವಾಮಿ ಅವರು ತಮ್ಮ ಬೆಂಬಲಿಗರೊಡನೆ ನಂಜನಗೂಡಿನಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಯುವ ಮುಖಂಡ ಭರತ್ ರಾಮಸ್ವಾಮಿ, ಸಿ.ಜಿ.ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಅಂಚೆ ಮತದಾನ ಆರಂಭ



ಮೈಸೂರು, ಏ. 19(ಆರ್‌ಕೆ)– ಅತ್ಯವಶ್ಯ ಸೇವೆಯಲ್ಲಿದ್ದು, ಏಪ್ರಿಲ್ 26ರಂದು ನಡೆಯಲಿರುವ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಮತ ಚಲಾಯಿಸಲು ಸಾಧ್ಯವಾಗದ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಗಳಿಗಾಗಿ ಇಂದಿನಿಂದ 3 ದಿನಗಳ ಕಾಲ ಅಂಚೆ ಮತದಾನ ಪ್ರಕ್ರಿಯೆ ಆರಂಭವಾಗಿದೆ.

ಮೈಸೂರಿನ ಹೊಸ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ನೆಲಮಹಡಿಯ ಕೊಠಡಿ ಸಂಖ್ಯೆ 10ರಲ್ಲಿ ಅಂಚೆ ಮತದಾನ ಮಾಡಲು ಮೂರು ದಿನಗಳ ಕಾಲ ಪ್ರತಿನಿತ್ಯ ಬೆಳಗ್ಗೆ 9ರಿಂದ ಸಂಜೆ 5 ಗಂಟೆವರೆಗೆ ಅವಕಾಶ ಕಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

ಮನೆ ಮನೆಗೆ ತೆರಳಿ 85 ವರ್ಷ ಮೇಲ್ಪಟ್ಟ ಹಿರಿಯರು, ಶೇ. 40ಕ್ಕಿಂತ ಹೆಚ್ಚು ಅಂಗವೈಕಲ್ಯವುಳ್ಳವರು ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿತ್ತು. ಏಪ್ರಿಲ್ 13ರಿಂದ 17ರವರೆಗೆ ನಡೆದ ಪ್ರಕ್ರಿಯೆಯಲ್ಲಿ ಶೇ. 96ಕ್ಕಿಂತ ಹೆಚ್ಚು ಮತದಾನವಾಗಿದೆ.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ 1,881 ಹಿರಿಯ ನಾಗರಿಕರ ಪೈಕಿ 1,819 ಮಂದಿ, ಏಪ್ರಿಲ್ 13ರಿಂದ 17 ಮಂದಿ ಹಿರಿಯರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಅದೇ ರೀತಿ 587 ವಿಶೇಷಚೇತನರ ಪೈಕಿ 574 ಮಂದಿ ತಮ್ಮ ಮನೆಗಳಲ್ಲೇ ಮತ ಚಲಾಯಿಸಿದ್ದಾರೆ.

ಭಾರತ ಚುನಾವಣಾ ಆಯೋಗವು ಮತದಾನ ಪ್ರಮಾಣ ಹೆಚ್ಚಿಸುವ ಸಲುವಾಗಿ ಮನೆ ಮನೆ ಮತದಾನ, ಅಂಚೆ ಮತದಾನಕ್ಕೆ ಅವಕಾಶ ಕಲ್ಪಿಸಿದೆಯಲ್ಲದೇ ಸ್ವೀಪ್ ಕಾರ್ಯಕ್ರಮದಡಿ ಜನರಲ್ಲಿ ಮತ ಜಾಗೃತಿ ಅಭಿಯಾನವನ್ನೂ ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ.

ಮೊದಲ ದಿನ 256 ಮಂದಿ ಮತ ಚಲಾವಣೆ: ಮೈಸೂರಿನ ಅಂಚೆ ಮತದಾನ ಕೇಂದ್ರದಲ್ಲಿ ಮೊದಲ ದಿನ 256 ಮಂದಿ ಮತ ಚಲಾಯಿಸಿದ್ದಾರೆ.

ಚುನಾವಣಾ ಆಯೋಗದ ನಿರ್ದೇಶನದಂತೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಅತ್ಯಾವಶ್ಯಕ ಸೇವೆಗಳ ವ್ಯಾಪ್ತಿಗೆ ಬರುವ ಇಲಾಖೆಗಳ ಒಟ್ಟು 915 ನೌಕರರು ಗೈರು ಹಾಜರಿ ಮತದಾರರ ಪ್ರವರ್ಗದಡಿ ನಮೂನೆ–12 ಸಲ್ಲಿಸಿ, ಅಂಚೆ ಮತ ಪತ್ರಕ್ಕಾಗಿ ನೋಂದಾಯಿಸಿಕೊಂಡಿದ್ದು, ಇವರಲ್ಲಿ 256 ಮಂದಿ ಮೊದಲ ದಿನವೇ ಹಕ್ಕು ಚಲಾಯಿಸಿದ್ದಾರೆ. ಉಳಿದವರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮತ ಚಲಾಯಿಸುವಂತೆ ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮನವಿ ಮಾಡಿದ್ದಾರೆ.

ಇಲವಾಲದಲ್ಲಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ವಿತರಿಸಿ, ಮತಯಾಚನೆ



ಮೈಸೂರು ತಾಲೂಕಿನ ಇಲವಾಲದಲ್ಲಿ ಕಾಂಗ್ರೆಸ್ ಗ್ಯಾರಂಟಿ ಯೋಜನೆ ಸಮಿತಿಯ ಅಧ್ಯಕ್ಷ ಅರುಣ್‌ಕುಮಾರ್ ಮನೆ ಮನೆಗೆ ತೆರಳಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿ, ಮತಯಾಚಿಸಿದರು.

ಮೈಸೂರು, ಏ.19(ಎಂಟಿವೈ)– ಮೈಸೂರು ಜಿಲ್ಲಾ ಕಾಂಗ್ರೆಸ್ ಗ್ಯಾರಂಟಿ ಯೋಜನೆ ಸಮಿತಿಯ ಅಧ್ಯಕ್ಷ ಅರುಣ್ ಕುಮಾರ್ ಚಾಮುಂಡೇಶ್ವರಿ ಕ್ಷೇತ್ರದ ಇಲವಾಲದಲ್ಲಿ ಕಾರ್ಯಕರ್ತರೊಂದಿಗೆ ಮನೆ ಮನೆಗೆ ತೆರಳಿ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿ, ಮತಯಾಚಿಸಿದರು.

ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು 5 ಗ್ಯಾರಂಟಿಗಳನ್ನು ಫಲಾನುಭವಿಗಳಿಗೆ ತಲುಪಿಸಿದ್ದಾರೆ. ಬಿಜೆಪಿ ಸರ್ಕಾರ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಸುಳ್ಳು ಹೇಳುತ್ತಾ ಜನರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗಳಿಸಲಿದ್ದು ಈ ಬಾರಿ ಎಂ. ಲಕ್ಷ್ಮಣ ಅವರಿಗೆ ಹೆಚ್ಚು ಮತಗಳನ್ನು ನೀಡುವ ಮೂಲಕ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕೆ.ಎಸ್. ಕರೀಗೌಡ, ಪಾಷಾ, ರಾಮು, ರವಿ, ಶಿವಮ್ಮ, ಚಿಕ್ಕಚೆಲುವ, ರಟ್ನಳ್ಳಿ ಮಹಾದೇವ್ ಉಪಸ್ಥಿತರಿದ್ದರು.

ಗ್ಯಾರಂಟಿ ವಿಚಾರದಲ್ಲಿ ಕುಮಾರಸ್ವಾಮಿ ಮಹಿಳೆಯರ ಅಪಮಾನಿಸಿದ್ದಾರೆ

• ಮಾಜಿ ಸಚಿವೆ ರಾಣಿ ಸತೀಶ್ ಆರೋಪ • ಕಾಂಗ್ರೆಸ್ ಅವಧಿ ಸಾಧನೆಯ ಮೋದಿ ತಮ್ಮದೆಂದು ಬಿಂಬಿಸುತ್ತಿದ್ದಾರೆ

ಮೈಸೂರು,ಏ.19(ಎಂಟಿವೈ)– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಗ್ಯಾರಂಟಿ ಕಾರ್ಯಕ್ರಮದಿಂದ ಮಹಿಳೆಯರು ಹಾದಿ ತಪ್ಪಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೀಡಿರುವ ಹೇಳಿಕೆ ಮಹಿಳೆಯರನ್ನು ಅಪಮಾನಿಸಿದಂತಾಗಿದೆ ಎಂದು ಮಾಜಿ ಸಚಿವೆ ರಾಣಿ ಸತೀಶ್ ಅಸಮಾದಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಈ ಹಿಂದೆ ನೀಡಿದ್ದ ಭರವಸೆಗಳಾದ ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ನುಡಿದಂತೆ ನಡೆದು ಬಡ ಹಾಗೂ ಶೋಷಿತ ಸಮುದಾಯಗಳ ಜನರಿಗೆ ನೆರವಾಗಿದೆ. ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ಲೌಕಿಕ ಬದುಕಿನಲ್ಲಿ ತಿಳುವಳಿಕೆ ಹೆಚ್ಚಾಗಿದೆ. ಆರ್ಥಿಕ ಮತ್ತು ಸಾಮಾಜಿಕವಾಗಿ ಸಬಲೀಕರಣದ ಉದ್ದೇಶದಿಂದ ಗ್ಯಾರಂಟಿ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಆದರೆ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಲಘುವಾಗಿ ಮಾತನಾಡಿರುವುದು ಖಂಡನೀಯ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ವ್ಯಕ್ತಿಯಿಂದ ಇಂತಹ ಮಾತು ನಿರೀಕ್ಷಿಸಿರಲಿಲ್ಲ. ಲಘುವಾದ ಹೇಳಿಕೆಗಳು ಅವರ ವ್ಯಕ್ತಿತ್ವಕ್ಕೆ ಶೋಭೆ ತರುವುದಿಲ್ಲ ಎಂದು ಕಿಡಿಕಾರಿದರು.

ಪ್ರಧಾನಿ ಮೋದಿ ಅವರು ಈ ಲೋಕಸಭಾ ಚುನಾವಣೆಯಲ್ಲಿ ಮತದಾರರನ್ನು ಮರುಳು ಮಾಡಲು 60 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ದೇಶಕ್ಕೆ ಏನು ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆ.



ಮೈಸೂರಿನ ದೇವರಾಜ ಮೊಹಲ್ಲಾದಲ್ಲಿ ಮಾಜಿ ಸಚಿವೆ ರಾಣಿ ಸತೀಶ್, ಮಹಿಳಾ ಮುಖಂಡರೊಂದಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿದರು.

ಅಲ್ಲದೆ, ದ್ವೇಷದ ರಾಜಕಾರಣದಿಂದ ಕಾಂಗ್ರೆಸ್ ನಾಯಕರನ್ನು ಟೀಕಿಸುತ್ತಿದ್ದಾರೆ. ಬ್ರಿಟೀಷರಿಂದ ದೇಶಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ದೇಶವನ್ನು ಸಮರ್ಥವಾಗಿ ಕಟ್ಟಿದ್ದು ಕಾಂಗ್ರೆಸ್. ಕಾಂಗ್ರೆಸ್ ಸರ್ಕಾರ ಮಾಡಿದ ಅಭಿವೃದ್ಧಿ ಕಾರ್ಯದ ಮೇಲೆ ಇಂದು ಬಿಜೆಪಿ ಸರ್ಕಾರ ಸವಾರಿ ಮಾಡುವುದರೊಂದಿಗೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಾದ ಅಭಿವೃದ್ಧಿ ಕಾರ್ಯಗಳು ತನ್ನ ಸಾಧನೆಯೆಂದು ಬಿಂಬಿಸಿಕೊಳ್ಳುತ್ತಿದೆ. ಇಂದು ದೇಶ ಅಭಿವೃದ್ಧಿಯಿಂದ ಏನಾದರೂ ಬೆಳೆದಿದ್ದರೆ ಅದಕ್ಕೆ ಕಾಂಗ್ರೆಸ್ ಕಾರಣ. ಹತ್ತು ವರ್ಷಗಳಿಂದ ಏನು ಸಾಧನೆಯಾಗಿದೆ ಎಂಬುದನ್ನು ಬಿಜೆಪಿಗರು ಬಹಿರಂಗ ಮಾಡಲಿ ಎಂದು ಸವಾಲು ಹಾಕಿದರು.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡಬೇಕು. ಉತ್ತಮ ಅಭ್ಯರ್ಥಿಗೆ ಮತದಾನ ಮಾಡುವ ಮೂಲಕ ಮತದಾನದ ಮೌಲ್ಯವನ್ನು ಹೆಚ್ಚಿಸಬೇಕು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಲಕ್ಷ್ಮಣ ಓರ್ವ ಸಜ್ಜನ ರಾಜಕಾರಣಿಯಾಗಿದ್ದು, ಹಲವು ವರ್ಷಗಳಿಂದ ಸಾರ್ವಜನಿಕರ ಹಿತಾಸಕ್ತಿಗಾಗಿ ಅನೇಕ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಸಾರ್ವಜನಿಕರ ಸೇವೆಗಾಗಿ ಸದಾ ಹಂಬಲಿಸುವ ಹೋರಾಟಗಾರ. ಪ್ರಾಮಾಣಿಕವಾಗಿ ಕೆಲಸ ಮಾಡುವ ವ್ಯಕ್ತಿತ್ವ ಉಳ್ಳವರಾಗಿದ್ದು, ಅವರಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಕಾಂಗ್ರೆಸ್ ಮುಖಂಡರಾದ ಲತಾ ಮೋಹನ್, ಶಾರದ ಸಂಪತ್ತು, ಚಂದ್ರಕಲಾ, ಕೃಷ್ಣ ಕುಮಾರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮತ ಪ್ರಚಾರ: ಮೈಸೂರಿನ ದೇವರಾಜ ಮೊಹಲ್ಲದಲ್ಲಿ ಮಾಜಿ ಸಚಿವೆ ರಾಣಿ ಸತೀಶ್, ಮಹಿಳಾ ಮುಖಂಡರೊಂದಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪಮೇಯರ್ ಪುಷ್ಪವಲ್ಲಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ವಾಲ್ನೂರು ಗ್ರಾಮದಲ್ಲಿ ಬಿಜೆಪಿ ಹಾಗೂ ಸಂಘ ಪರಿವಾರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ರಸ್ತೆ ತಡೆ ನಡೆಸಿದರು. ಯದುವೀರ್, ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಇದ್ದರು.

ಮನೆ ಮನೆ ಮತಯಾಚನೆಗೆ ತೆರಳುತ್ತಿದ್ದ ಬಿಜೆಪಿ ಕಾರ್ಯಕರ್ತರಿಗೆ ಕಾರು ಡಿಕ್ಕಿ

ಓರ್ವ ಸಾವು, ಮೂವರಿಗೆ ಗಾಯ

● ಸಿದ್ದಾಪುರದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರ ಪ್ರತಿಭಟನೆ ● ರಸ್ತೆ ತಡೆಗೆ ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಸಾಥ್



ಸಿದ್ದಾಪುರ, ಏ.19–ಬಿಜೆಪಿ ಕಾರ್ಯಕರ್ತರು ಮನೆ ಮನೆ ಮತ ಯಾಚನೆಗೆ ತೆರಳುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದು ಓರ್ವ ಮೃತ ಪಟ್ಟಿದ್ದು, ಇಬ್ಬರು ಗಂಭೀರ ವಾಗಿ ಗಾಯ ಗೊಂಡಿದ್ದಾರೆ. ಈ ಘಟನೆ ವಾಲ್ನೂರು ಗ್ರಾಮದಲ್ಲಿ ಗುರುವಾರ ಸಂಜೆ ನಡೆದಿದೆ.

ಗ್ರಾಮದ ರಾಮಪ್ಪ(60) ಮೃತಪಟ್ಟಿದ್ದು, ಚಂದ್ರರಾಜ್, ರತೀಶ್ ಗಂಭೀರವಾಗಿ ಗಾಯ ಗೊಂಡು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖ ಲಾಗಿದ್ದಾರೆ. ಬಿಜೆಪಿಯ ಸುಮಾರು 10 ಕಾರ್ಯಕರ್ತರು ಮನೆ ಮನೆಗೆ ಮತಯಾ ಚನೆಗೆ ತೆರಳುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಕಾರು ರಾಮಪ್ಪ, ಚಂದ್ರರಾಜ್, ರತೀಶ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಚಿಂತಾಜನಕ ಸ್ಥಿತಿಯಲ್ಲಿದ್ದ ರಾಮಪ್ಪನನ್ನು ಇದೇ ಮಾರ್ಗವಾಗಿ ಬರುತ್ತಿದ್ದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಕೆ.ಲೋಕೇಶ್ ತಮ್ಮ ಕಾರಿನಲ್ಲಿ ಕರೆದುಕೊಂಡು ಹೋಗಿ ಸಿದ್ದಾಪುರ ಆಸ್ಪತ್ರೆ ದಾಖಲಿಸಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ರಾಮಪ್ಪ ರಾತ್ರಿ ಮೃತಪಟ್ಟಿದ್ದಾರೆ. ಗಾಯಗೊಂಡ ಚಂದ್ರ ರಾಜ್ ಹಾಗೂ ರತೀಶ್‌ನನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಡಿಕ್ಕಿ ಹೊಡೆದು ಕಾರಿನೊಂದಿಗೆ ಪರಾರಿ ಯಾಗಿದ್ದ ಒಬ್ಬನನ್ನು ಚೆಕ್ಕಿಹೊಳೆ ಬಳಿ ಸಿದ್ದಾಪುರ ಠಾಣೆ ಪೊಲೀಸರು ಬಂಧಿ ಸಿದ್ದು, ಮತ್ತಿಬ್ಬರು ತಲೆಮರೆಸಿಕೊಂಡಿದ್ದಾರೆ.

ರಸ್ತೆ ತಡೆ: ಕಾರು ಚಾಲಕ ಅತೀ ವೇಗ ವಾಗಿ ಬಂದು ಡಿಕ್ಕಿ ಹೊಡೆದಿದ್ದಾನೆ ಪೊಲೀಸರು ತನಿಖೆ ನಡೆಸಿ, ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಬಿಜೆಪಿ ಹಾಗೂ ಸಂಘ ಪರಿವಾರ ಸಂಘ ಟನೆಗಳ ಮುಖಂಡರು ಹಾಗೂ ಕಾರ್ಯ ಕರ್ತರು ಶುಕ್ರವಾರ ಗ್ರಾಮದಲ್ಲಿ ರಸ್ತೆ ತಡೆ ನಡೆಸಿ, ಪ್ರತಿಭಟನೆ ನಡೆಸಿದರು.

ಮೃತ ರಾಮಪ್ಪ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ನೀಡಬೇಕು. ಜಿಲ್ಲಾಧಿಕಾರಿ ಗಳು ಸ್ಥಳಕ್ಕೆ ಬರಬೇಕೆಂದು ಪಟ್ಟುಹಿಡಿದು ಪ್ರತಿಭಟಿಸಿದರು. ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕೊಡಗು–ಮೈಸೂರು ಲೋಕ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದು ವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಚಿವ ಸಿ.ಟಿ.ರವಿ, ಮಾಜಿ ಶಾಸಕ ರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಎಂಎಲ್‌ಸಿ ಸುಜಾ ಕುಶಾಲಪ್ಪ, ಮುಖಂಡ ಸುನೀಲ್ ಸುಬ್ರಮಣಿ ಸೇರಿದಂತೆ ಮತ್ತಿತ ರರು ಪ್ರತಿಭಟನೆಗೆ ಸಾಥ್ ನೀಡಿದರು.

ಇದೇ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾ ಧಿಕಾರಿ ಕೆ.ರಾಮರಾಜನ್ ಹಾಗೂ ಎಡಿಸಿ ವಿನಾಯಕ ನಾರ್ವೆ ಅವರ ಮನವೊಲಿಕೆಗೆ ಕ್ಯಾರೆ ಎನ್ನದ ಪ್ರತಿಭಟನಾಕಾರರು, ಜಿಲ್ಲಾಧಿ ಕಾರಿ ಬರಲೇಬೇಕೆಂದು ಪಟ್ಟುಹಿಡಿದರು.

ಸಿ.ಟಿ.ರವಿ ಮಾತನಾಡಿ, ಬಿಜೆಪಿ ಕಾರ್ಯ ಕರ್ತರನ್ನು ಗುರಿಯಾಗಿಸಿಕೊಂಡು ಹತ್ಯೆ ಸಂಚು ರೂಪಿಸಲಾಗುತ್ತಿದೆ. ರಾಜ್ಯದ ಹಲವೆಡೆ ಇಂತಹ ಘಟನೆಗಳು ನಡೆಯು ತ್ತಿದ್ದು, ಪೊಲೀಸ್ ಇಲಾಖೆ ಹಾಗೂ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. ರಾಮಪ್ಪ ಸಾವಿಗೆ ಕಾರಣರಾದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಮೃತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು. ಇಲ್ಲದಿದ್ದಲ್ಲಿ ಉಗ್ರ ಪ್ರತಿಭಟನೆ ಮಾಡುವುದಾಗಿ ಎಚ್ಚರಿ ಸಿದರು. ನಂತರ ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿ ಕಾರಿ ವೆಂಕಟ್‌ರಾಜ್ ಬಿಜೆಪಿ ಮುಖಂಡ ರೊಂದಿಗೆ ಮಾತುಕತೆ ನಡೆಸಿ, ಪ್ರತಿಭಟನಾ ಕಾರರ ಮನವೊಲಿಸಿದರು. ಬಳಿಕ ತಾತ್ಕಾಲಿ ಕವಾಗಿ ಪ್ರತಿಭಟನೆ ಹಿಂಪಡೆದರು. ಪ್ರತಿ ಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿ ವಿ.ಕೆ.ಲೋಕೇಶ್, ನೆಲ್ಲಿರ ಚಲನ್, ಮಹೇಶ್ ಜೈನಿ, ಬಜರಂಗದಳ ಜಿಲ್ಲಾ ಸಂಚಾಲಕ ಪ್ರವೀಣ್, ಪ್ರಮುಖರಾದ ಸುವೀನ್ ಗಣಪತಿ, ಗೌತಮ್, ನಾಗೇಶ್, ಉಮೇಶ್ ಸುಬ್ರಮಣಿ ಪಾಲ್ಗೊಂಡಿದ್ದರು.

ಕಾಂಗ್ರೆಸ್ ಶಾಸಕರ ಸಾಂತ್ವನ: ಕಾಂಗ್ರೆಸ್ ಶಾಸಕರಾದ ಎ.ಎಸ್.ಪೊನ್ನಣ್ಣ ಹಾಗೂ ಡಾ.ಮಂತರ್‌ಗೌಡ ಸಿದ್ದಾಪುರ ಆಸ್ಪತ್ರೆಗೆ ಭೇಟಿ ನೀಡಿ, ಮೃತ ರಾಮಪ್ಪ ಕುಟುಂಬಕ್ಕೆ ಸಾಂತ್ವನ ಹೇಳಿದರು. ಅಪಘಾತಕ್ಕೆ ಕಾರಣ ರಾದವರ ವಿರುದ್ಧ ಸೂಕ್ತ ತನಿಖೆ ನಡೆಸಿ, ಕ್ರಮ ಕೈಗೊಳ್ಳಬೇಕು ಎಂದು ಪೊಲೀಸರಿಗೆ ಸೂಚನೆ ನೀಡಿದರು. ಮುನ್ನೆಚ್ಚರಿಕೆಕ್ರಮ ವಾಗಿ ಪೊಲೀಸ್ ತುಕಡಿಗಳನ್ನು ನಿಯೋ ಜಿಸಿ, ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದೆ.


ಸಿದ್ದಾಪುರ, ವಾಲ್ನೂರು ಗ್ರಾಮ, ಅರೆ ಕಾಡು ಗ್ರಾಮ, ನೆಲ್ಲಿಹುದಿಕೇರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಯಾವುದೇ ಪ್ರತಿಭಟನೆ, ಮೆರವಣಿಗೆ, ರ್‍ಯಾಲಿ, ಜಾಥಾ, ರಸ್ತೆ ತಡೆ, ಪ್ರಚೋದಾನಾತ್ಮಕ ಹೇಳಿಕೆ, ಘೋಷಣೆ ಕೂಗುವಂತಿಲ್ಲ. ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಸಾರ್ವಜನಿಕರು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕೆಂದು ಜಿಲ್ಲಾಧಿಕಾರಿ ವೆಂಕಟ್‌ರಾಜ್ ಆದೇಶ ಹೊರಡಿಸಿದ್ದಾರೆ.

ಕಾರ್ಮಿಕನ ಬಲಿ ಪಡೆದ ಹುಲಿ ಸೆರೆ

ಅರಣ್ಯ ಇಲಾಖೆ ವಿರುದ್ಧ ಕೃಷಿಕರು, ಬೆಳೆಗಾರರ ಪ್ರತಿಭಟನೆ



ನಿಟ್ಟೂರಲ್ಲಿ ಕೃಷಿಕರು, ಬೆಳೆಗಾರರು ಅರಣ್ಯಾಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.



ಸೆರೆ ಸಿಕ್ಕ ಹುಲಿ.

ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ನಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿ ಯಲ್ಲಿ ಗುರುವಾರ ಕಾರ್ಮಿಕನ ಕೊಂದು ಹಾಕಿದ್ದ ಹುಲಿಯನ್ನು ಅರಣ್ಯ ಇಲಾಖೆ ಶುಕ್ರವಾರ ಮುಂಜಾನೆ ಸೆರೆ ಹಿಡಿದಿದೆ.

ಕೂಂಬಿಂಗ್ ಮೂಲಕ ಹುಲಿ ಸೆರೆಗೆ ಇಳಿದ ಅರಣ್ಯ ಇಲಾಖೆಯ ನೂರಕ್ಕೂ ಹೆಚ್ಚು ಸಿಬ್ಬಂದಿ, ಕಾರ್ಮಿಕನ ಬಲಿ ಪಡೆ ದಿದ್ದ ಜಾಗದಲ್ಲೇ ಗ್ರಾಮದ ಸಮೀಪದ ಅರಣ್ಯ ಪ್ರದೇಶದಲ್ಲಿ ಹುಲಿ ಪತ್ತೆ ಹಚ್ಚಿದ್ದರು. ಬಳಿಕ ಅರವಳಿಕೆ ಚುಚ್ಚು ಮದ್ದು ನೀಡಿ ಸೆರೆ ಹಿಡಿಯಲಾಯಿತು.

ಹುಲಿ ದೈಹಿಕವಾಗಿ ನಿತ್ರಾಣವಾಗಿದ್ದು, ಕಾಡಿನಿಂದ ಹೊರ ಬಂದು ಜಾನುವಾರುಗಳ ಮೇಲೆ ದಾಳಿ ನಡೆಸಿದೆ ಎಂದು ಅರಣ್ಯಾಧಿ ಕಾರಿಗಳು ಶಂಕೆ ವ್ಯಕ್ತಪಡಿಸಿದರು. ಬಳಿಕ ಹುಲಿಯನ್ನು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಪ್ರತಿಭಟನೆ: ಹುಲಿ ದಾಳಿಗೆ ಅಸ್ಸಾಂ ಮೂಲದ ಕಾರ್ಮಿಕ ಬಲಿಯಾದ ಹಿನ್ನೆಲೆ ಯಲ್ಲಿ ಪೊನ್ನಂಪೇಟೆ ವ್ಯಾಪ್ತಿಯ ಕೃಷಿಕರು, ಬೆಳೆಗಾರರು ಮತ್ತು ರೈತ ಸಂಘದ ಪ್ರಮುಖರು ಗುರುವಾರ ತಡರಾತ್ರಿ ಪ್ರತಿಭಟನೆ ನಡೆಸಿ, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರವೂ ಪ್ರತಿಭಟನೆ ಮುಂದುವರೆಸಿ ಘಟನಾ ಸ್ಥಳಕ್ಕೆ ಹಿರಿಯ ಅರಣ್ಯಾಧಿಕಾರಿ ಗಳು ಆಗಮಿಸುವಂತೆ ಪಟ್ಟುಹಿಡಿದರು. ಜಿಲ್ಲಾ ಸಿಸಿಎಫ್ ಮನೋಜ ಕುಮಾರ್ ತ್ರಿಪಾಠಿ, ನಾಗರಹೊಳೆ ಹುಲಿ ಸಂರಕ್ಷಣಾ ಯೋಜನಾ ನಿರ್ದೇಶಕ ಹರ್ಷಕುಮಾರ್ ಮತ್ತಿತರ ಅರಣ್ಯಾ ಧಿಕಾರಿಗಳು ಸ್ಥಳಕ್ಕಾಗಮಿಸಿ ಪ್ರತಿಭಟನಾಕಾರರ ಮನವಿ ಆಲಿಸಿದರು. ಈ ವೇಳೆ ಪ್ರತಿಭಟ ನಾಕಾರರು, ಅರಣ್ಯ ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ನಾಗರಹೊಳೆ ವ್ಯಾಪ್ತಿಯಲ್ಲಿ ಹುಲಿಗಳ ಸಂಖ್ಯೆ ಅಧಿಕವಾಗಿವೆ. ಈ ಹಿನ್ನೆಲೆಯಲ್ಲಿ ಆಹಾರ ಅರಸಿ ನಾಡಿಗೆ ಬರುತ್ತಿವೆ. ಈ ಭಾಗದಲ್ಲಿ ಹುಲಿಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಸಬೇಕು ಎಂದು ಆಗ್ರಹಿಸಿದರು.

ಡಿಎಫ್‌ಒ ಜಗನ್ನಾಥ್ ಮಾತನಾಡಿ, ಮೃತರ ಕುಟುಂಬಕ್ಕೆ 15 ಲಕ್ಷ ರೂ. ಪರಿ ಹಾರ ಮತ್ತು 5 ವರ್ಷದವರೆಗೆ ತಿಂಗಳಿಗೆ ತಲಾ 4 ಸಾವಿರ ರೂ.ನಂತೆ ಪಿಂಚಣಿ ನೀಡಲು ಕ್ರಮ ವಹಿಸಲಾಗುವುದು. ಈ ಭಾಗದಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ತಡೆಯಲು ಹೆಚ್ಚುವರಿ ಸಿಬ್ಬಂದಿ ನೇಮಿಸಲಾಗುವುದು. ಉಪಟಳ ನೀಡುತ್ತಿ ರುವ ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಸಿ, ಕಾಡಾನೆಗಳ ಚಲನವಲನ ಪತ್ತೆ ಹಚ್ಚಿ ಕಾಡಿಗಟ್ಟಲು ಕ್ರಮ ಕೈಗೊಳ್ಳಲಾ ಗುವುದು ಎಂದು ಭರವಸೆ ನೀಡಿದರು.

ಶಾಸಕ ಪೊನ್ನಣ್ಣ ಸೂಚನೆ: ಘಟನಾ ಸ್ಥಳಕ್ಕಾಗಮಿಸಿದ ವಿರಾಜಪೇಟೆ ಶಾಸಕ ಅಜ್ಜಿ ಕುಟ್ಟಿರ ಎಸ್.ಪೊನ್ನಣ್ಣ, ಪ್ರತಿಭಟನಾಕಾ ರರು ಮತ್ತು ಅರಣ್ಯ ಇಲಾಖೆ ಅಧಿಕಾರಿ ಗಳಿಂದ ಘಟನೆಯ ಮಾಹಿತಿ ಪಡೆದರು.

ಬಳಿಕ ಮಾತನಾಡಿದ ಪೊನ್ನಣ್ಣ, ಮಾನವ–ವನ್ಯಜೀವಿ ಸಂಘರ್ಷ ಕಂಡು ಬಂದ ತಕ್ಷಣ ಸೂಕ್ತ ಕಾರ್ಯಾಚರಣೆ ನಡೆಸಬೇಕು. ಆ ನಿಟ್ಟಿನಲ್ಲಿ ಕ್ರಮ ವಹಿಸು ವಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಸುಜಯ್ ಬೋಪಯ್ಯ, ಎಸಿಎಫ್ ನೆಹರು, ಆರ್‌ಎಫ್‌ಒ ಕಳ್ಳೀರ ದೇವಯ್ಯ, ಎಟಿಎಫ್, ಆರ್‌ಆರ್‌ಟಿ ಸಿಬ್ಬಂದಿ ಹಾಜರಿದ್ದರು.

ಅಂಬಟ್ಟಿಯಲ್ಲಿ ಹಸುವಿನ ಮೇಲೆ ಹುಲಿ ದಾಳಿ



ಹುಲಿ ದಾಳಿಯಿಂದ ಹಸುವಿನ ಬಲಗಾಲು ಗಾಯಗೊಂಡಿರುವುದು.

ಪೊನ್ನಂಪೇಟೆ, ಏ.19– ಗದ್ದೆ ಬಯಲಲ್ಲಿ ಮೇಯಲು ಬಿಟ್ಟಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿರುವ ಘಟನೆ ಬಿಟ್ಟಂಗಾಲ ಸಮೀಪದ ಅಂಬಟ್ಟಿಯಲ್ಲಿ ನಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಅಂಬಟ್ಟಿ ಗ್ರಾಮದ ಕಿಕ್ಕರೆ ಎಚ್.ತೌಫಿಕ್ ಅವರಿಗೆ ಸೇರಿದ ಅಡ್ಡತಳಿಯ ಹಸು ಹುಲಿ ದಾಳಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡು, ಸಾವು ಬದುಕಿನೊಂದಿಗೆ ಹೋರಾಡುತ್ತಿದೆ. ಮನೆ ಸಮೀಪದ ಅಬ್ಬಿಮೂಲೆ ಗದ್ದೆ ಬಯಲಿನಲ್ಲಿ ಎಂದಿನಂತೆ ಹಸುವನ್ನು ಮೇಯಲು ಬಿಟ್ಟಿದ್ದ ತೌಫಿಕ್, ಸಂಜೆ ಹಸುವನ್ನು ಹುಡುಕಲು ಹೋದಾಗ ತೀವ್ರ ರಕ್ತಸ್ರಾವದೊಂದಿಗೆ ಹಸು ನರಳಾಡುತ್ತಿತ್ತು. ವಿರಾಜಪೇಟೆ ಅರಣ್ಯಾಧಿ ಕಾರಿಗಳು ಸ್ಥಳ ಪರಿಶೀಲಿಸಿದರು.

ಕಾವೇರಿ ನಿಸರ್ಗಧಾಮದಲ್ಲಿ ಮೀನುಗಳ ರಕ್ಷಣೆ



ಕುಶಾಲನಗರದ ಕಾವೇರಿ ನಿಸರ್ಗಧಾಮದ ಸೇತುವೆಯ ಕೆಳ ಭಾಗದಲ್ಲಿ ಮೀನುಗಳನ್ನು ಬಲೆಯಲ್ಲಿ ಹಿಡಿದು ಹಾರಂಗಿ ಜಲಾಶಯ ಮುಂಭಾಗದ ನದಿಗೆ ಬಿಡಲಾಯಿತು.

ಮಡಿಕೇರಿ, ಏ.19–ಮಳೆಯ ತೀವ್ರ ಕೊರತೆ ಯಿಂದ ಕಾವೇರಿ ನದಿ ಮೂಲಗಳು ಬತ್ತಿ ಹೋಗಿದ್ದು, ಕುಡಿಯುವ ನೀರಿನ ಸಹಿತ ಜಲಚರಗಳಿಗೆ ಸಂಕಷ್ಟ ಎದುರಾಗಿದೆ.

ಪ್ರಸಿದ್ಧ ಪ್ರವಾಸಿ ತಾಣವಾದ ಕುಶಾಲ ನಗರದ ಕಾವೇರಿ ನಿಸರ್ಗಧಾಮದ ಸೇತು ವೆಯ ಕೆಳ ಭಾಗದಲ್ಲಿ ಅಳಿವಿನ ಅಂಚಿನಲ್ಲಿ ರುವ ಮಹಶೀರ್ ತಳಿಯ ಮೀನುಗಳಿದ್ದು, ನೀರಿನ ಪ್ರಮಾಣ ಕಡಿಮೆಯಾದ ಹಿನ್ನೆಲೆ ಯಲ್ಲಿ ಆಮ್ಲಜನಕದ ಕೊರತೆಯಿಂದ ಮೀನು ಗಳ ಸಾಮೂಹಿಕ ಮರಣ ಸಂಭವಿಸುವ ಸಾಧ್ಯತೆ ಕಂಡು ಬಂದಿತ್ತು ಹಾರಂಗಿ ಮೀನು ಗಾರಿಕಾ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸುವ ಮೂಲಕ ಅಳಿವಿನಂಚಿನಲ್ಲಿರುವ ಜಲಚರ ಗಳ ರಕ್ಷಣೆ ಕಾರ್ಯ ನಡೆಸಲಾಯಿತು.

ಮಹಶೀರ್, ಗೆಂಡೆ ಹಾಗೂ ಸಣ್ಣ ಜಾತಿಯ ಮೀನುಗಳು ಸೇರಿದಂತೆ ಹಲವು ಮೀನುಗಳನ್ನು ಬಲೆಯ ಮೂಲಕ ಹಿಡಿದು ಸುರಕ್ಷಿತವಾಗಿ ಹಾರಂಗಿ ಜಲಾಶಯ ಮುಂಭಾಗದ ನದಿಗೆ ಬಿಡಲಾಯಿತು.

ಬಿಸಿಲಿನ ತಾಪಮಾನಕ್ಕೆ ಕಾವೇರಿ ನದಿಯಲ್ಲಿ ನೀರು ಕ್ಷೀಣಿಸುತ್ತಿದೆ. ಈ ಹಿನ್ನೆಲೆ ಅಳಿವಿನಂಚಿ ನಲ್ಲಿರುವ ಮೀನುಗಳ ರಕ್ಷಣಾ ಕಾರ್ಯಾ ಚರಣೆ ನಡೆಸಲಾಗಿದೆ. ಮಹಶೀರ್, ಗೆಂಡೆ ಮೀನು ಸೇರಿದಂತೆ ಹಲವು ಜಾತಿಯ ಮೀನು ಗಳನ್ನು ರಕ್ಷಿಸಲಾಗಿದೆ ಎಂದು ಹಾರಂಗಿ ಮೀನು ಮರಿ ಉತ್ಪಾದನಾ ಕೇಂದ್ರದ ಸಹಾ ಯಕ ನಿರ್ದೇಶಕ ಸಚಿನ್ ಮಾಹಿತಿ ನೀಡಿದರು.

ಮೀನುಗಳ ರಕ್ಷಣಾ ಕಾರ್ಯಾಚರಣೆ ಯಲ್ಲಿ ಉಪ ಅರಣ್ಯಾಧಿಕಾರಿ ಚರಣ್, ಅರಣ್ಯ ವೀಕ್ಷಕ ರಾಕೇಶ್, ಅರಣ್ಯ ರಕ್ಷಕ ಹನುಮಂತ ರಾಯಪ್ಪ, ಮೀನುಗಾರಿಕೆ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.

ವಿದ್ಯಾರ್ಥಿನಿ ನೇಹಾ ಕೊಲೆ ಖಂಡಿಸಿ ಪ್ರತಿಭಟನೆ



ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಖಂಡಿಸಿ ಚಾಮರಾಜನಗರದಲ್ಲಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಏ.19– ಹುಬ್ಬಳಿ ಕಾಲೇಜು ಆವರಣದಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಖಂಡಿಸಿ ನಗರದಲ್ಲಿ ಶುಕ್ರವಾರ ಜಿಲ್ಲೆಯ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿ, ವಿದ್ಯಾರ್ಥಿನಿ ನೇಹಾ ಹಿರೇಮಠ ಅವರನ್ನು ಕೊಲೆಗೈದ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

ಜಾಗರಣ ವೇದಿಕೆ ಸಂಚಾಲಕ ಪ್ರಶಾಂತ್ ಮಾತನಾಡಿ, ಘಟನೆಯನ್ನು ಗಮನಿಸಿದಾಗ ಲವ್ ಜಿಹಾದ್ ನಡೆದಿರುವುದು ತಿಳಿಯುತ್ತದೆ. ಇದಕ್ಕೆ ಅನೇಕರ ಕುಮ್ಮಕ್ಕಿದೆ. ಇಂತಹ ಘಟನೆ ರಾಜ್ಯದಲ್ಲಿ ನಡೆದಿರುವುದು ಸರ್ಕಾರದ ವೈಫಲ್ಯವನ್ನು ಎತ್ತಿ ಹಿಡಿಯುವಂತಾಗಿದೆ ಎಂದು ಆರೋಪಿಸಿದರು.

ಘಟನೆ ಸಂಬಂಧ ಇನ್ನೂ ಮಹಜರ್ ಹಾಗೂ ಪೊಲೀಸ್ ತನಿಖೆ ನಡೆದಿಲ್ಲ. ಮೃತ ವಿದ್ಯಾರ್ಥಿ ನಿಯ ತಂದೆಯ ಹೇಳಿಕೆಯನ್ನು ದಾಖಲಿಸಿಲ್ಲ. ಪ್ರತ್ಯಕ್ಷ ಸಾಕ್ಷಿಗಳನ್ನು ಪಡೆದಿಲ್ಲ. ಆದರೂ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಇದೊಂದು ವೈಯಕ್ತಿಕ ದ್ವೇಷದಿಂದ ನಡೆದಿರುವ ಘಟನೆ ಎಂದು ಹೇಳಿರುವುದು ಸರಿಯಲ್ಲ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಹಿಂದೂ ಜಾಗರಣ ವೇದಿಕೆಯ ಕುಮಾರ, ಅಜಯ್, ನಟರಾಜು, ಮಂಜುನಾಥ, ಗಿರಿ, ಗುರು, ಸುಂದರ್ ರಾಜು, ಸಂದೇಶ್, ಸುನೀಲ್, ಶಿವು, ಶಾಂತಮೂರ್ತಿ, ವನಜಾಕ್ಷಿ, ದಾಕ್ಷಿಯಿಣಿ, ಸೂರ್ಯ, ಭಗೀರಥ ಆನಂದ್, ಕುಮಾರ್, ಗುರು ಪ್ರಸಾದ್, ಮಣಿ, ಫೋಟೋ ಪರಿಷಿ ಇತರರು ಹಾಜರಿದ್ದರು.

ಇಂದು ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ

ಚಾಮರಾಜನಗರ: ಮತಗಟ್ಟೆ ಅಧಿಕಾರಿಗಳಿಗೆ ಏ.20ರಂದು ಬೆಳಗ್ಗೆ 10 ಗಂಟೆಗೆ ತರಬೇತಿಯನ್ನು ಆಯಾ ತಾಲೂಕು ಕೇಂದ್ರಗಳಲ್ಲಿ ಆಯೋಜಿಸಲಾಗಿದೆ. ತರಬೇತಿಗೆ ಹಾಜರಾಗುವ ಎಲ್ಲಾ ಮತಗಟ್ಟೆ ಅಧಿಕಾರಿಗಳಿಗೆ ಆಯಾ ತಾಲೂಕು ಕೇಂದ್ರ ಸ್ಥಾನದಿಂದ ಬಸ್ ವ್ಯವಸ್ಥೆ ಮಾಡಲಾಗಿದೆ.

ಹನೂರು ತಾಲೂಕಿನಲ್ಲಿ ವಿವೇಕಾನಂದ ಶಿಕ್ಷಣ ಸಂಸ್ಥೆ, ಕೊಳ್ಳೇಗಾಲ ತಾಲೂಕಿನ ವಾಸವಿ ವಿದ್ಯಾಕೇಂದ್ರ, ಚಾಮರಾಜನಗರ ತಾಲೂಕಿನ ಪ್ರಥಮ ದರ್ಜೆ ಕಾಲೇಜು ಹಾಗೂ ಗುಂಡ್ಲುಪೇಟೆ ತಾಲೂಕಿನ ಕೆಎಸ್‌ಎನ್ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ನಡೆಯಲಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದ್ದಾರೆ.

ಅಪ್ರಾಪ್ತೆ ಅತ್ಯಾಚಾರ: ಇಬ್ಬರಿಗೆ 20 ವರ್ಷ ಜೈಲು

ಚಾಮರಾಜನಗರ, ಏ.19– ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ ಇಬ್ಬರು ಅಪರಾಧಿಗಳಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಹಾಗೂ ಪೋಕ್ಸೋ ನ್ಯಾಯಾಲಯ 20 ವರ್ಷ ಕಠಿಣ ಶಿಕ್ಷೆ ಹಾಗೂ ತಲಾ 55 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ತಾಲೂಕಿನ ಆಲೂರು ಗ್ರಾಮದ ಮಹೇಶ್ ಪ್ರಸಾದ್(32) ಹಾಗೂ ವೆಂಕಟಯ್ಯನಛತ್ರ ಗ್ರಾಮದಸಿದ್ದಮಲ್ಲು(28) ಶಿಕ್ಷೆಗೊಳಗಾದ ಅಪರಾಧಿಗಳು.

2ನೇ ಆರೋಪಿ ಸಿದ್ದಮಲ್ಲು ಸಂತ್ರಸ್ತ ಅಪ್ರಾಪ್ತೆ ಯನ್ನು ಮದುವೆ ಆಗುವುದಾಗಿ ನಂಬಿಸಿ, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. 1ನೇ ಆರೋಪಿ ಮಹೇಶ್ ಪ್ರಸಾದ್, ಈಕೆ ಪ್ರೀತಿ ಮಾಡುತ್ತಿರುವ ವಿಚಾರ ತನಗೆ ಗೊತ್ತಿದೆ. ಇದನ್ನು ಮನೆಯವರಿಗೆ ಹೇಳುತ್ತೇನೆ ಎಂದು ಬೆದರಿಸಿ, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಸಂಬಂಧ 2019ರ ಜೂನ್‌ನಲ್ಲಿ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪೋಕ್ಸೋ ನ್ಯಾಯಾಲಯದಲ್ಲಿ ವಿಚಾರಣೆ ನಡೆದು, ನ್ಯಾಯಾಧೀಶ ಎನ್.ಆರ್.ಲೋಕಪ್ಪ ಅಪರಾಧಿಗಳಿಗೆ 20 ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ. ಸಂತ್ರಸ್ತೆಗೆ ಕಾನೂನು ಸೇವಾ ಪ್ರಾಧಿಕಾರದಿಂದ 4 ಲಕ್ಷ ರೂ. ಪರಿಹಾರ ನೀಡಬೇಕೆಂದು ಆದೇಶಿಸಿದ್ದಾರೆ.

ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ.ಯೋಗೇಶ್ ವಾದ ಮಂಡಿಸಿದ್ದರು.


ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ

ಮತ್ತೆ 'ಕಮಲ' ಅರಳಿಸುವ ಯತ್ನ, 'ಕೈ' ಕ್ಷೇತ್ರ ವಶಪಡಿಸಿಕೊಳ್ಳುವ ತವಕ

ಸಿದ್ದಲಿಂಗಸ್ವಾಮಿ



ಸುನಿಲ್ ಬೋಸ್



ಎಸ್.ಬಾಲರಾಜು

ಚಾಮರಾಜನಗರ, ಏ.19–ಹಳೇ ಮೈಸೂರು ಭಾಗದ ಜಾನಪದ ಕಲೆಗಳ ತವರೂರು, ಮಲೆ ಮಹದೇಶ್ವರ, ಬಿಳಿಗಿರಿರಂಗನಾಥ, ಹಿಮವದ್ ಗೋಪಾಲಸ್ವಾಮಿ ಪುಣ್ಯ ಕ್ಷೇತ್ರಗಳ ಜೊತೆಗೆ ನಾಡು–ನುಡಿಗಾಗಿ ಹೋರಾಡುವ ನೆಲ ಎನ್ನುವ ಕಿರೀಟವನ್ನು ಹೊಂದಿರುವ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಈ ಬಾರಿಯ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಲೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹವಾ ನಡುವೆ ಜಂಗಿಕುಸ್ತಿ ನಡೆಯುತ್ತಿರುವುದ ರಿಂದ ಹೈವೋಲ್ಟೇಜ್ ಕ್ಷೇತ್ರಗಳಲ್ಲಿ ಒಂದಾಗಿದೆ.

ತನ್ನ ಭದ್ರಕೋಟೆಯಂತಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಮತ್ತೆ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಕಾಂಗ್ರೆಸ್ ತನ್ನದೇ ರಾಜಕೀಯ ತಂತ್ರಗಳಲ್ಲಿ ತೊಡಗಿಸಿಕೊಂಡಿದೆ. ಹಾಗೆಯೇ ಬಿಜೆಪಿ ಸತತ ಎರಡನೇ ಬಾರಿಗೆ ಕಮಲ ಅರಳಿಸಲು ಸದ್ದಿಲ್ಲದೆ ಕ್ಷೇತ್ರದಲ್ಲಿ ಪ್ರತಿತಂತ್ರ ಹೆಣೆಯುತ್ತಿದೆ. ಮಾಜಿ ಶಾಸಕ ಎಸ್.ಬಾಲರಾಜು ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿದ್ದು, ಕಾಂಗ್ರೆಸ್‌ನಿಂದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಕಣಕ್ಕಿಳಿದಿದ್ದು, ಗೆಲುವಿ ಗಾಗಿ ಇಬ್ಬರ ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದೆ.

ಎರಡು ಪಕ್ಷಗಳಲ್ಲೂ ಲೆಕ್ಕಾಚಾರ: 2019ರ ಚುನಾವಣೆಯಲ್ಲಿ ಮೊದಲ ಬಾರಿಗೆ ಚಾಮರಾಜ ನಗರದಲ್ಲಿ ಕಮಲ ಅರಳಿತ್ತು. ಆ ಮೂಲಕ ಕಾಂಗ್ರೆಸ್ ಭದ್ರಕೋಟೆ ಅಂತಲೇ ಕರೆಯುತ್ತಿದ್ದ ಚಾಮರಾಜ ನಗರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಗೆಲುವಿನ ನಗೆ ಬೀರಿ ಕಮಲ ಅರಳಿಸಿತ್ತು. ಈಗ ಎರಡನೇ ಬಾರಿಗೆ ಕಮಲ ಅರಳಿಸುವ ಜೊತೆಗೆ ಸಿಎಂ ಸಿದ್ದರಾಮಯ್ಯ ಕ್ಷೇತ್ರದಲ್ಲಿ ಗೆಲ್ಲಿಸಬೇಕೆಂದು ಬಿಜೆಪಿಗರು ತಂತ್ರ ರೂಪಿಸಿದ್ದಾರೆ.

ಮತ್ತೊಂದೆಡೆ ಸಿದ್ದರಾಮಯ್ಯ ಆಪ್ತ ಹಾಗೂ ಪ್ರಭಾವಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಮ್ಮ ಪುತ್ರನಿಗೆ ಟಿಕೆಟ್ ಕೊಡಿಸಿದ್ದಾರೆ. ಕ್ಷೇತ್ರದಲ್ಲಿ ಸಿಎಂ ಸಿದ್ದರಾಮಯ್ಯ ವರ್ಚಸ್ಸು, ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದಾಗಿ ಎಲ್ಲಾ ಸಮುದಾಯದ ಜನರ ಬೆಂಬಲ ದೊರೆಯುತ್ತದೆ ಎಂಬ ವಿಶ್ವಾಸ ಕಾಂಗ್ರೆಸ್ಸಿಗರಲ್ಲಿದೆ.

ಕ್ಷೇತ್ರದ ಗೆಲುವಿನ ವಿವರ: ಚಾಮರಾಜನಗರ ಲೋಕಸಭಾ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ ಎಂಬು ದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ ಕ್ಷೇತ್ರದಲ್ಲಿ ಇದುವರೆಗೆ ನಡೆದಿರುವ 15 ಚುನಾವಣೆ ಗಳಲ್ಲಿ ಕಾಂಗ್ರೆಸ್ ಬರೋಬ್ಬರಿ 10 ಬಾರಿ ಜಯ ಭೇರಿ ಬಾರಿಸಿದ್ದರೆ, 4 ಬಾರಿ ದಳ ಗೆದ್ದಿದೆ. ಇನ್ನು ಕಳೆದ ಬಾರಿಯಷ್ಟೇ ಕ್ಷೇತ್ರದಲ್ಲಿ ಕಮಲ ಅರಳಿತ್ತು.

ಒಟ್ಟಾರೆ ಈ ಚುನಾವಣೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಕಾಂಗ್ರೆಸ್‌ಗೆ ಮತ್ತೆ ತನ್ನ ಭದ್ರಕೋಟೆ ಉಳಿಸಿ ಕೊಳ್ಳುವ ಹಾಗೂ ಮುಖ್ಯಮಂತ್ರಿಗೆ ಪ್ರತಿಷ್ಠೆಯ ಚುನಾವಣೆ ಇದಾಗಿದೆ. ಬಿಜೆಪಿಗೆ ಸತತ ಎರಡನೇ ಗೆಲುವು ದಾಖಲಿಸಿ ಮತ್ತೊಮ್ಮೆ ಕ್ಷೇತ್ರದಲ್ಲಿ ಕಮಲ ಅರಳಿಸುವ ತವಕದಲ್ಲಿದ್ದು, ಇನ್ನೂ ಕೆಲವೇ ದಿನಗಳಲ್ಲಿ ಅಭ್ಯರ್ಥಿಗಳ ಹಣೆಬರಹವನ್ನು ಮತದಾರ ಬರೆಯಲಿದ್ದು, ಯಾರಿಗೆ ಗಡಿಜಿಲ್ಲೆ ಕಿರೀಟ ಕಾದು ನೋಡಬೇಕಿದೆ.

ಕ್ಷೇತ್ರದಲ್ಲಿ ಆಯ್ಕೆಯಾದವರ ವಿವರ

1962–ಎಂ.ಎಸ್.ಸಿದ್ದಯ್ಯ (ಕಾಂಗ್ರೆಸ್)
1967–ಎಂ.ಎಸ್.ಸಿದ್ದಯ್ಯ (ಕಾಂಗ್ರೆಸ್)
1971–ಎಂ.ಎಸ್.ಸಿದ್ದಯ್ಯ, (ಕಾಂಗ್ರೆಸ್)
1977–ಬಿ.ರಾಚಯ್ಯ, (ಕಾಂಗ್ರೆಸ್)
1980–ವಿ.ಶ್ರೀನಿವಾಸಪ್ರಸಾದ್, (ಕಾಂಗ್ರೆಸ್)
1984–ವಿ.ಶ್ರೀನಿವಾಸಪ್ರಸಾದ್–(ಕಾಂಗ್ರೆಸ್)
1989–ವಿ.ಶ್ರೀನಿವಾಸಪ್ರಸಾದ್–(ಕಾಂಗ್ರೆಸ್)
1991–ವಿ.ಶ್ರೀನಿವಾಸಪ್ರಸಾದ್ (ಕಾಂಗ್ರೆಸ್)
1996–ಎ.ಸಿದ್ದರಾಜು, (ಜೆಡಿಎಸ್)
1998–ಎ.ಸಿದ್ದರಾಜು, (ಜೆಡಿಎಸ್)
1999–ವಿ.ಶ್ರೀನಿವಾಸಪ್ರಸಾದ್, (ಜೆಡಿಯು)
2004–ಕಾಗಲವಾಡಿ ಶಿವಣ್ಣ, (ಜೆಡಿಎಸ್)
2009–ಆರ್.ಧ್ರುವನಾರಾಯಣ (ಕಾಂಗ್ರೆಸ್)
2014–ಆರ್.ಧ್ರುವನಾರಾಯಣ (ಕಾಂಗ್ರೆಸ್)
2019–ವಿ.ಶ್ರೀನಿವಾಸಪ್ರಸಾದ್ (ಬಿಜೆಪಿ)

ಗ್ಯಾರಂಟಿಗೆ ಹಣ ಹೊಂದಿಸಲು ಬೆಲೆ ಏರಿಕೆ



ಗುಂಡ್ಲುಪೇಟೆ ತಾಲೂಕಿನ ಕಬ್ಬಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಪ್ರಚಾರ ಸಭೆಯನ್ನು ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು, ಮಾಜಿ ಶಾಸಕ ನಿರಂಜನಕುಮಾರ್ ಉದ್ಘಾಟಿಸಿದರು.

ಗುಂಡ್ಲುಪೇಟೆ, ಏ.19–ಗ್ಯಾರಂಟಿ ಯೋಜನೆ ಗಳಿಗೆ ಹಣ ಹೊಂದಿಸಲು ರಾಜ್ಯ ಸರ್ಕಾರ ಆರ್‌ಟಿಸಿ, ಮದ್ಯ, ಕೃಷಿ ಪರಿಕರಗಳ ಬೆಲೆ ಏರಿಸಿ ಜನಸಾಮಾನ್ಯರ ಹೊಟ್ಟೆ ಮೇಲೆ ಹೊಡೆಯುವ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಕಿಡಿಕಾರಿದರು.

ತಾಲೂಕಿನ ಕಬ್ಬಹಳ್ಳಿಯ ಬಿಜೆಪಿ ಶಕ್ತಿಕೇಂದ್ರದಲ್ಲಿ ಶುಕ್ರವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಬರಪರಿಹಾರ ನೀಡದೆ ರೈತರನ್ನು ಸಂಪೂರ್ಣ ನಿರ್ಲಕ್ಷಿಸಿದೆ. ಕೆರೆಗಳಿಗೆ ನೀರು ತುಂಬಿಸುವ ಬದಲು ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನದಿಯಿಂದ ನೀರು ಹರಿಸುತ್ತಿದೆ ಎಂದು ತಿಳಿಸಿದರು. ಬಿಜೆಪಿ ಅಧಿಕಾರದಲ್ಲಿದ್ದಾಗ 900 ಕೋಟಿ ರೂ. ಅನುದಾನ ತಂದು ಕ್ಷೇತ್ರ ಅಭಿವೃದ್ಧಿಗೊಳಿಸುವ ಜತೆಗೆ ಎಲ್ಲಾ ಕೆರೆಗಳಿಗೂ ನೀರು ತುಂಬಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಕಬ್ಬಹಳ್ಳಿಯಲ್ಲಿ ಕಾಲೇಜು ಉಳಿಸಿ ಕೊಳ್ಳಲು ಮುಂದಾಗಿಲ್ಲ. ಬರ ಕಾಡುತ್ತಿದ್ದರೂ ಕೆರೆಗಳಿಗೆ ನೀರು ತುಂಬಿಸಲು ಕ್ಷೇತ್ರದ ಶಾಸಕರಿಂದ ಸಾಧ್ಯವಾಗಿಲ್ಲ. ಇಲ್ಲಿವರೆಗೆ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಂಡಿಲ್ಲ ಎಂದು ಲೇವಡಿ ಮಾಡಿದರು.

ಮತದಾರರು ವಿಧಾನಸಭಾ ಚುನಾವಣೆಯಲ್ಲಿ ಮಾಡಿದಂತೆ ಮೈಮರೆಯದೆ ದೇಶದ ಭವಿಷ್ಯ ನಿರ್ಧರಿಸುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಅವರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮಾತ ನಾಡಿ, ಬಿಜೆಪಿ ಭವಿಷ್ಯದಲ್ಲಿ ಭಾರತವನ್ನು ವಿಶ್ವದ ಮೊದಲ ಸ್ಥಾನಕ್ಕೇರಿಸುವ ಬಗ್ಗೆ ಪ್ರಧಾನಿ ಮೋದಿ ಶ್ರಮಿಸುತ್ತಿದ್ದಾರೆ. ಮೋದಿ ಅವರನ್ನು ಮೂರನೇ ಬಾರಿಗೆ ಪ್ರಧಾನಿಯನ್ನಾಗಿಸಲು ಬಿಜೆಪಿಗೆ ಮತ ನೀಡಿ ಎಂದರು.

ದೇಶದ ಕೋಟ್ಯಾಂತರ ಜನರ ಆಪೇಕ್ಷೆಯಂತೆ ರಾಮಮಂದಿರ ನಿರ್ಮಾಣಕ್ಕೆ ನರೇಂದ್ರ ಮೋದಿ ತ್ಯಾಗ ದೊಡ್ಡದು. ಕಾಶ್ಮೀರದ 370 ಕಾಯ್ದೆ ರದ್ದುಗೊಳಿಸಿ, ದೇಶದ ಐಕ್ಯತೆ, ಅಂಬೇಡ್ಕರ್ ಅವರಿಗೆ ಗೌರವ ನೀಡಲು ಸಂವಿಧಾನ ದಿನಾಚ ರಣೆ ಹಾಗೂ ಅಂಬೇಡ್ಕರ್ ಜೀವಿಸಿದ್ದ ಪ್ರಮುಖ ಸ್ಥಳಗಳನ್ನು ಅಭಿವೃದ್ಧಿಗೊಳಿಸಿ ಪಂಚತೀರ್ಥ ರಚನೆ ಮಾಡಿದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲಾಧ್ಯಕ್ಷ ಸಿ.ಮಹದೇವಪ್ರಸಾದ್, ಮುಖಂಡರಾದ ಕಬ್ಬಳ್ಳಿ ರೇವಣ್ಣ, ಮಹೇಶ್, ಎಲ್.ಸುರೇಶ್, ಕನ್ನೇಗಾಲ ಸ್ವಾಮಿ, ನವೀನ ಮೌರ್ಯ, ಮಹೇಶ್, ಮಲ್ಲಿ ಕಾರ್ಜುನ್, ಬಸವರಾಜು, ಮಾಧ್ಯಮ ಸಲಹೆಗಾರ ಎಸ್.ಸಿ.ಮಂಜುನಾಥ್, ವಿವಿಧ ಘಟಕದ ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

ಏಕಲವ್ಯ ಮಾದರಿ ವಸತಿ ಕಾಲೇಜಿಗೆ ಶೇ.100ರಷ್ಟು ಫಲಿತಾಂಶ

ಚಾಮರಾಜನಗರ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹನೂರು ತಾಲೂಕಿನ ಮಂಗಲ ಗ್ರಾಮದ ಏಕಲವ್ಯ ಮಾದರಿ ವಸತಿ ಶಾಲೆ ಮತ್ತು ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದು ಸಾಧನೆ ಮಾಡಿದ್ದಾರೆ.

ವಾಣಿಜ್ಯ ವಿಭಾಗದ ಒಟ್ಟು 28 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ 14 ಅತ್ಯುನ್ನತ, 13 ಪ್ರಥಮ ದರ್ಜೆ ಹಾಗೂ 1 ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿ ಶೇ.100 ರಷ್ಟು ಸಾಧನೆಗೈದಿದ್ದಾರೆ.

ಪುಟ್ಟನಾಯಕ ನಿಧನ



ಚಾಮರಾಜನಗರ, ಏ.19–ಇಲ್ಲಿನ ರಾಮ ಸಮುದ್ರ ನಾಯಕರ ಬೀದಿ ನಿವಾಸಿ ಪುಟ್ಟನಾಯಕ (75) ಶುಕ್ರವಾರ ಸಂಜೆ ನಿಧನರಾದರು.

ಮೃತರಿಗೆ ಪತ್ನಿ, ಬಿಜೆಪಿ ಮುಖಂಡ ನಾಗೇಶ್ ನಾಯಕ್ ಸೇರಿ ಇಬ್ಬರು ಪುತ್ರರು ಇದ್ದಾರೆ. ಶನಿವಾರ ಬೆಳಗ್ಗೆ 11 ಗಂಟೆಗೆ ರಾಮ ಸಮು ದ್ರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

30x40 E/F ಸೈಟು ಮಾರಾಟಕ್ಕಿದೆ
15 ಲಕ್ಷದ 50 ಸಾವಿರಗಳು
ನಂಜುಂಡೇಶ್ವರ ನಗರ
TVS ಫ್ಯಾಕ್ಟರಿ ಹತ್ತಿರ
ಮೈಸೂರು
9742198093

30x40 West facing site is available for sale in G SQUARE PALACIA GATED COMMUNITY
75+ World Class amenities
Just opp, Manipal hospital
Attached to Mysore ring Road
Market price is 64 lakh
Selling it for 60 Lakh
8073300783,9591544080

ಮನೆ ಮಾರಾಟಕ್ಕಿದೆ
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20X30 ಡುಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ
7019188932

ಬೇಕಾಗಿದ್ದಾರೆ
ಮೈಸೂರು, ಚಾಮರಾಜನಗರ, ಪಿರಿಯಾಪಟ್ಟಣ, ಹುಣಸೂರು, ಎಚ್.ಡಿ.ಕೋಟೆ, ಕೊಳ್ಳೇಗಾಲ ಹಾಗೂ ಹನೂರು ತಾಲ್ಲೂಕುಗಳಲ್ಲಿ ರಿಕವರಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
6364891413

WANTED
Teaching staff for Reputed Institution (Experience Preferred) for all subjects. Transport facilities available. Drop your resume through Whatsapp or Contact
8971577685, 9980631121

REQUIRED
For a Reputed Firm in Hebbal Industrial Estate, Mysore.
1. OFFICE ASSISTANT(Female) - 1No
Qualification : B.Com., B.Sc, M.Com
Experience : Minimum 1-2years
Excellent Communication in Kannada English, Hindi. Salary - Rs. 15,000/-
99720 29007

ಬೇಕಾಗಿದ್ದಾರೆ
1) ಆಫೀಸ್ ಸೂಪರ್‌ವೈಸರ್ (ಮಹಿಳೆ) ವಿದ್ಯಾರ್ಹತೆ: B.Com
2) ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್ (ಪುರುಷರು) ಅನುಭವ 2 ವರ್ಷ, ವಿದ್ಯಾರ್ಹತೆ B.Com (ದ್ವಿಚಕ್ರ ವಾಹನ ಇರುವವರು)
3) DTP Designer ಅನುಭವ 2 ವರ್ಷ ಪ್ರಿಂಟಿಂಗ್ ಪ್ರೆಸ್
8123624775

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್,
ಕರ್ನಾಟಕ ಬ್ಯಾಂಕ್ ಹತ್ತಿರ,
ನಜರ್‌ಬಾದ್, ಮೈಸೂರು

HOUSE FOR SALE
@ Muda Layout
2+1 BHK 20x30 South facing Site East facing Door,
Shanthaveri Gopal Gowda Nagar, Mysore
9900251194
9738884777

ಬೇಕಾಗಿದ್ದಾರೆ
ಟಾಟಾ ಏಸ್ ಡ್ರೈವರ್ ಹಾಗೂ ಹೆಲ್ಪರ್ ಹುಡುಗರು ಬೇಕಾಗಿದ್ದಾರೆ
ಆಕರ್ಷಕ ಸಂಬಳ
ಅಶೋಕ ರೋಡ್, ಮೈಸೂರು
Call: 95382 22384
0821-4267800

SS Build Mart®
ISO 9001:2015 Certified Company Depot



PURE TEAK WOOD
@ FACTORY DEPOT RATES
9731591267 / 9901291267

40x60 University Layout
West Facing Site Sale
MUDA Approved,
Price - 1.19 Cr
Near RT Nagar Ring Road
8660105902

RENT FOR PG
14 ROOMS with BIG DINING HALL
in Ramakrishnanagar near Suyog Hospital (Sai Baba Temple)
Contact :
76762 65267 / 94488 90254

40x60 SBM Layout, Bogadi
West Facing Site Sale
MUDA Approved,
Price - 1.19 Cr
8660105902

ಡಿ ಎಡ್ ತರಬೇತಿ ಹೊಂದಿರುವ ಶಿಕ್ಷಕಿಯರು ಬೇಕಾಗಿದ್ದಾರೆ
ಏಕದಂತ ಕಿರಿಯ ಪ್ರಾಥಮಿಕ ಶಾಲೆ (ಇಂಗ್ಲೀಷ್ ಮೀಡಿಯಂ)
ಕಳಸ್ತವಾಡಿ, ಮೈಸೂರು (ತಾ&ಜಿ)
9916778412
9880348677

ಬೇಕಾಗಿದ್ದಾರೆ
ಮೈಸೂರ್ ನಲ್ಲಿ ಕಾಳಿದಾಸ ರೋಡ್ – ಪಂಚವಟಿ ಸರ್ಕಲ್ ಹತ್ತಿರ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ Experienced (1) ಅಡುಗೆ ಭಟ್ಟು (South Cook) (2) ಅಸಿಸ್ಟೆಂಟ್ ಕುಕ್ (ಸಹಾಯಕ) Cutting, Grinding (3) ದೋಸೆ ಭಟ್ಟು Dosa Chef (4) Tandoori Roti ತಂದೂರಿ ರೋಟಿ ಮಾಡುವ (5) ಸಪ್ಲೈಯರ್– ವೇಟರ್ Waiter (6) ಜೋಳದ ರೊಟ್ಟಿ ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ.
9019916266

ಮನೆಯನ್ನು ಕಟ್ಟಿಕೊಡಲಾಗುತ್ತದೆ
ಮೈಸೂರು, ಕೆ.ಆರ್.ಪೇಟೆ, ಕೆ.ಆರ್.ನಗರ, ಹಾಸನ, ಚಾಮರಾಜನಗರ, ಮಂಡ್ಯ ಎಲ್ಲಾ ಸಿಟಿ ಹಾಗೂ ಹಳ್ಳಿಗಳಲ್ಲಿ ಕಟ್ಟಡವನ್ನು ಕಟ್ಟಿ ಕೊಡಲಾಗುತ್ತದೆ. ಒಂದು ಚದರಕ್ಕೆ 1,75000/–
9620377533

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188 / 9880186386

ಸುಗ್ಗಿ ರಿಯಲ್ ಎಸ್ಟೇಟ್
ಸೈಟು ಮಾರಾಟಕ್ಕಿದೆ
40x60 ದಕ್ಷಿಣ ದಿಕ್ಕು
ಬಾಪೂಜಿನಗರ, ಪಾರ್ಕ್ ಎದುರು, 40 ಅಡಿ ರಸ್ತೆ
30x40 ದಕ್ಷಿಣ ದಿಕ್ಕು,
ಆನಂದನಗರ, ರಸ್ತೆ ಕೊನೆಗೆ
9945148025

ಬಾಡಿಗೆಗೆ ಇದೆ
ಬನ್ನೂರು ಸಂತೇಮಾಳದಲ್ಲಿ 72x23 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಇದೆ. ಹೋಟೆಲ್ ನರ್ಸಿಂಗ್ ಹೋಂ ಬ್ಯಾಂಕ್ ಇತರೆಗೆ ಯೋಗ್ಯವಾಗಿರುತ್ತದೆ.
9343290932

ಸುವರ್ಣ ಯಾತ್ರ
1. ನೇಪಾಳ ಪಶುಪತಿನಾಥ ಅಯೋಧ್ಯ ಮುಕ್ತಿನಾಥ ಮನೋಕಮನ ಕಠ್ಮಂಡು ಪೋಕ್ರ ಪ್ರವಾಸ 29–4–24 (9 ದಿನಗಳು)
2. ಚಾರ್ ಧಾಮ್ ಯಾತ್ರ ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ ಯಮುನೋತ್ರಿ, ಹರಿದ್ವಾರ್, ದೇಹಲಿ 13 ದಿನಗಳು 22–5–24 ಹಾಗೂ 12–6–24
6360146483
8660233673

ಮನೆ ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ಹೌಸಿಂಗ್ ಬೋರ್ಡ್‌ನಲ್ಲಿರುವ ಸುಸಜ್ಜಿತ 20x40 ಅಳತೆಯ ವಾಸ ಮಾಡಲು ಯೋಗ್ಯವಿರುವ ಮನೆ ತಕ್ಷಣ ಮಾರಾಟಕ್ಕಿದೆ
7349025025

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸಲ್ ಸರ್ವಿಸ್ ಹೋಟೆಲ್‌ಗೆ ತರಕಾರಿ ಕಟಿಂಗ್, ಕೌಂಟರ್ ಬಾಯ್ಸ್ ಮತ್ತು ಹಿಟ್ಟು ಕಲಸುವವರು ಬೇಕಾಗಿದ್ದಾರೆ. 10 ರಿಂದ 12 ಸಾವಿರ ಸಂಬಳದೊಂದಿಗೆ ಊಟ, ವಸತಿ ಉಚಿತ
7204404170

ಬೇಕಾಗಿದ್ದಾರೆ
ಮೈಸೂರಿನ ಬಾಲಕಿಯರ ಹಾಸ್ಟೆಲ್‌ಗೆ 3 ಲೇಡಿ ವಾರ್ಡನ್ ಬೇಕಾಗಿದ್ದಾರೆ, ಊಟ ಮತ್ತು ವಸತಿ ಉಚಿತ ಸಂಬಳ: 12000 -15000/- ಸ್ಥಳ: ಮೈಸೂರು ಆಸಕ್ತರು ಸಂಪರ್ಕಿಸಿ:
7829244942

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಳಾವಕಾಶ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೋಮೊ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು.
Mob: 9916908454

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಡ್ರೈವರ್ಸ್ ಬೇಕಾಗಿದ್ದಾರೆ
ಪ್ರಸಿದ್ಧ ವಿದ್ಯಾಸಂಸ್ಥೆಗೆ ಬಸ್ ಡ್ರೈವರ್ಸ್ ಬೇಕಾಗಿದ್ದಾರೆ. ನಿವೃತ್ತ ಕೆ.ಎಸ್.ಆರ್.ಟಿ.ಸಿ. ಡ್ರೈವರ್ಸ್‌ಗೆ ಮೊದಲ ಆದ್ಯತೆ. ಸಂಪರ್ಕಿಸಿ:
Mob: 9986002207

WANTED
Female Receptionist for Natural Hair Fixing Centre Mysuru
7625026662

ಕುಕ್ ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ
ಬೆಂಗಳೂರಿನ ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್‌ಗೆ ಕುಕ್ ಮತ್ತು ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯ ವಿರುತ್ತದೆ.
8088419322

ರೋಗ ಯಾವುದೇ ಇರಲಿ
ಯಾವುದೇ ನಿಶ್ಯಕ್ತಿ, ಸೋರಿಯಾಸಿಸ್, ಬಿಳಿಮಚ್ಚೆ, ನವೆ, ವೀರ್ಯದಲ್ಲಿ ಅಣು ಕಡಿಮೆ ಇದ್ದು ಮಕ್ಕಳಿಲ್ಲದಿರುವಿಕೆ, ಮೂತ್ರ ಉರಿ, ಯಾವುದೇ ಸಮಸ್ಯೆಗೆ ಸಂಪರ್ಕಿಸಿ: ಪರಸ್ಥಳದವರು ಕರೆ ಮಾಡಿ ಔಷಧಿ ತರಿಸಿಕೊಳ್ಳಬಹುದು
ಡಾ. ಆರ್.ತ್ಯಾಗರಾಜು
Govt.Reg. No. 7358
9902505474

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

2 BHK HOME INTERIORS
Starting @ ₹2.5 Lacs*
Home Space Mart™
TALK TO OUR DESIGN TEAM
9108923123

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

Star Solar
Renewable Energy



JUST 19,499/-
200 Ltr
Easy EMI
Limited Period Offer
Old system Exchange offer available
Manufacturing : Belawadi Industrial Sub, Mysore
9945616293 / 9449966293

ಚಾಲಕರು ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಶಾಲೆಗೆ ಉತ್ತಮ ಅನುಭವುಳ್ಳ ಬ್ಯಾಡ್ಜ್ (ಅನುಭವ) ಹೊಂದಿರುವ ಚಾಲಕರು ಬೇಕಾಗಿದ್ದಾರೆ. ಉತ್ತಮ ವೇತನ ಕೊಡಲಾಗುವುದು.
8197240113

ತಕ್ಷಣ ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕ್ಯಾಷಿಯರ್ ಹುದ್ದೆಗೆ ಪುರುಷರು/ಮಹಿಳೆಯರು ಅನುಭವಿಗಳಿಗೆ ಮೊದಲ ಆದ್ಯತೆ ಖುದ್ದಾಗಿ ಸಂಪರ್ಕಿಸಿ
ಶ್ರೀ ಸರ್ವಿಸ್ ಸ್ಟೇಷನ್
ಸರಸ್ವತಿಪುರಂ ಮೈಸೂರು

ಬೇಕಾಗಿದ್ದಾರೆ
ಟ್ರಕ್ ಡ್ರೈವರ್ಸ್
ಮೈಸೂರಿನ ಲೋಕಲ್‌ನಲ್ಲಿ ಕೆಲಸ ಮಾಡಲು 24 ಅಡಿ ಸಿಎನ್‌ಜಿ ವಾಹನಗಳಿಗೆ ಡ್ರೈವರ್ಸ್ ಬೇಕಾಗಿದ್ದಾರೆ. ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
Mob: 9341623350

Change of Name
I, Merudhaman Kirthivardhan Neelgund, resident of Mysore, have changed my name as Merudhaman Kirthivardhan on my own free will, infront of Notary K.M. Krishna on 4-4-2024. I state that Merudhaman Kirthivardhan Neelgund and the Merudhaman Kirthivardhan is the name of one and the same person and that is myself.
Sd/- Merudhaman Kirthivardhan

ಕಳೆದಿದೆ
ಕೆ. ಕಲ್ಪನಾ, ನಂ. 73, ದೇವಿರಮ್ಮನಹಳ್ಳಿ ಬಡಾವಣೆ, ನಂಜನಗೂಡು, ಮೈಸೂರು, ನನಗೆ ಸೇರಿದ ನಿವೇಶನದ ಡಾಕ್ಯುಮೆಂಟ್ ನಂ. 835/95–96 ನಂಜನಗೂಡಿನ ಬಸ್ ಸ್ಟ್ಯಾಂಡಿನ ಹತ್ತಿರ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 8618794268

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

REQUIRED
For a Reputed Firm in Hebbal Industrial Estate, Mysore.
1. MARKETING EXECUTIVE(MALE) - 3 Nos
Qualification:ITI/Diploma/Any Degree
Experience: Minimum 1-2years/ Fresher also Can apply. Excellent Communication in Kannada/English/Hindi.
Salary :- Rs.20,000 - Rs.25,000/-
99720 29007

ಬೇಕಾಗಿದ್ದಾರೆ
ನಿರ್ಮಲ ಎಂಟರ್‌ಪ್ರೈಸಸ್‌ನಲ್ಲಿ (Nirmala Enterprises) ಮಾರ್ಕೆಟಿಂಗ್ ಮತ್ತು ಡೆಲಿವರಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ವಿಜಯನಗರ, ಮೈಸೂರು
8147473162
9663372416

MUDA KHATA SITE
East facing corner Site
1124 Sqft. Dadada Halli,
Jnanabharati Layout
Road Behind Airport
Price : 34 Lacs
(Slightly Negotiable)
Direct Owner
9342123373

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
ಕ್ಲೀನಿಂಗ್ ಹಾಗೂ ಪಾತ್ರೆ ತೊಳೆಯಲು ಹೆಂಗಸರು ಬೇಕಾಗಿದ್ದಾರೆ.
ಸಂಬಳ ದಿನಕ್ಕೆ ರೂ. 350.
ತಿಂಡಿ, ಊಟ ಸೌಲಭ್ಯವಿರುತ್ತದೆ.
Mob: 8861868916

ಮನೆ ಮಾರಾಟಕ್ಕಿದೆ
55x45 ಅಳತೆಯ ಕಟ್ಟಡದ ಅರ್ಧಭಾಗ 21x45 ಅಳತೆಯ 2 ಅಂತಸ್ತಿನ ಮನೆ ತ್ಯಾಗರಾಜ ರಸ್ತೆ, 8ನೇ ಕ್ರಾಸ್, ಅಗ್ರಹಾರ, ಮೈಸೂರು.
9448442226, 6361637505

ಸಾಲ / LOANS
* House / Site Purchase
* Construction Loan
* House / Site Mortgage
Loans for MUDA, Corporation & Revenue Property.
77605-98705

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

CHANGE OF NAME
I, K.J. Shayla, R/a No.678, Hosahundi, Mysore-570025, sworn before the Notary to Change my old name K.J.Shyla to new name Shyla Thomson in front of Notary Mr. S.V.Nagenra Mysore
Sd/- Shyla Thomson

SITE FOR SALE
40X60 N/F
40 feet Road
Vijayanagar 4th Stage
1st Phase, Mysore
8880888840

SITES for SALE JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop,
Ramabainagar, Mysore.
DTCP approved (Corporation limits)
1.5 Kms from JP Nagar Ring Road
8660105902

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Commercial Site Vijaynagar 4th Stg
60 x 82
West Facing,
MUDA Site for Sale on Ring Road, Price - 9500/sqft
8660105902

ಕರ್ನಾಟಕದಾದ್ಯಂತ Full Time / part time ಹೆಸರಾಂತ MNC ಕಂಪನಿ, ಆಫೀಸ್ ಕೆಲಸಕ್ಕೆ (Receptionist, Data entry, Accounts ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary + OT [Food and room Free]. 18800/-68000/-
7353049700, 7353049997

ಹೊಸ ಮನೆ ಮಾರಾಟಕ್ಕಿದೆ
20x30 ಉತ್ತರ ದಿಕ್ಕು
ಗುರೂರು 4ನೇ ಹಂತ
ಶ್ರೀನಗರ ಹತ್ತಿರ
41 ಲಕ್ಷ
9379056972

ನಿವೇಶನಗಳು ಮಾರಾಟಕ್ಕಿದೆ
ಮೈಸೂರು ಮತ್ತು ಹುಣಸೂರು ಮುಖ್ಯ ರಸ್ತೆಯಲ್ಲಿ ಮನುಗನಹಳ್ಳಿ ಹತ್ತಿರ ಡಿಟಿಸಿಪಿ ಅಪ್ರೂವಲ್ ನಿವೇಶನ ಅಳತೆ 30x40
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8050009696

JOB OPENING
For woman employees only in Mysore
Age group 30 to 45 years.
Education Degree / Diploma.
Salary: 15K to 20K. ESI and PF. Contact:
8050292837

ಪಾರ್ಟ್ ಟೈಂ ಜಾಬ್
ಮನೆಯಿಂದಲೇ ಕುಳಿತು ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ಹುದ್ದೆಗಳು, ವಯಸ್ಸಿನ ಮಿತಿ ಇಲ್ಲ. ಗಳಿಸಿ ತಿಂಗಳಿಗೆ 7000 ರಿಂದ 15,000ದ ವರೆಗೆ.
7337871752

Nypunya School of Excellence
Premier ICSE and CBSE Schools
R.T. Nagar, Kanakadasa Nagara
Dattagalli 3rd Stage, Mysore-570 0222
Requires following positions: Art Teacher, Swimming Coach, Primary Teacher, Computer Teacher, Kindergarten.
Email CV to:hrnypschool@gmail.com
9110851597

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಒಕ್ಕಲಿಗ, ಬ್ರಾಹ್ಮಣ, ಕುರುಬ, ನಾಯಕ, ವಿಶ್ವಕರ್ಮ, ಮಡಿವಾಳ, ಲಿಂಗಾಯತ, ಬಲಿಜ ನಾಯ್ಡು, ಕುಂಬಾರ, ದೇವಾಂಗ, ಮೊದಲಿಯಾರ್, ಉಪ್ಪಾರ, ತಮಿಳು, SC, ST, ಈಡಿಗ, ಕುರುಹಿನಶೆಟ್ಟಿ ಎಲ್ಲಾ ಜಾತಿಯ ಮೊದಲನೇ ಮತ್ತು ಎರಡನೇ ಮರು ಮದುವೆಯಾಗುವ ವಧು–ವರರು ನೇರವಾಗಿ ಸಂಪರ್ಕಿಸಿ
8951241381
(PUC or MBA Doctors, Engg.)

Sudarshan Saur
SOLAR WATER HEATER



SUNZONE SOLAR SYSTEM
Vishwamanava Double Road,
Kuvempunagar, Mysuru
9845175443

ಬಾಡಿಗೆಗೆ/ ಮಾರಾಟಕ್ಕಿದೆ
ಚಾಲ್ತಿಯಲ್ಲಿರುವ ಬೇಕರಿ ಎಲ್ಲಾ ಸಲಕರಣೆಯೊಂದಿಗೆ ಆರ್.ಟಿ.ಆರ್ ಕಾಂಪ್ಲೆಕ್ಸ್ ವಿದ್ಯಾರಣ್ಯಪುರಂ, ಮೈಸೂರು–8
ಬುಕ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
9980135125

ಸೈಟ್ ಮಾರಾಟಕ್ಕಿದೆ
ಅಳತೆ : 40x60 ಪಶ್ಚಿಮ ಫೇಸ್ 80 ರಸ್ತೆ, ಕಾರ್ನರ್ ಸೈಟ್ ಪ್ರತಿ ಚದರ ಅಡಿಗೆ 7000/– ನೆಗೋಷಿಯಬಲ್ ವಸಂತನಗರ, ಮೈಸೂರು.
8861139197

ಕಳೆದಿದೆ
ಬಿ.ಎನ್.ರಾಮಸ್ವಾಮಿ, ಶ್ರೀರಾಂಪುರ ಗ್ರಾಮದ ಸರ್ವೆ ನಂ. 180/1, ನಿವೇಶನದ ಸಂಖ್ಯೆ 67, ಮನೆ ಸಂಖ್ಯೆ 1337, 8ನೇ ಕ್ರಾಸ್, ಸಿ ಬ್ಲಾಕ್, ಮಹದೇವಪುರ, ಇದರ ಕ್ರಯ ಪತ್ರ ಕಳೆದಿದೆ ಸಿಕ್ಕಿದವರು ಸಂಪರ್ಕಿಸಿ:
9611415483

ಮನೆ ಹಾಗೂ ಮಳಿಗೆ ಬಾಡಿಗೆಗೆ ಇದೆ
ಮೈಸೂರು ಕುವೆಂಪುನಗರದ ಅಪೋಲೋ ಆಸ್ಪತ್ರೆ ರಸ್ತೆ RMP ಕ್ವಾಟರ್ಸ್ ಎದುರು ಪೂರ್ವದಿಕ್ಕಿಗೆ 9 ಚದರದ ಮನೆ ಪಕ್ಕದಲ್ಲಿ 22'x16' ಅಳತೆಯ ದರ್ಶಿನಿ ನಡೆಯುತ್ತಿರುವ ಮಳಿಗೆ ಬಾಡಿಗೆಗಿದೆ.
8197609290

CHANGE OF NAME
I, N.R Niveditha residing at No. 10/2, Shreyas Temple road, VV Puram, Mysuru, Karnataka, have changed my name from N.R. Niveditha to N.R.Nivedita on my own free will sworn in before Notary Goutham Chand, Mysore-Vide affidavit dated 16-04-2024
Sd/- N.R. Nivedita

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ
6361740552

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಹೌಸ್‌ಕೀಪಿಂಗ್ ಹೆಂಗಸರು, ಹುಡುಗರು, ಬೋಗಾದಿ ಟಿ.ಕೆ.ಲೇಔಟ್, ಬನ್ನಿಮಂಟಪ ಕೂರ್ಗಳ್ಳಿ, ಸಿಟಿಯ ಮಧ್ಯಭಾಗದಲ್ಲಿ ಕರ್ತವ್ಯ ನಿರ್ವಹಿಸಬಲ್ಲವರು.
9035367083

CHANGE OF NAME
I, Girish Prabhakara residing at 1422 k2/2, 6th Cross, Thyagaraja Road, K.R.Mohalla, Mysuru-570004, have changed my name from Girish P to Girish Prabhakara on my own fee will sworn in before Notary S.V. Nagendra, Mysuru vide affidavit dated 19-04-2024
Sd/- Girish Prabhakara

ಏಕ ನಿವೇಶನಗಳು ಮಾರಾಟಕ್ಕೆ
ಚಾಮರಾಜನಗರ, ಕರಿನಂಜನಪುರ ಬಡಾವಣೆ ದೀನ ಬಂಧು ಸಂಸ್ಥೆ ಬಳಿ 960 ಮತ್ತು 1059 ಚದರ ಮೀಟರ್ ಅಳತೆಗಳ ಏಕ ನಿವೇಶನಗಳು ಕ್ರಮವಾಗಿ 80 ಲಕ್ಷ ಮತ್ತು 1 Cr. (Negotiable)
9880243301

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿ ಇರುತ್ತದೆ. ಸಂಬಳ + ಓಟಿ 15200–86000
6364308851
7892046990

ಪುರುಷರು ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸ ವಯಸ್ಸು– 18 ರಿಂದ 45, 8 Hrs Duty ಸಂಬಳ–16700 +ESI+PF -21500 Week off ಹಾಗೂ 3 Shift ಗಳು ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಬಂದು ಸಂಪರ್ಕಿಸಿ ಯಾವುದೇ Fee ಇರುವುದಿಲ್ಲ ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ರಿಂಗ್ ರೋಡ್, ಮೈಸೂರು
9986874574

WANTED
ಫರ್ನಿಷಿಂಗ್ ಅಂಗಡಿಯಲ್ಲಿ Telecaller Experience ಇರುವವರು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ. Salary - 12k to 15k
Time - 10 am to 7 pm
Address: Akbar Road, Near Ashoka Road,
9916514950

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಎರಡು ಗುಂಪುಗಳ ನಡುವೆ ಮಾರಾಮಾರಿ
ಪೊಲೀಸರ ವಾಹನದ ಮೇಲೆ ಕಲ್ಲು ತೂರಿ ಜಖಂ; 14 ಮಂದಿ ಬಂಧನ

ಮೈಸೂರು, ಏ.19(ಎಸ್‌ಬಿಡಿ)– ಎರಡು ಗುಂಪುಗಳ ನಡುವಿನ ಗಲಾಟೆ ನಿಯಂತ್ರಿಸಲು ಹೋಗಿದ್ದಾಗ ಪೊಲೀಸರ ವಾಹನದ ಮೇಲೆ ಕಲ್ಲು ತೂರಿದ ಘಟನೆ ಮೈಸೂರಿನ ಬಿಎಂಶ್ರೀ ನಗರದಲ್ಲಿ ನಡೆದಿದ್ದು, ಈ ಸಂಬಂಧ 14 ಮಂದಿಯನ್ನು ಬಂಧಿಸಲಾಗಿದೆ.

ಬಿಎಂಶ್ರೀ ನಗರ ಅಂಬೇಡ್ಕರ್ ಕಾಲೋನಿ ಬಳಿ ಇರುವ ಚರ್ಚ್ ಸಮೀಪ ಗುರುವಾರ ರಾತ್ರಿ 10.30ರ ಸಮಯದಲ್ಲಿ ಈ ಘಟನೆ ಸಂಭವಿಸಿದ್ದು, ಪೊಲೀಸ್ ವಾಹನದ ಗಾಜು ಪುಡಿ ಪುಡಿಯಾಗಿದೆ.

ಇಲ್ಲಿನ ನಿವಾಸಿಗಳಾದ ಜಾನ್‌ಪೀಟರ್ ಪುತ್ರ ಹಾಗೂ ಹುಸೇನ್ ಪುತ್ರನ ನಡುವೆ ಗುರುವಾರ ರಾತ್ರಿ ಕ್ಷುಲ್ಲಕ ಕಾರಣಕ್ಕೆ ಗಲಾಟೆಯಾಗಿದೆ. ಇದೇ ವಿಚಾರವಾಗಿ ಎರಡೂ ಕುಟುಂಬಗಳ ನಡುವೆ ಗಲಾಟೆ ಶುರುವಾಗಿ, ನೆರೆಹೊರೆಯವರು, ಸಂಬಂಧಿಕರು ಜಮಾಯಿಸಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ. ಈ ವೇಳೆ ಕೆಲವರು ಹಲ್ಲೆಗೊಳಗಾಗಿದ್ದಾರೆ.

ವಿಷಯ ತಿಳಿದು ಮೇಟಗಳ್ಳಿ ಠಾಣೆ ಪೊಲೀಸರು ದೌಡಾಯಿಸಿ, ಗಲಾಟೆ ನಿಯಂತ್ರಿಸಲು ಪ್ರಯತ್ನಿಸಿದ್ದಾರೆ. ಆದರೆ ಪರಿಸ್ಥಿತಿಯನ್ನು ಹತೋಟಿಗೆ ತರುವ ಉದ್ದೇಶದಿಂದ ಹುಸೇನ್ ಸೇರಿದಂತೆ ಕೆಲವರನ್ನು ಠಾಣೆಗೆ ಕರೆದೊಯ್ಯಲು ಮುಂದಾಗಿದ್ದಾರೆ. ಈ ವೇಳೆ ಕೆಲವು ಯುವಕರು 112 ಪೊಲೀಸ್ ವಾಹನದ ಮೇಲೆಯೇ ಕಲ್ಲು ತೂರಿದ್ದು, ವಾಹನದ ಗಾಜು ಪುಡಿಪುಡಿಯಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಂಡು 14 ಜನರನ್ನು ಬಂಧಿಸಲಾಗಿದೆ. ಇನ್ನು ಗಲಾಟೆಗೆ ಸಂಬಂಧಿಸಿದಂತೆ ಜಾನ್ ಪೀಟರ್ ಹಾಗೂ ಹುಸೇನ್ ಕುಟುಂಬದವರು ಪರಸ್ಪರ ದೂರು ನೀಡಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ ಎಂದು ಮೇಟಗಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಾಂತರಾಮ್ ತಿಳಿಸಿದ್ದಾರೆ.

ನಗರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್, ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಮಾಹಿತಿ ಪಡೆದಿದ್ದಾರೆ.

ಇಂದು ಫೋಟೋ ಚಲನಚಿತ್ರ ಪ್ರದರ್ಶನ

ಮೈಸೂರು, ಏ.19–ಮೈಸೂರಿನ ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನಾಚರಣೆ ಅಂಗವಾಗಿ ಕೊರೊನಾ ವೇಳೆಯ ಜನತೆಯ ಸಂಕಷ್ಟ ಕುರಿತು ನಿರ್ದೇಶಿಸಿರುವ 'ಫೋಟೋ' ಎಂಬ ಚಲನಚಿತ್ರವನ್ನು ಏ.20ರ ಸಂಜೆ 5.30ಕ್ಕೆ ನಗರದ ಕಲಾಮಂದಿರದಲ್ಲಿ ಉಚಿತ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ನಿರ್ದೇಶಕ ಉತ್ತಮ್ ಗೋನ್ವಾರ್ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿ, ಚಿತ್ರವು ಸುಮಾರು ಒಂದೂವರೆ ಗಂಟೆ ಅವಧಿಯದ್ದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಪದಾಧಿಕಾರಿ ಸೋಸಲೆ ಸಿದ್ದರಾಜು, ಮಹದೇವ್, ಡಾ. ಕುಮಾರಸ್ವಾಮಿ ಉಪಸ್ಥಿತರಿದ್ದರು.

ನರೇಂದ್ರ ಮೋದಿ ಸಾಂಗ್ ಶೇರ್ ಮಾಡಿ ಅಂದಿದ್ದಕ್ಕೆ ಯುವಕನ ಮೇಲೆ ಹಲ್ಲೆ ಆರೋಪ

ಮೂವರ ವಿರುದ್ಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಏ. 19(ಆರ್‌ಕೆ, ಎಂಕೆ)– ಯುಟ್ಯೂಬ್‌ನಲ್ಲಿ ಸಬ್‌ಸ್ಕ್ರೈಬ್ ಆಗಿ ತಾನು ಪ್ರಧಾನಿ ನರೇಂದ್ರ ಮೋದಿ ಅವರಿಗಾಗಿ ರಚನೆ ಮಾಡಿರುವ ಹಾಡನ್ನು ಇತರರಿಗೆ ಶೇರ್ ಮಾಡಿ ಎಂದು ಕೇಳಿದ ಯುವಕನ ಮೇಲೆ ಗುಂಪೊಂದು ಹಲ್ಲೆ ಮಾಡಿರುವ ಘಟನೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಸರ್ಕಾರಿ ಅತಿಥಿ ಗೃಹದ ಬಳಿ ಇಂದು ಮಧ್ಯಾಹ್ನ ನಡೆದಿದೆ.

ಮೈಸೂರು ತಾಲೂಕು, ಮೆಲ್ಲಹಳ್ಳಿಯ ಹಳ್ಳಿಕೆರೆಹುಂಡಿ ಗ್ರಾಮದ ವೆಂಕಟರಮಣೇಗೌಡರ ಮಗ ಲಕ್ಷ್ಮೀನಾರಾಯಣ (40) (ರೋಹಿತ್ ರಮಣ್), ಯುವಕರ ಗುಂಪಿನಿಂದ ಹಲ್ಲೆಗೊಳಗಾದವರಾಗಿದ್ದು, ಆತ ನೀಡಿದ ಲಿಖಿತ ದೂರಿನ ಮೇರೆಗೆ ನಜರ್‌ಬಾದ್ ಠಾಣೆ ಪೊಲೀಸರು ಸಲೀಂ, ಜಾವಿದ್, ಪಾಷಾ ಹಾಗೂ ಇತರರ ವಿರುದ್ಧ ಐಪಿಸಿ ಸೆಕ್ಷನ್ 341, 323, 324, 504, 505(2), 506, 34 ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾನು ನರೇಂದ್ರ ಮೋದಿ ಅವರ ಅಭಿಮಾನಿಯಾಗಿದ್ದು, ಅವರಿಗಾಗಿ 'ಜೈ ಹೋ ಮೋದಿ' ಎಂಬ ಶೀರ್ಷಿಕೆಯಡಿ ಹಾಡನ್ನು ರಚನೆ ಮಾಡಿ ಆರ್‌ಆರ್ ಫಿಲಂ ಕಂಪನಿ ಹೆಸರಿನ ಯುಟ್ಯೂಬ್ ಚಾನೆಲ್‌ಗೆ ಅಪ್‌ಲೋಡ್ ಮಾಡಿದ್ದೇನೆ. ಅದನ್ನು ಸಬ್‌ಸ್ಕ್ರೈಬ್ ಮಾಡಿಕೊಳ್ಳುವಂತೆ ಹಲವರನ್ನು ಕೋರಿಕೊಳ್ಳುತ್ತಿದ್ದೇನೆ ಎಂದು ಲಕ್ಷ್ಮೀನಾರಾಯಣ ತನ್ನ ದೂರಿನಲ್ಲಿ ತಿಳಿಸಿದ್ದಾರೆ.


ಲಕ್ಷ್ಮೀನಾರಾಯಣ

ಅದರಂತೆ ಇಂದು ಮಧ್ಯಾಹ್ನ 12.30 ಗಂಟೆ ವೇಳೆಗೆ ಮೈಸೂರಿನ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿ ಕುಳಿತಿದ್ದಾಗ ಅಲ್ಲಿಗೆ ಬಂದ ಒಬ್ಬ ಹುಡುಗನನ್ನು ಕರೆದು, ನಾನು ಮಾಡಿರುವ ಮೋದಿ ಹಾಡನ್ನು ನೋಡಿ ಚಾನೆಲ್‌ಗೆ ಸಬ್‌ಸ್ಕ್ರೈಬ್ ಆಗಿ ಅದನ್ನು ಇತರರಿಗೆ ಶೇರ್ ಮಾಡು ಎಂದು ಕೇಳಿದೆ. ಆ ಹಾಡನ್ನು ಕೇಳಿಸಿಕೊಂಡ ಆತ, ತುಂಬಾ ಚೆನ್ನಾಗಿದೆ. ನನ್ನ ಸ್ನೇಹಿತರಿದ್ದಾರೆ, ಸಬ್‌ಸ್ಕ್ರೈಬ್ ಮಾಡಿಸಿ ಶೇರ್ ಮಾಡಿಸುತ್ತೇನೆ ಎಂದು ಹೇಳಿ ನನ್ನನ್ನು ಅಲ್ಲೇ ಸ್ವಲ್ಪ ದೂರ ಕರೆದೊಯ್ದ.

ಅಲ್ಲಿ ಇದ್ದ ನಾಲ್ಕು ಮಂದಿ ಈತನ ಜೊತೆ ಸೇರಿ ನನ್ನ ಬಾಯಿ ಮುಚ್ಚಿ ಹೊಡೆದರು. ತಲೆ ಮೇಲೆ ಬಿಯರ್ ಸುರಿದು ಬಾಟಲಿಯಿಂದ ಕೊಯ್ದು, ಸಿಗರೇಟ್‌ನಿಂದ ಸುಟ್ಟರು. ಅಲ್ಲದೇ ಉರ್ದು ಭಾಷೆಯಲ್ಲಿ ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನಿಸಿದರು. ಅವರುಗಳ ಪೈಕಿ ಮೂವರ ಹೆಸರನ್ನು ಸಲೀಂ, ಜಾವಿದ್, ಪಾಷ ಎಂದು ಹೇಳುತ್ತಿದ್ದುದು ಕೇಳಿಸಿತು ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಬಿಜೆಪಿ ಕಚೇರಿಗೆ ಹೋಗಿ ನಂತರ ಪೊಲೀಸರೊಂದಿಗೆ ಕೆಆರ್ ಆಸ್ಪತ್ರೆಗೆ ತೆರಳಿ ಪ್ರಥಮ ಚಿಕಿತ್ಸೆ ಪಡೆದು ಅಲ್ಲಿಂದ ನಜರ್‌ಬಾದ್ ಠಾಣೆಗೆ ಬಂದೆ ಎಂದು ಲಕ್ಷ್ಮೀನಾರಾಯಣ ತಿಳಿಸಿದ್ದಾರೆ. ಸಬ್ ಇನ್ಸ್‌ಪೆಕ್ಟರ್ ಸಿದ್ದಬೈಮವಾದಾಪುರ ಎಫ್‌ಐಆರ್ ದಾಖಲಿಸಿ ಪ್ರಕರಣದ ತನಿಖೆ ಕೈಗೊಂಡಿದ್ದಾರೆ.

ಸಿನಿಮಾ ಕ್ಷೇತ್ರದಲ್ಲಿ ಹೆಸರು ಮಾಡಬೇಕು ಎಂದುಕೊಂಡಿದ್ದ ಲಕ್ಷ್ಮೀನಾರಾಯಣ ಬೆಂಗಳೂರಿನಲ್ಲಿ ನೆಲೆಸಿದ್ದು, ಹಾಗಾಗ ಮೈಸೂರಿಗೆ ಬರುತ್ತಿದ್ದ. ಕೆಲ ದಿನಗಳ ಹಿಂದಷ್ಟೇ ಮೈಸೂರಿಗೆ ಬಂದಿದ್ದು, ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮನೆಯಿಂದ ಹೊರಟು ಸರ್ಕಾರಿ ಅತಿಥಿಗೃಹದ ಬಳಿಗೆ ಬಂದಾಗ ಹಲ್ಲೆ ನಡೆದಿದೆ ಎನ್ನಲಾಗಿದೆ

ಶಾಸಕ ಟಿ.ಎಸ್.ಶ್ರೀವತ್ಸ ಖಂಡನೆ...

ಮೋದಿ ಹಾಡು ಹಾಡಿದ್ದ ಕಾರಣಕ್ಕೆ ಯುವಕನ ಮೇಲೆ ಹಲ್ಲೆ ಮಾಡಿರುವುದು ಖಂಡನೀಯ ಎಂದು ಬಿಜೆಪಿ ಶಾಸಕ ಶ್ರೀವತ್ಸ ತಿಳಿಸಿದ್ದಾರೆ.

ಮೂರು ದಿನಗಳ ಹಿಂದೆ ಆ ಯುವಕ ನನ್ನನ್ನು ಭೇಟಿ ಮಾಡಿದ್ದ. ನಾನೇ ಆ ಗೀತೆಯನ್ನು ಬಿಡುಗಡೆ ಮಾಡಿದ್ದೆ. ಹಾಡು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಮೋದಿ ಮೂರನೇ ಬಾರಿ ಯಾಕೆ ಪಿಎಂ ಆಗಬೇಕು ಎಂಬುದನ್ನು ಬಹಳ ಸ್ಪಷ್ಟವಾಗಿ ತೋರಿಸಲಾಗಿದೆ ಎಂದಿದ್ದೆ. ಇಂದು ಆ ಯುವಕನ ಮೇಲೆ ಮೋದಿ ಹಾಡು ಹಾಡಿದ ವಿಚಾರಕ್ಕೆ ಹಲ್ಲೆ ಮಾಡಲಾಗಿದೆ. ಯುವಕನೇ ಹೇಳುವಂತೆ ಯುವಕರ ಗುಂಪು ಹಲ್ಲೆ ಮಾಡಿ ಮೂತ್ರ ವಿಸರ್ಜನೆ ಮಾಡಿದ್ದಾರಂತೆ. ಇದನ್ನು ನಾನು ಖಂಡಿಸುತ್ತೇನೆ. ಚುನಾವಣಾ ವೇಳೆಯಲ್ಲಿ ಇಂತಹ ಘಟನೆ ನಡೆಯಬಾರದು. ಈಗಾಗಲೇ ವಿಚಾರಣೆ ನಡೆಸುವಂತೆ ಡಿಸಿಪಿ ಜೊತೆ ಮಾತನಾಡಿದ್ದೇನೆ. ಮೋದಿ ಹಾಡು ಹಾಡಿದ ವಿಚಾರಕ್ಕಾಗಿಯೇ ಹಲ್ಲೆ ಮಾಡಿರುವುದು ಸಾಬೀತಾದರೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಹಲ್ಲೆ ಆರೋಪಿಗಳ ಪತ್ತೆಗೆ ಆರು ವಿಶೇಷ ತಂಡ ರಚನೆ

ಮೈಸೂರು, ಏ.19(ಎಸ್‌ಬಿಡಿ)– ಪ್ರಧಾನಿ ಮೋದಿ ಕುರಿತ ಹಾಡನ್ನು ಅಪ್‌ಲೋಡ್ ಮಾಡಿದ್ದ ಯೂಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಮಾಡುವ ನೆಪದಲ್ಲಿ ಲಕ್ಷ್ಮೀ ನಾರಾಯಣ ಅವರ ಮೇಲೆ ಗುಂಪೊಂದು ಹಲ್ಲೆ ನಡೆಸಿದ ಪ್ರಕರಣ ಸಂಬಂಧ ಆರೋಪಿಗಳ ಪತ್ತೆಗೆ 6 ವಿಶೇಷ ತಂಡ ರಚಿಸಲಾಗಿದೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಡಿಸಿಪಿಗಳಾದ ಮುತ್ತುರಾಜ್ ಹಾಗೂ ಎಸ್.ಜಾಹ್ನವಿ ನೇತೃತ್ವದಲ್ಲಿ ಎಸಿಪಿಗಳು, ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿಯನ್ನೊಳಗೊಂಡ 6 ವಿಶೇಷ ತಂಡಗಳನ್ನು ರಚಿಸಿದ್ದು, ಹಲ್ಲೆ ನಡೆಸಿದ ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ಕಾರ್ಯ ಕೈಗೊಳ್ಳಲಾಗಿದೆ.

ಎಂ.ಲಕ್ಷ್ಮಣ್ ಪರ ಎಂ.ಕೆ.ಸೋಮಶೇಖರ್, ಹೆಚ್.ವಿ.ರಾಜೀವ್ ಬಿರುಸಿನ ಪ್ರಚಾರ



ಮೈಸೂರು,ಏ.19(ಎಂಟಿವೈ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಕೆ.ಆರ್.ಕ್ಷೇತ್ರದ ವಿವಿಧೆಡೆ ಬಿರುಸಿನ ಪ್ರಚಾರ ನಡೆಸಿದರು.

ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆಲನಹಳ್ಳಿ, ಲಲಿತ ಮಹಲ್ ನಗರ, ಆಶ್ರಯ ಬಡಾವಣೆ, ದಾಮೋದರ ಬಡಾವಣೆ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿ ರೋಡ್ ಶೋ ಹಾಗೂ ಪಾದಯಾತ್ರೆ ಮೂಲಕ ಮತಯಾಚಿಸಿ, ಏ.26ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಮತ ನೀಡುವಂತೆ ಕೋರಿದರು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಸರ್ವ ಜನಾಂಗಗಳ ಹಿತರಕ್ಷಣೆ ಸಾಧ್ಯ. ನುಡಿದಂತೆ ನಡೆದು, ಸಾಮಾಜಿಕ ನ್ಯಾಯ ಒದಗಿಸುವ ಮೂಲಕ ಎಲ್ಲಾ ವರ್ಗದ ಹಿತ ಕಾಯುವ ಪಕ್ಷ ಕಾಂಗ್ರೆಸ್. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲಾ ವರ್ಗದ ಜನರ ಹಿತಕಾಯುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿದೆ. ಅನ್ನಭಾಗ್ಯ, ಶಕ್ತಿಯೋಜನೆ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ ಕಾರ್ಯಕ್ರಮಗಳನ್ನು ಜಾರಿಗೆ ತಂದು ಬಡ ಹಾಗೂ ಶೋಷಿತ ಸಮುದಾಯಗಳು ಗೌರವಯುತವಾಗಿ ಜೀವನ ನಡೆಸುವುದಕ್ಕೆ ನೆರವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಂದರೆ ರೈತರ ಸಾಲಮನ್ನಾ, ಮನೆಯ ಯಜಮಾನಿಗೆ ವರ್ಷಕ್ಕೆ ಒಂದು ಲಕ್ಷ ರೂ. ನೀಡುವ ಯೋಜನೆ, ನಿರುದ್ಯೋಗಿಗಳಿಗೆ ಮಾಸಿಕ ಒಂದು ಲಕ್ಷ ವೇತನ ಸಿಗುವ ಉದ್ಯೋಗ ನೀಡುವುದೂ ಸೇರಿದಂತೆ ವಿವಿಧ ಮಹತ್ತರ ಯೋಜನೆಗಳನ್ನು ಜಾರಿಗೊಳಿಸುವ ವಾಗ್ದಾನ ನೀಡಲಾಗಿದೆ. ಅಧಿಕಾರಕ್ಕೆ ಬಂದರೆ, ನಾವು ನೀಡಿದ ಭರವಸೆ ಜಾರಿಗೊಳಿಸುವುದರಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡುವಂತೆ ಕೋರಿದರು.

ಈ ಸಂದರ್ಭದಲ್ಲಿ ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮಾಜಿ ಮೇಯರ್‌ಗಳಾದ ಪುಷ್ಪಾಲತಾ ಜಗನ್ನಾಥ್, ಬಿ.ಎಲ್.ಭೈರಪ್ಪ ಪಾಲಿಕೆ ಮಾಜಿ ಸದಸ್ಯರಾದ ರಜಿನಿ ಅಣ್ಣಯ್ಯ, ಕೆ.ವಿ.ಮಲ್ಲೇಶ್, ಆರ್.ಹೆಚ್.ಕುಮಾರ್, ಶೋಭಾ ಮೋಹನ್, ಪಲ್ಲವಿ ಬೇಗಂ, ಗ್ರಾ.ಪ. ಉಪಾಧ್ಯಕ್ಷೆ ರಾಣಿ ಶಿವಣ್ಣ, ಮುಖಂಡರಾದ ನಾಡನಹಳ್ಳಿ ರವಿ, ಆಲನಹಳ್ಳಿ ಪುಟ್ಟಸ್ವಾಮಿ, ದೀಪಕ್ ಪುಟ್ಟಸ್ವಾಮಿ, ರಾಜೇಶ್ವರಿ, ಶೋಭಾ, ಮಂಜುಳಾ, ನಾಯಕ್, ಮಹದೇವಶೆಟ್ಟಿ, ಕುರುಬಾರಹಳ್ಳಿ ರವಿ, ಸೋಮು, ಜೆ.ಪ್ರಕಾಶ್, ಮಣ್ಣು ರವಿ, ಧನಂಜಯ, ನವೀನ್ ಅಪ್ಪು ಗೌಡ, ಕುರುಬಾರಹಳ್ಳಿ ಪ್ರಕಾಶ್, ಆಶ್ರಯ ಮಹದೇವು, ಕಿರಣ್, ಕ್ರಿಯೇಟಿವ್ ಕುಮಾರ್, ಸುಂದರ್, ಮಲ್ಲೇಶ್, ಫಾರೂಕ್ ನಾಸೀರ್, ಮಧುರಾಜ್ ಮತ್ತಿತರರು ಉಪಸ್ಥಿತರಿದ್ದರು.

ರೇಷ್ಮೆ ದರ ನಿಗದಿ : ಪರ, ವಿರೋಧ ಪ್ರತಿಭಟನೆ

ಮೈಸೂರು, ಏ.19(ಜಿಎ)–ಮೈಸೂರಿನ ಎಪಿಎಂಸಿ ಮಾರುಕಟ್ಟೆಯ ಆವರಣದಲ್ಲಿರುವ ರೇಷ್ಮೆ ಮಾರುಕಟ್ಟೆ ಮುಂಭಾಗ ರೇಷ್ಮೆಗೂಡಿನ ದರವನ್ನು ವೈಜ್ಞಾನಿಕವಾಗಿ ನಿಗದಿ ಪಡಿಸುವ ವಿಚಾರವಾಗಿ ಪರ ಹಾಗೂ ವಿರೋದ ಪ್ರತಿಭಟನೆಗಳು ಶುಕ್ರವಾರ ನಡೆದವು.

ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಮುಖಂಡರು ವೈಜ್ಞಾನಿಕವಾಗಿ ನಿಗದಿ ಪಡೆಸುವಂತೆ ಆಗ್ರಹಿಸಿ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಸದರಿ ಮಾರುಕಟ್ಟೆಯಲ್ಲಿ ಎರಡನೇ ಅವಧಿಗೆ ರೈತರಿಗೆ ಮೊದಲ ಗ್ರೇಡ್‌ಗಿಂತಲೂ ಕಡಿಮೆ ಬೆಲೆ ನಿಗಧಿ ಮಾಡುತ್ತಿರುವುದು ಅವೈಜ್ಞಾನಿಕವಾಗಿದೆ. ಇಂತಹ ಅವೈಜ್ಞಾನಿಕ ಪದ್ಧತಿಯನ್ನು ಕೈ ಬಿಟ್ಟು ನಿರ್ಧಿಷ್ಠ ದರ ನಿಗಧಿಗೆ ಅಧಿಕಾರಿಗಳು ಕ್ರಮವಹಿಸಬೇಕು. ಇನ್ನೂ ಅನೇಕ ಕಡೆಗಳಲ್ಲಿ ರೇಷ್ಮೆ ಮನೆಗಳ ಅನುದಾನ ಬಿಡುಗಡೆಯಾಗಿಲ್ಲ. ಬ್ಲೀಚಿಂಗ್ ಪೌಂಡರ್ ನೀಡಿಲ್ಲ ಇಂತಹ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಬೇಕು. ಕೆಲ ಕಿರಿಯ ಮಟ್ಟದ ಅಧಿಕಾರಿಗಳು ರೈತರ ಹಣ ಬಿಡುಗಡೆಗೆ ಪರೋಕ್ಷವಾಗಿ ಹಣದ ಬೇಡಿಕೆಯಿಟ್ಟಿದ್ದು ಅಂತಹವರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಮನವಿ ಸಲ್ಲಿಸಿದರು.


ಮೈಸೂರಿನ ಎಪಿಎಂಸಿ ಮಾರುಕಟ್ಟೆಯ ಆವರಣದಲ್ಲಿರುವ ರೇಷ್ಮೆ ಮಾರುಕಟ್ಟೆ ಮುಂಭಾಗ ರೇಷ್ಮೆಗೂಡಿನ ದರವನ್ನು ವೈಜ್ಞಾನಿಕವಾಗಿ ನಿಗದಿ ಪಡಿಸುವಂತೆ ಆಗ್ರಹಿಸಿ ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಮುಖಂಡರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ನಟರಾಜು ಚಾಮರಾಜನಗರ, ಬಸವನಪುರ ಸದಾನಂದ, ಚಿನಂಬಳ್ಳಿ ಮಹೇಶ್, ಬೀರಿ ಹುಂಡಿ ಮಹೇಶ್, ದೊಡ್ಡುಂಡಿ ಕೃಷ್ಣ ತಮ್ಮ ಸಮಸ್ಯೆ ಹೇಳಿಕೊಂಡರು. ರೈತ ಸಂಘಟನೆಯ ಪ್ರಮುಖರಾದ ರಾಮೇಗೌಡ, ಹೊನ್ನೂರು ಪ್ರಕಾಶ್, ಮಂಜು ಕಿರಣ್, ರಘು ಇಮ್ಮವ್ವೂ, ಸತೀಶ್ ರಾವ್, ವೆಂಕಟೇಶ್ ಗಳಿಗರಹುಂಡಿ, ಮಹೇಶ್ ಗುಂಡ್ಲುಪೇಟೆ ಅಹಲ್ಯಾ, ನಾಗರಾಜು ನಟರಾಜು, ಕಳ್ಳಿಪುರ ಮಹದೇವಸ್ವಾಮಿ, ಅಲ್ಗಂಚಿ ದೊಡ್ಡಯ್ಯ ಹಾಗೂ ಶೈಲಜಾ ಪಾಲ್ಗೊಂಡಿದರು.

ರೈತ ಸಂಘದ ಪ್ರತಿಭಟನೆ ವಿರೋಧಿಸಿದ ರೇಷ್ಮೆ ವ್ಯಾಪಾರಿಗಳು, ಕಳೆದ ಐದು ವರ್ಷದಿಂದ ಮೈಸೂರಿನಲ್ಲಿ ರೇಷ್ಮೆ ಮಾರಾಟ ಮಾಡಲಾಗುತ್ತಿದ್ದು, ಇದಕ್ಕೆ ಕೆಟ್ಟ ಹೆಸರು ತರುವ ಪ್ರಯತ್ನದಲ್ಲಿ ಕೆಲವರು ಹೋರಾಟ ಮಾಡುತ್ತಿದ್ದಾರೆ. ವೈಜ್ಞಾನಿಕವಾಗಿ ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ದರ ನಿಗದಿ ಪ್ರಕ್ರಿಯೆ ಇಲ್ಲ. ಇದಾಗಿಯೂ ಅವೈಜ್ಞಾನಿಕವಾಗಿ ಪ್ರತಿಭಟಿಸುವುದು ಸರಿಯಲ್ಲ. ಸಮಸ್ಯೆಗಳಿದ್ದರೆ ಸಭೆ ನಡೆಸಿ ಅಧಿಕಾರಿಗಳ ಮೂಲಕ ಬಗೆಹರಿಸಬೇಕು. ಏಕಾಏಕಿ ಪ್ರತಿಭಟಿಸಿದರೆ ಮಾರಕಟ್ಟೆಗೆ ಕೆಟ್ಟ ಹೆಸರು ಬಂದರೆ ಕೊಳ್ಳುವವರು ಬಾರದಿದ್ದರೆ ನಮ್ಮ ಸ್ಥಿತಿ ಏನೆಂದು ಪ್ರಶ್ನಿಸಿ, ನಾವು ಅಧಿಕಾರಿಗಳ ಪರವಾಗಿ ಅಲ್ಲ, ನ್ಯಾಯಯುತವಾಗಿ ಮಾರುಕಟ್ಟೆ ನಡೆಯುತ್ತಿದೆ. ಸಹಜವಾಗಿ ನಡೆಯಲು ಬಿಡಿ ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಹುಬ್ಬಳ್ಳಿ ವಿದ್ಯಾರ್ಥಿನಿ ಕೊಲೆ ಆಕಸ್ಮಿಕ; ಹುಡುಗಿ, ಆರೋಪಿ ಪರಸ್ಪರ ಪ್ರೀತಿಸುತ್ತಿದ್ದರು

ಗೃಹ ಸಚಿವ ಪರಮೇಶ್ವರ



ತುಮಕೂರು: ಹುಬ್ಬಳ್ಳಿಯ ಬಿವಿಬಿ ಕಾಲೇಜು ಕ್ಯಾಂಪಸ್‌ನಲ್ಲಿ ಕಾಂಗ್ರೆಸ್ ಕಾರ್ಪೊರೇಟರ್ ಪುತ್ರಿ ಕೊಲೆ ಪ್ರಕರಣ ಲವ್ ಜಿಹಾದ್ ಅಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಶುಕ್ರವಾರ ಹೇಳಿದ್ದಾರೆ.

ನೇಹಾ ಮತ್ತು ಆರೋಪಿ ಫಯಾಜ್ ಪರಸ್ಪರ ಪ್ರೀತಿಸುತ್ತಿದ್ದರು ಎಂದು ಹೇಳಿದ್ದಾರೆ. ನಂತರ, ನೇಹಾ ಅವನಿಂದ ದೂರವಾಗಲು ಪ್ರಯತ್ನಿಸಿದಳು ಮತ್ತು ಅವನ ಮದುವೆಯ ಪ್ರಸ್ತಾಪವನ್ನು ತಿರಸ್ಕರಿಸಿದ್ದಳು. ಇದರಿಂದ ಕೋಪಗೊಂಡ ಆರೋಪಿ ನೇಹಾಳನ್ನು ಹತ್ಯೆ ಮಾಡಿದ್ದಾನೆ ಎಂದು ಗೃಹ ಸಚಿವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಇದರಲ್ಲಿ ಯಾವುದೇ ರಾಜಕೀಯ ವಿಲ್ಲ. ಘಟನೆಯ ಸಮಯದಲ್ಲಿ ನೇಹಾ ಅವರ ತಾಯಿ ಕೂಡ ಸ್ಥಳದಲ್ಲಿದ್ದರು ಮತ್ತು ಅವರ ಮೇಲೂ ಹಲ್ಲೆ ನಡೆಸಲಾಗಿದೆ. ಆದರೆ ಅವರನ್ನು ರಕ್ಷಿಸಲಾಯಿತು ಎಂದಿದ್ದಾರೆ.

ಇದು ಲವ್ ಜಿಹಾದ್ ಪ್ರಕರಣ ಎಂದು ಸಾಬೀತುಪಡಿಸಲು ಯಾವುದೇ ಪುರಾವೆಗಳು ಲಭ್ಯವಿಲ್ಲ ಎಂದು ಗೃಹ ಸಚಿವರು ಸ್ಪಷ್ಟಪಡಿಸಿದ್ದಾರೆ.

> ಸಿಎಂ ಸಿದ್ದರಾಮಯ್ಯ ನಮ್ಮ ಕುಟುಂಬಕ್ಕೆ ಕಳಂಕ ತರುವ ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿಗಳೇ ನಮ್ಮ ಮರ್ಯಾದೆ ತೆಗಿಬೇಡಿ. ಬಂಧಿತ ಆರೋಪಿ ಫಯಾಜ್ ಕೊಂಡಿಕೊಪ್ಪ ಸೇರಿ ನಾಲ್ವರು ಪ್ರಕರಣದಲ್ಲಿ ಭಾಗಿಯಾಗಿದ್ದು, ಅವರನ್ನು ಬಂಧಿಸಬೇಕು.
> ನಿಮ್ಮ ಮೇಲೆ ರಾಜ್ಯದ ಜನತೆಗೆ ಅಪಾರ ಗೌರವವಿದ್ದು, ಅದಕ್ಕಾಗಿ ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ. ಈಗಾಗಲೇ ಒಬ್ಬನನ್ನು ಅರೆಸ್ಟ್ ಮಾಡಿದ್ದೀರಿ. ಈ ಕೊಲೆಯ ಹಿಂದೆ ಇನ್ನೂ ನಾಲ್ಕು ಜನರಿದ್ದು, ಅವರನ್ನು ಬಂಧಿಸುವ ಕೆಲಸ ಆಗಬೇಕು. ಬಂಧಿತನಾಗಿರುವ ಯುವಕನನ್ನು ಎನ್‌ಕೌಂಟರ್ ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರೇ ನಿಮ್ಮನ್ನು ಯಾರೋ ದಾರಿ ತಪ್ಪಿಸುತ್ತಿದ್ದಾರೆ. ನಾನು ಕಾಂಗ್ರೆಸ್ ಕಾರ್ಪೊರೇಟರ್. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನನ್ನ ಕುಟುಂಬದ ಬಗ್ಗೆ ನೀವೇ ಹೀಗೆ ಮಾತನಾಡಿದ್ರೆ ಹೇಗೆ? ನಾವು ಕಣ್ಣೀರು ಹಾಕುತ್ತಿದ್ದೇವೆ. ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ನನ್ನ ಕುಟುಂಬದ ಮರ್ಯಾದೆ ತೆಗಿಬೇಡಿ.
> – ನಿರಂಜನ್, ಕಾಂಗ್ರೆಸ್ ಕಾರ್ಪೊರೇಟರ್ (ನೇಹಾ ತಂದೆ)

> ನನ್ನ ಮಗನಿಗೆ ಅತ್ಯಂತ ಕಠಿಣ ಶಿಕ್ಷೆಯಾಗಲಿ, ಮುಂದೆ ಇಂಥ ಕ್ರೂರ ಕೆಲಸಕ್ಕೆ ಯಾರೂ ಕೈ ಹಾಕಬಾರದು ಅಂಥ ಶಿಕ್ಷೆ ನನ್ನ ಮಗನಿಗೆ ಆಗಲಿ. ಅವನಿಗೆ ಕಾನೂನು ಯಾವ ಶಿಕ್ಷೆ ಕೊಟ್ಟರೂ ಅದನ್ನು ನಾನು ಸ್ವಾಗತಿಸುತ್ತೇನೆ. ಅವಳು ನನ್ನ ಮಗಳಿದ್ದ ಹಾಗೆ. ಅವರ ಮಗಳಿಗೆ ಆದ ಕೃತ್ಯ ನಮ್ಮ ಮಗಳ ಮೇಲೆಯೂ ಆಗಬಹುದು. ಪ್ರತಿಭಟನೆ ಮಾಡುವವರಿಗೆ ದೊಡ್ಡ ಸಲಾಂ. ಅವರಿಬ್ಬರ ನಡುವೆ ಅಫೇರ್ ಇತ್ತು. ಈ ಪ್ರೀತಿಗೆ ಲವ್ ಜಿಹಾದ್ ಬಣ್ಣ ಕಟ್ಟಿ ನಿನ್ನ ಟಾರ್ಗೆಟ್ ಮಾಡ್ತಾರೆ ಎಂದು ನನ್ನ ಮಗನಿಗೆ ಹೇಳಿದ್ದೆ.
> – ಬಾಬಾ ಸಾಹೇಬ್ ಸುಬಾನಿ, ಆರೋಪಿ ಫಯಾಜ್ ತಂದೆ

> ವೈಯಕ್ತಿಕ ಕಾರಣಕ್ಕೆ ನೇಹಾ ಕೊಲೆಯಾಗಿದ್ದು, ಆರೋಪಿಗಳ ವಿರುದ್ಧ ಕಠಿಣ ಕ್ರಮಕ್ಕೆ ಸೂಚಿಸಲಾಗಿದೆ. ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಬಹಳ ಚೆನ್ನಾಗಿದೆ. ಯಾವುದೇ ಕೊಲೆ ವೈಯಕ್ತಿಕ ಕಾರಣಕ್ಕೆ ಆಗಿರುತ್ತದೆ. ಕಾನೂನು ಸುವ್ಯವಸ್ಥೆ ಕಾಪಾಡುವುದು ಸರ್ಕಾರ ಕೆಲಸ. ಸರ್ಕಾರದ ಕಾನೂನು ಸುವ್ಯವಸ್ಥೆ ಕಾಪಾಡುತ್ತದೆ
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾಳೆ ಪುರಂದರದಾಸ, ತ್ಯಾಗರಾಜರ ಆರಾಧನೆ




ಮೈಸೂರು, ಏ.19–ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ ವತಿಯಿಂದ ಆಯೋಜಿಸಿರುವ 108ನೇ ವಾರ್ಷಿಕ ಪಾರಂಪರಿಕ ರಾಮ ನವಮಿ ಸಂಗೀತೋತ್ಸದಲ್ಲಿ ಏ.21ರಂದು ಬೆಳಗ್ಗೆ 10 ಗಂಟೆಗೆ ಶ್ರೀಪುರಂದರ ದಾಸರು, ಶ್ರೀ ತ್ಯಾಗರಾಜಸ್ವಾಮಿ ಆರಾಧನೆ ಏರ್ಪಡಿಸಲಾಗಿದೆ.

ಆರಾಧನಾ ಕಾರ್ಯಕ್ರಮದಲ್ಲಿ ವಿದುಷಿ ಎಂ.ಆರ್.ಸುಧಾ ಕರ್ನಾಟಕ ಶಾಸ್ತ್ರೀಯ ಗಾಯನ ಪ್ರಸ್ತುತ ಪಡಿಸಲಿದ್ದಾರೆ. ಅವರಿಗೆ ವಿದುಷಿ ಚಾರುಲತಾ ರಾಮನುಜಮ್ ಪಿಟೀಲು, ಅರ್ಜುನ್ ಗಣೇಶ್ ಮೃದಂಗ ಮತ್ತು ಶರತ್ ಕೌಶಿಕ್ ಘಟಂನಲ್ಲಿ ಸಹಕಾರ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಅಪಘಾತದ ಸೋಗಿನಲ್ಲಿ ಹಿರಿಯ ನಾಗರಿಕರ ಸುಲಿಗೆ

ವಯೋವೃದ್ಧರೇ ಟಾರ್ಗೆಟ್, ಸಿಸಿ ಕ್ಯಾಮರಾ ಅಳವಡಿಕೆ, ಪೆಟ್ರೋಲಿಂಗ್ ತೀವ್ರಗೊಳಿಸುವಂತೆ ಹಿರಿಯ ನಾಗರಿಕರ ಸಲಹೆ



ಮೈಸೂರು, ಏ. 19(ಆರ್‌ಕೆ)– ಹಾಡ ಹಗಲೇ ಹಿರಿಯ ನಾಗರಿಕರ ಕಾರು ಅಡ್ಡಗಟ್ಟಿ, ಅಪಘಾತ ಮಾಡಿ ಬೈಕ್ ಸವಾರ ಗಾಯಗೊಂಡರೂ ನಿಲ್ಲಿಸದೇ ಬಂದಿದ್ದೀರೆಂದು ಬೆದರಿಸಿ ಹಣ ಸುಲಿಗೆ ಮಾಡುವ ಯುವಕರ ತಂಡಗಳು ಮೈಸೂರಿನಲ್ಲಿ ಮತ್ತೆ ಸಕ್ರಿಯವಾಗಿವೆ.

ಕಳೆದ 15 ದಿನಗಳಿಂದೀಚೆಗೆ ಮೈಸೂರಿನ ವಿವಿ ಮೊಹಲ್ಲಾ ನಿವಾಸಿ 79 ವರ್ಷದ ಆರ್ಕಿಟೆಕ್ಟ್ ಒಬ್ಬರನ್ನು ಎರಡು ಬಾರಿ ಬೆದರಿಸಿ ಹಣ ಸುಲಿಗೆ ಮಾಡಲಾಗಿದೆ. ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆ, ರಾಮಕೃಷ್ಣನಗರ, ಕುಕ್ಕರಹಳ್ಳಿ ಕೆರೆ ರಸ್ತೆ, ಬೋಗಾದಿ ರಸ್ತೆಗಳಲ್ಲಿ ಇಂತಹ ಸುಲಿಗೆ ಪ್ರಕರಣಗಳು ವರದಿಯಾಗಿವೆ.

15 ದಿನಗಳ ಹಿಂದೆ ಬೆಳಗ್ಗೆ 10.30 ಗಂಟೆ ವೇಳೆಯಲ್ಲಿ ತಮ್ಮ ಕಾರಿನಲ್ಲಿ ವಿವಿ ಮೊಹಲ್ಲಾದಿಂದ ಕುವೆಂಪುನಗರದ ತಮ್ಮ ಕಚೇರಿಗೆ ಹಿರಿಯ ನಾಗರಿಕರು, ಹೋಗುತ್ತಿದ್ದಾಗ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಬೈಕ್‌ನಲ್ಲಿ ಹಿಂದಿನಿಂದ ಬಂದ ಯುವಕನೋರ್ವ ಕಾರನ್ನು ಕೈಯಿಂದ ಬಡಿದು ನಿಲ್ಲಿಸುವಂತೆ ಸನ್ನೆ ಮಾಡಿದ.

ತಕ್ಷಣ ಎಡಬದಿ ಕಾರು ನಿಲ್ಲಿಸುತ್ತಿದ್ದಂತೆಯೇ ಆ ಯುವಕ 'ನೀವು ಬೈಕ್‌ಗೆ ಡಿಕ್ಕಿ ಹೊಡೆದು ಬಂದಿದ್ದೀರಿ ನನ್ನ ಸ್ನೇಹಿತ ಗಾಯಗೊಂಡಿದ್ದಾನೆ ಎಂದು ಹೇಳಿ ಕಾರು ಏರಿ ಕುಳಿತು ಗಾಯಗೊಂಡವನನ್ನು ಆಸ್ಪತ್ರೆಗೆ ಕರೆದೊಯ್ಯಬೇಕು 50,000 ಖರ್ಚಾಗುತ್ತದೆ ಕೊಡಿ' ಎಂದು ಬೇಡಿಕೆ ಇಟ್ಟಿದ್ದಾನೆ.

ಇದರಿಂದ ಹಿರಿಯ ನಾಗರಿಕರು, ತಬ್ಬಿಬ್ಬಾಗಿದ್ದಾರೆ. ಪುನಃ ತಕ್ಷಣ ಆಸ್ಪತ್ರೆಗೆ ಕರೆದೊಯ್ಯಬೇಕು ಹಣ ಕೊಡಿ, ಇಲ್ಲದಿದ್ದರೆ ಸತ್ತೋಗುತ್ತಾನೆ ನೀವು ತುಂಬಾ ತೊಂದರೆಗೆ ಸಿಲುಕುತ್ತೀರಿ ಎಂದು ಯುವಕ ಪರೋಕ್ಷವಾಗಿ ಬೆದರಿಕೆ ಹಾಕಿದ್ದಾನೆ.

ಆತನ ಮಾತಿನಿಂದ ಮತ್ತಷ್ಟು ಗಾಬರಿಗೊಂಡ ಕಾರು ಚಾಲಕ, ನನ್ನ ಬಳಿ ಅಷ್ಟು ಹಣ ಇಲ್ಲ ಎಂದು ಜೇಬಿನಿಂದ 4,500 ರೂ. ತೆಗೆದು ಇಷ್ಟೇ ಇರುವುದು ಎಂದಾಗ ಅದನ್ನೇ ತೆಗೆದುಕೊಂಡು ಆತ ಬೈಕ್‌ನಲ್ಲಿ ಪರಾರಿಯಾಗಿದ್ದ.

ಒಂದು ವಾರದ ನಂತರ ಅದೇ ರಸ್ತೆಯಲ್ಲಿ ಸ್ವಲ್ಪ ಮುಂದೆ ಆರ್ಕಿಟೆಕ್ಟ್ ಅವರ ಕಾರನ್ನು ತಡೆದ ಓರ್ವ, ವಾರದ ಹಿಂದೆ ಹೇಳಿದಂತೆಯೇ ವರ್ತಿಸಿ ಹಣಕ್ಕೆ ಒತ್ತಾಯಿಸಿದ. ಆದರೆ, ಈ ಬಾರಿ ಎಚ್ಚೆತ್ತ ಹಿರಿಯ ನಾಗರಿಕರು, ನಡೀ ನಾನೂ ಆಸ್ಪತ್ರೆಗೆ ಬರುತ್ತೇನೆ. ಹಾಗೆಯೇ ಸರಸ್ವತಿಪುರಂ ಪೊಲೀಸ್ ಸ್ಟೇಷನ್‌ಗೂ ಹೋಗೋಣ ಬಾ ಎಂದು ಧೈರ್ಯವಾಗಿ ಹೇಳಿದ್ದಾರೆ.

ಈ ವೇಳೆ ಪರಸ್ಪರ ವಾದ–ಪ್ರತಿವಾದ ನಡೆದಿದೆ. ಜನರು ಸೇರುತ್ತಿದ್ದಂತೆ ಬೈಕ್ ಸವಾರ ಪರಿಸ್ಥಿತಿ ಬಿಗಡಾಯಿಸುತ್ತದೆ ಎಂದು ತಿಳಿದು ಅಲ್ಲಿಂದ ಬರಿಗೈಲಿ ಕಾಲ್ಕಿತ್ತಿದ್ದಾನೆ. ಈ ಎರಡೂ ಪ್ರಕರಣಗಳ ಬಗ್ಗೆ ಅವರು ಪೊಲೀಸ್ ಠಾಣೆಗೆ ಮಾಹಿತಿ ನೀಡಲಿಲ್ಲ. ಸ್ವಲ್ಪ ದಿನಗಳ ನಂತರ ತಮ್ಮ ಸ್ನೇಹಿತರೊಬ್ಬರಲ್ಲಿ ನಡೆದ ಘಟನೆಯನ್ನು ಹೇಳಿಕೊಂಡಿದ್ದಾರೆ.

ಅವರ ಸ್ನೇಹಿತರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದು, ತಮ್ಮ ಸ್ನೇಹಿತರು ತಮಗಾದ ಅನುಭವವನ್ನು ಯಾರಿಗೂ ಹೇಳಿಲ್ಲ. ಆದರೆ, ಈ ರೀತಿ ಹಿರಿಯರನ್ನೇ ಟಾರ್ಗೆಟ್ ಮಾಡಿ ಯುವಕರ ತಂಡ ಅಪಘಾತದ ನೆಪದಲ್ಲಿ ಹಣ ಸುಲಿಗೆ ಮಾಡುತ್ತಿದೆ. ಮೈಸೂರಲ್ಲಿ ಎಲ್ಲೆಡೆ ರಸ್ತೆಗಳಿಗೆ ಹೆಚ್ಚು ಸಿಸಿ ಕ್ಯಾಮರಾಗಳನ್ನು ಅಳವಡಿಸಿ ನಿರಂತರವಾಗಿ ಪೊಲೀಸ್ ಪೆಟ್ರೋಲಿಂಗ್ ತೀವ್ರಗೊಳಿಸಿದರೆ ಇಂತಹ ದುಷ್ಕೃತ್ಯಗಳನ್ನು ತಡೆಯಬಹುದು ಎಂದು ಸಲಹೆ ನೀಡಿದ್ದಾರೆ.

ತಮ್ಮ ಸ್ನೇಹಿತರಿಗಾದ ಈ ತೊಂದರೆ ಬಗ್ಗೆ ಡಿಸಿಪಿಯವರಿಗೆ ತಿಳಿಸಿದ್ದೇನೆ, ಈ ಮೂಲಕ ಸಾರ್ವಜನಿಕರಿಗೂ ಜಾಗೃತಿ ಮೂಡಿಸಬೇಕೆಂದು ಅವರು ತಿಳಿಸಿದರು. 2023ರ ಜೂನ್‌ನಲ್ಲಿ ಬೈಕ್ ಸವಾರರಿಬ್ಬರು ಇದೇ ಮಾದರಿಯ ಕೃತ್ಯವೆಸಗಿ ಹಿರಿಯ ನಾಗರಿಕರಿಂದ ಹಣ ಸುಲಿಗೆ ಮಾಡಿದ್ದರು. ಈ ಕುರಿತು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಸ್ಟಾರ್ ಚಂದ್ರು ಪರ ನಟ ದರ್ಶನ್ ರೋಡ್ ಶೋ

ಕೆ.ಆರ್.ನಗರ, ಏ.19– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ನಟ ದರ್ಶನ್ ಶುಕ್ರವಾರ ಪಟ್ಟಣದಲ್ಲಿ ಭರ್ಜರಿ ರೋಡ್ ಶೋ ನಡೆಸಿ ಮತಯಾಚಿಸಿದರು.

ಪಟ್ಟಣದ ಹಾಸನ–ಮೈಸೂರು ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯಿಂದ ಶಾಸಕ ಡಿ.ರವಿಶಂಕರ್ ಮತ್ತು ಕಾಂಗ್ರೆಸ್ ಮುಖಂಡರೊಂದಿಗೆ ಮೆರವಣಿಗೆಯಲ್ಲಿ ತೆರಳಿದ ದರ್ಶನ್, ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸುವಂತೆ ಮನವಿ ಮಾಡಿದರಲ್ಲದೇ, ಆ ಮೂಲಕ ಶಾಸಕ ಡಿ.ರವಿಶಂಕರ್ ಕೈ ಬಲಪಡಿಸುವಂತೆ ಮನವಿ ಮಾಡಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ನಾವು ಬಂದು ಪ್ರಚಾರ ಮಾಡಿದಾಗ ಕ್ಷೇತ್ರದ ಜನತೆ ಸುಮಲತಾ ಅವರಿಗೆ ಬೆಂಬಲ ನೀಡಿದಂತೆ ಈ ಬಾರಿಯೂ ವೆಂಕಟರಮಣೇಗೌಡರಿಗೆ ಮತ ನೀಡಬೇಕೆಂದರು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯಂತೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಬಡವರು, ಮಹಿಳೆಯರು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಆದ್ದರಿಂದ ನಮ್ಮ ಪಕ್ಷದ ಮೇಲೆ ನಂಬಿಕೆ ಇಟ್ಟು ರಾಜ್ಯ ಮತ್ತು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಅಭ್ಯರ್ಥಿ ಸ್ಟಾರ್ ಚಂದ್ರು ಅವರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯಿಂದ ಹೊರಟ ಮೆರವಣಿಗೆ ಮೈಸೂರು ರಸ್ತೆ, ಬಜಾರ್ ರಸ್ತೆ, ಆಂಜನೇಯ ಬ್ಲಾಕ್, ವಾಣಿ ವಿಲಾಸ ರಸ್ತೆ, ಪುರಸಭೆ ವೃತ್ತದ ಮೂಲಕ ಹಾದು ಚೀರ್ನಹಳ್ಳಿ, ಹೆಬ್ಬಾಳು, ಶ್ರೀರಾಮಪುರ, ಚುಂಚನಕಟ್ಟೆ, ಹೊಸೂರು, ಹಾಡ್ಯ, ಸಾಲಿಗ್ರಾಮ, ಭೇರ್ಯದಲ್ಲಿ ಬಿರುಸಿನ ಮತಯಾಚನೆ ಮಾಡಲಾಯಿತು.

ಪ್ರಚಾರಕ್ಕೆ ಆಗಮಿಸಿದ ನಟ ದರ್ಶನ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಅದ್ಧೂರಿಯಾಗಿ ಸ್ವಾಗತಿಸಿದರು. ಈ ವೇಳೆ ಶಾಲಾ ಕಾಲೇಜು ವಿದ್ಯಾರ್ಥಿಗಳು, ಯುವಕರು, ಯುವತಿಯರು ಹಾಗೂ ಡಿ ಬಾಸ್ ಅಭಿಮಾನಿಗಳು ಸ್ಥಳದಲ್ಲಿ ಜಮಾಯಿಸಿ ತಮ್ಮ ನೆಚ್ಚಿನ



ಮಂಡ್ಯ ಲೋಕಸಭಾ ಕೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಪರ ನಟ ದರ್ಶನ್ ರೋಡ್ ಶೋ ನಡೆಸಿದರು.

ನಟನಿಗೆ ಜೈಕಾರ ಕೂಗಿ ಖುಷಿಪಟ್ಟರು.

ಈ ವೇಳೆ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಮಾಜಿ ಸದಸ್ಯ ಎಸ್.ಪಿ.ತಮ್ಮಯ್ಯ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಎಸ್.ಸಂದೇಶ್, ಪುರಸಭೆ ಸದಸ್ಯರಾದ ಪ್ರಕಾಶ್, ಕೆ.ಜಿ.ಸುಬ್ರಹ್ಮಣ್ಯ, ಜಾವೀದ್ ಪಾಷಾ, ಶಂಕರ್, ಶಿವುನಾಯಕ್, ನಟರಾಜು, ಶಂಕರ್ ಸ್ವಾಮಿ, ಜಿಪಂ ಮಾಜಿ ಸದಸ್ಯ ಸಿದ್ದಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಮೇಶ್, ಮಾಜಿ ಉಪಾಧ್ಯಕ್ಷ ಹೆಚ್.ಹೆಚ್.ನಾಗೇಂದ್ರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯಶಂಕರ್, ಎಂ.ಜೆ.ರಮೇಶ್, ವಕ್ತಾರ ಸೈಯದ್ ಜಾಬೀರ್ ಮತ್ತಿತರರಿದ್ದರು.

ಗ್ಯಾರಂಟಿಗಾಗಿ ಎಸ್‌ಸಿ, ಎಸ್‌ಟಿ ಹಣ ಬಳಕೆ

ಕಾರ್ಯಕರ್ತರ ಸಭೆಯಲ್ಲಿ ಮಾಜಿ ಶಾಸಕ ಹರ್ಷವರ್ಧನ್ ಆರೋಪ



ನಂಜನಗೂಡು, ಏ.19– ರಾಜ್ಯ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ, ಪಂಗಡಗಳ ವಿಶೇಷ ಘಟಕ ಯೋಜನೆಯ 11 ಸಾವಿರ ಕೋಟಿ ರೂ.ಅನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಆರೋಪಿಸಿದರು.

ತಾಲೂಕಿನ ದೇಬೂರು ಗ್ರಾಮದಲ್ಲಿ ಶುಕ್ರವಾರ ಹುಲ್ಲಹಳ್ಳಿ ಶಕ್ತಿಕೇಂದ್ರ ವ್ಯಾಪ್ತಿಯ ಬಿಜೆಪಿ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕ್ಷೇತ್ರದಲ್ಲಿ ನಯಾಪೈಸೆ ಅಭಿವೃದ್ಧಿ ಕಾರ್ಯ ನಡೆದಿಲ್ಲ. ನನ್ನ ಅವಧಿಯಲ್ಲಿ 80 ಕೋಟಿ ಅನುದಾನದಿಂದ ಆರಂಭಗೊಂಡ ನುಗು ಏತ ನೀರಾವರಿ ಯೋಜನೆ ನನೆಗುದಿಗೆ ಬಿದ್ದಿದೆ. ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಭಕ್ತರ ಅನುಕೂಲಕ್ಕಾಗಿ ಶಂಕುಸ್ಥಾಪನೆ ನೆರವೇರಿಸಿದ 75 ಅತಿಥಿಗೃಹ ಕೊಠಡಿ ನಿರ್ಮಾಣ ಕಾಮಗಾರಿ, ದೇವಾಲಯದ ಬೆಳ್ಳಿರಥ ನಿರ್ಮಾಣ ಕಾಮಗಾರಿ ನನೆಗುದಿಗೆ ಬಿದ್ದಿವೆ. ಶ್ರೀಕಂಠೇಶ್ವರಸ್ವಾಮಿ ಉತ್ಸವ ಮೂರ್ತಿಗೆ ಎಂಜಲು ನೀರು ಎರಚಿದವರ ಮೇಲೆ ಕ್ರಮ ಕೈಗೊಳ್ಳದೆ ರಕ್ಷಿಸಿದ ಶಾಸಕರಿಂದ ದೇವಾಲಯದ ಅಭಿವೃದ್ಧಿ ನಿರೀಕ್ಷಿಸುವುದು ಸಾಧ್ಯವೆ? ಚುನಾವಣೆ ಮುಗಿದ ಮೇಲೆ ತಾಲೂಕಿನ ರೈತರ ಪರವಾಗಿ ನುಗು ಏತ ನೀರಾವರಿ ಯೋಜನೆ ಯನ್ನು ಕಾರ್ಯ ರೂಪಕ್ಕೆ ತರುವಂತೆ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಬಳಿ ತೆರಳಿ ಮನವಿ ಮಾಡಲಿದ್ದೇನೆ ಎಂದರು.

ಕೊಳ್ಳೇಗಾಲದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು, ಸರಳ ಸಜ್ಜನ ರಾಜಕಾರಣಿ ಎಂದೇ ಹೆಸರು ಮಾಡಿರುವ ಬಾಲರಾಜ್ ಅವರನ್ನು ನಮ್ಮ ಪಕ್ಷ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಿಲ್ಲಿಸಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಬಾಲರಾಜ್ ಪ್ರಧಾನಿ ಮೋದಿಯವರಂತೆ ಜನ ಸೇವಕರಾಗಿ ಕೆಲಸ ಮಾಡುತ್ತಾರೆ. ಬಾಲರಾಜ್ ಅವರಿಗೆ ಹೆಚ್ಚಿನ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ಚುನಾವಣಾ ಉಸ್ತುವಾರಿಗಳಾದ ಎಚ್.ಸಿ.ಅಶೋಕ್, ಸಿ.ಚಿಕ್ಕರಂಗನಾಯಕ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪರಶಿವಮೂರ್ತಿ, ಯುವ ಮೋರ್ಚಾ ಅಧ್ಯಕ್ಷ ಗೋವರ್ಧನ್, ಮುಖಂಡರಾದ ಮಹೇಶ್, ಶ್ಯಾಮ್ ಪಟೇಲ್, ರಾಜು, ಸೋಮಣ್ಣ, ಹೆಮ್ಮರಗಾಲ ಶಿವಣ್ಣ, ರಾಜಣ್ಣ, ಶಿವಣ್ಣ, ಮಹದೇವಸ್ವಾಮಿ, ಬಸಪ್ಪ, ಗೋವಿಂದರಾಜು, ಪುಟ್ಟಸ್ವಾಮಿ, ಸಿದ್ದರಾಜು, ವಿಷ್ಣುವರ್ಧನ್, ಧನರಾಜ್ ಬೂಲಾ, ಗುರುಸ್ವಾಮಿ, ಅಬ್ದುಲ್ ರಜಾಕ್ ಉಪಸ್ಥಿತರಿದ್ದರು.

ಉಪಮುಖ್ಯಮಂತ್ರಿ ಡಿಕೆಶಿ ಒಕ್ಕಲಿಗ ನಾಯಕರಲ್ಲ

ಕುಮಾರಸ್ವಾಮಿ ಪರ ಮಾಜಿ ಸಚಿವ ಸಾ.ರಾ.ಮಹೇಶ್ ಮತಯಾಚನೆ



ಮಾಜಿ ಸಚಿವ ಸಾ.ರಾ.ಮಹೇಶ್ ಅವರನ್ನು ಒಕ್ಕಲಿಗ ಮುಖಂಡರು ಸನ್ಮಾನಿಸಿದರು.

ಭೇರ್ಯ, ಏ.19– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಕ್ಕಲಿಗ ನಾಯಕರೇ ಅಲ್ಲ. ಅವರು ಯಾವಾಗ ಒಕ್ಕಲಿಗ ನಾಯಕರಾಗಿದ್ದರು. ಒಕ್ಕಲಿಗ ಸಮುದಾಯಕ್ಕೆ ಅವರ ಕೊಡುಗೆ ಏನು ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಪ್ರಶ್ನಿಸಿದರು.

ಸಾಲಿಗ್ರಾಮ ತಾಲೂಕಿನ ಭೇರ್ಯ ಸಮೀಪದ ಗಡಿಗ್ರಾಮ ಗುಳುವಿನ ಅತ್ತಿಗುಪ್ಪೆ ಗ್ರಾಮದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪರ ಪ್ರಚಾರ ನಡೆಸಿ ಒಕ್ಕಲಿಗ ಸಮುದಾಯದವರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕನಕಪುರ ಹೊರತುಪಡಿಸಿದರೆ ಬೇರೆಲ್ಲೂ ಅವರು ನಾಯಕರಲ್ಲ. ಕಾಂಗ್ರೆಸ್‌ನಲ್ಲಿ ಒಕ್ಕಲಿಗ ನಾಯಕರೇ ಇಲ್ಲ. ಜೆಡಿಎಸ್ ಮತ್ತು ಬಿಜೆಪಿಯಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ನಾಯಕರಿದ್ದಾರೆ ಎಂದರು.

ನಮ್ಮ ನಾಯಕರಾದ ಹೆಚ್.ಡಿ.ದೇವೇಗೌಡರು ಪ್ರಧಾನಿಗಳಾಗಿದ್ದರು. ಕುಮಾರಸ್ವಾಮಿ 2 ಬಾರಿ ಮುಖ್ಯಮಂತ್ರಿ ಆಗಿದ್ದರು. ನಾವು ಸೀನಿಯರ್ಸ್, ನೀವು ಜೂನಿಯರ್ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್‌ನವರು ಜಾತಿ ಗಣತಿ ನಡೆಸಲು ಅವಕಾಶ ನೀಡಿ, ಅದರಲ್ಲಿ ಒಕ್ಕಲಿಗ ಸಮುದಾಯದ ಜನಸಂಖ್ಯೆಯನ್ನು ಆರನೇ ಸ್ಥಾನಕ್ಕೆ ಇಳಿಸಲಾಗಿದೆ. ಆ ಮಾಹಿತಿ ಸೋರಿಕೆ ಮಾಡಿದ್ದು ಯಾರು ಎಂಬುದು ಗೊತ್ತಿದೆ. ಜಾತಿ ಗಣತಿ ವಿಚಾರದಲ್ಲಿ ಒಕ್ಕಲಿಗ ಸಮುದಾಯಕ್ಕೆ ಶಿವಕುಮಾರ್ ಏನು ಮಾಡಿದ್ದಾರೆ? ಸಚಿವ ಸಂಪುಟದಲ್ಲಿ ಪ್ರಸ್ತಾಪವಾದಾಗ ಒಕ್ಕಲಿಗ ಸಮುದಾಯದ ಬಗ್ಗೆ ಗೌರವ ಇದ್ದಿದ್ದರೆ ಶಿವಕುಮಾರ್ ರಾಜೀನಾಮೆ ನೀಡಬೇಕಿತ್ತು. ಸಂಪುಟದಲ್ಲಿ ಬಾಯಿ ಬಿಡದ ಇವರು ಒಕ್ಕಲಿಗ ನಾಯಕ ಹೇಗಾಗುತ್ತಾರೆ? ಎಂದು ಪ್ರಶ್ನೆ ಮಾಡಿದ ಸಾ.ರಾ.ಮಹೇಶ್ ಅವರು, ರಾಜ್ಯದಲ್ಲಿ ಅಂದಿನಿಂದ ಇಂದಿನವರೆಗೂ ದೇವೇಗೌಡರು ಹಾಗೂ ಕುಮಾರಣ್ಣ ಅವರೇ ಒಕ್ಕಲಿಗ ನಾಯಕರು ಎಂದರು.

ಇದೇ ವೇಳೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ತಮ್ಮ ಅಚ್ಚುಮೆಚ್ಚಿನ ನಾಯಕ ಕುಮಾರಣ್ಣ ಅವರನ್ನು ಶತಾಯಗತಾಯ ಗೆಲ್ಲಿಸಿಕೊಳ್ಳಲು ಸಾ.ರಾ.ಮಹೇಶ್ ಅವರು ಬಟಿಗನಹಳ್ಳಿ, ಭೇರ್ಯ, ಸಂಬ್ರವಳ್ಳಿ, ಅರಕೆರೆ, ಗುಳುವಿನ ಅತ್ತಿಗುಪ್ಪೆ, ಮುಂಜನಹಳ್ಳಿ, ಚಿಕ್ಕಭೇರ್ಯ, ಕಾ.ಹೊಸೂರು, ಮುದುಗುಪ್ಪೆ, ಕುಪ್ಪಳ್ಳಿ, ತಂದ್ರೆ, ತಂದ್ರೆ ಅಂಕನಹಳ್ಳಿ ಗ್ರಾಮದಲ್ಲಿ ಬಿರುಸಿನ ಪ್ರಚಾರ ಕೈಗೊಂಡರು. ಇವರಿಗೆ ಜಿಲ್ಲಾ ಬಿಜೆಪಿ ಮಾಜಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್ ಮತ್ತು ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್ ಸಾಥ್ ನೀಡಿದರು.

ನಿಲಸೋಗೆಯಲ್ಲಿ ಗುರುಮಲ್ಲೇಶ್ವರ ಜಯಂತ್ಯುತ್ಸವ, ಪುತ್ಥಳಿ ಅನಾವರಣ

ತಿ.ನರಸೀಪುರ, ಏ.19– ಶರಣ ಪರಂಪರೆಯಲ್ಲಿ ಬಸವಾದಿ ಶರಣರು ಸದಾ ಜಾಗೃತರಾಗಿರಲಿ. ಅವರು ಬೋಧಿಸಿದ ತತ್ವಗಳು ಸದಾ ಜನರಿಗೆ ಮಾರ್ಗದರ್ಶನ ನೀಡಲಿ ಎಂಬ ಉದ್ದೇಶದಿಂದ ಗುರು ಮಲ್ಲೇಶ್ವರರು ಹೋದಲ್ಲೆಲ್ಲಾ ದಾಸೋಹ ಮಠಗಳನ್ನು ನಿರ್ಮಿಸಿದರು ಎಂದು ಕನಕಪುರ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿ ತಿಳಿಸಿದರು.

ತಾಲೂಕಿನ ನಿಲಸೋಗೆ ಗ್ರಾಮದಲ್ಲಿ ಗುರುಮಲ್ಲೇಶ್ವರ ವೀರಶೈವ ಬಳಗದ ಆಶ್ರಯದಲ್ಲಿ ನಡೆದ ಗುರುಮಲ್ಲೇಶ್ವರ ಜಯಂತ್ಯುತ್ಸವ ಹಾಗೂ ಪುತ್ಥಳಿ ಅನಾವರಣ ಕಾರ್ಯಕ್ರಮದ ಸಾನಿಧ್ಯ ವಹಿಸಿ ಭಕ್ತರಿಗೆ ಆಶೀರ್ವಚನ ನೀಡಿ ಮಾತನಾಡಿದ ಅವರು, ಗುರು ಮಲ್ಲೇಶ್ವರರು ಆಡಂಬರ, ವಿಜೃಂಭಣೆ, ವೈಭವ ಅಪೇಕ್ಷೆಪಟ್ಟವರಲ್ಲ. ಬಸವಾದಿ ಶಿವ ಶರಣರು ಬೋಧಿಸಿದ ಪ್ರತಿಯೊಂದು ತತ್ವಗಳನ್ನು ಜನಮಾನಸದಲ್ಲಿ ಬಿತ್ತುವ ಕೆಲಸ ಮಾಡಿದ್ದರು. ಯಾವುದು ನನ್ನದಲ್ಲ ಎಂಬ ಭಾವನೆಯೊಂದಿಗೆ ಅವರು ಜಾಗೃತಿ ಮೂಡಿಸುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದರು.



ನಿಲಸೋಗೆಯಲ್ಲಿ ಗುರುಮಲ್ಲೇಶ್ವರ ಶ್ರೀಗಳ ಪುತ್ಥಳಿಯನ್ನು ಅನಾವರಣಗೊಳಿಸಲಾಯಿತು.

ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುಗಳು ಭಗವಂತನ ಕೃಪಾಶೀರ್ವಾದದಿಂದ ದೊರಕಿದ್ದು, ಅದು ನನ್ನದು ಎಂದು ಹೇಳಿ ಹಂಬಲಿಸುವ ಮೂಲಕ ನಾವು ಈ ಜೀವನವನ್ನು ಹಾಳು ಮಾಡಿಕೊಳ್ಳಲು ಹೊರಟಿದ್ದೇವೆ. ಹಾಗಾಗಿ ಭಗವಂತ ಕೊಟ್ಟಿರುವ ವಸ್ತುಗಳನ್ನು ಮತ್ತೆ ಆತನಿಗೆ ಅರ್ಪಿಸುವ ಕೆಲಸವಾಗಬೇಕು ಎಂಬುದನ್ನು ದಾಸೋಹದ ಮೂಲಕ ಗುರುಮಲ್ಲೇಶ್ವರರು ತಿಳಿಸಿಕೊಟ್ಟಿದ್ದಾರೆ. ಈ ಕಾರಣಕ್ಕೆ ಬಸವಾದಿ ಶರಣರು ಬೋಧಿಸಿದ ತತ್ವಗಳು ಸದಾ ಜನರಿಗೆ ಮಾರ್ಗದರ್ಶನ ನೀಡಲಿ ಎಂಬ ಕಾರಣಕ್ಕೆ ದಾಸೋಹ ಮಠಗಳ ನಿರ್ಮಾಣವಾಗಿದ್ದು, ನಂತರದಲ್ಲಿ ಆ ಪರಂಪರೆಯಲ್ಲಿ ಬಂದ ಪ್ರತಿಯೊಬ್ಬ ಭಕ್ತರು ಗುರುಮಲ್ಲೇಶ್ವರರಲ್ಲಿ ಶ್ರದ್ಧೆ ಇಟ್ಟುಕೊಳ್ಳುವುದು ಮಾತ್ರವಲ್ಲ ಅವರು ಬೋಧಿಸಿದ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜೀವನ ಸಮೃದ್ಧಿಗೊಳಿಸಿಕೊಳ್ಳುವಂತೆ ತಿಳಿಸಿದರು.

ಇದೇ ವೇಳೆ ಶ್ರೀ ಗುರುಮಲ್ಲೇಶ್ವರ ಪುತ್ಥಳಿ ದಾನಿಗಳಾದ ಲೇ.ಪುಟ್ಟಪ್ಪ ಅವರ ಮಗ ಮಹೇಶ್ ಅವರನ್ನು ಶ್ರೀಗಳು ಸನ್ಮಾನಿಸಿದರು. ಕುದೇರು ಮಠದ ಗುರುಶಾಂತ ಸ್ವಾಮೀಜಿ, ಎಂ.ಎಲ್. ಹುಂಡಿ ಮಠದ ಗೌರಿಶಂಕರ ಸ್ವಾಮೀಜಿ, ಚಿದರವಳ್ಳಿ ಮಠದ ಮಲ್ಲಿಕಾರ್ಜುನಸ್ವಾಮೀಜಿ, ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಾಟಾಳು ಮಠದ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ಹಿರಿಯೂರು ಗ್ರಾಮದ ಮಠಾಧ್ಯಕ್ಷ ಮಹಾಂತಸ್ವಾಮೀಜಿಗೆ ಗುರುವಂದನೆ ಸಲ್ಲಿಸಲಾಯಿತು. ನಿಲಸೋಗೆ ದಾಸೋಹ ಮಠಾಧ್ಯಕ್ಷ ಮಲ್ಲಪ್ಪಸ್ವಾಮೀಜಿ, ಸೇತುವೆ ಮಠದ ಸಹಜಾನಂದಸ್ವಾಮೀಜಿ, ಡೈರಿ ಕಾರ್ಯದರ್ಶಿ ನಂಜುಂಡಸ್ವಾಮಿ, ಡೈರಿ ಮಾಜಿ ಅಧ್ಯಕ್ಷ ಬಸಪ್ಪ, ಭತ್ತದ ವ್ಯಾಪಾರಿ ಶೇಖರಪ್ಪ, ಸಿ.ಆರ್.ಸಿ.ಮಹದೇವಪ್ಪ, ಬಸವಣ್ಣ, ವಕೀಲ ಜ್ಞಾನೇಂದ್ರಮೂರ್ತಿ, ಮಹದೇವಪ್ರಸಾದ್, ಭೋಜಣ್ಣ, ಸುರೇಶ, ಮರಿಸ್ವಾಮಿ, ಶಂಕರ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೋಂಟೇಶ್, ಕುಮಾರಸ್ವಾಮಿ, ಕೆಇಬಿ ಸಿದ್ದಲಿಂಗಸ್ವಾಮಿ, ಪ್ರಸನ್ನ ಇನ್ನಿತರರಿದ್ದರು.

ಅಡಕೆ, ಬಾಳೆ, ತೆಂಗು ಬೆಳೆ ಭಸ್ಮ



ಹಂಪಾಪುರ, ಏ.19– ಕಿಡಿಗೇಡಿಗಳು ಜಮೀನಿಗೆ ಬೆಂಕಿ ಇಟ್ಟ ಪರಿಣಾಮ ಅಡಕೆ, ಬಾಳೆ, ತೆಂಗು ಸೇರಿದಂತೆ ಕೃಷಿ ಪರಿಕರಗಳು ಸುಟ್ಟು ಭಸ್ಮವಾಗಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಈರೇನಂದಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನಿಂಗರಾಜು ಅವರಿಗೆ ಸೇರಿದ ಫಸಲು ನಾಶವಾಗಿದೆ. ನಿಂಗರಾಜು ಅವರು ತಮ್ಮ ಎರಡೂವರೆ ಎಕರೆ ಜಮೀನಿನಲ್ಲಿ ಅಡಕೆ, ಬಾಳೆ, ತೆಂಗು ಬೆಳೆದಿದ್ದರು. ಇಂದು ಬೆಳಗ್ಗೆ ಕಿಡಿಗೇಡಿಗಳು ಬೆಂಕಿ ಹಾಕಿದ್ದು, ಫಸಲು ಸೇರಿದಂತೆ ಕೃಷಿ ಪರಿಕರಗಳು ನಾಶವಾಗಿವೆ. ಇದರಿಂದ ನಾಗರಾಜು ಅವರಿಗೆ 20 ಲಕ್ಷ ರೂ. ನಷ್ಟವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ರಾಜೇಶ್ ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯ ಬಳಿಕ ವಿಜಯೇಂದ್ರಗೆ ಮಾತ್ರ ಸಿಎಂ ಆಗುವ ಅರ್ಹತೆ

ಬಿಜೆಪಿ ಮುಖಂಡ ಗುರುಪಾದಸ್ವಾಮಿ ಅಭಿಮತ

ತಿ.ನರಸೀಪುರ, ಏ.19– ಸಿದ್ದರಾಮಯ್ಯ ಬಳಿಕ ಭವಿಷ್ಯದಲ್ಲಿ ಮುಖ್ಯಮಂತ್ರಿಯಾಗುವ ಅರ್ಹತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರರಿಗೆ ಮಾತ್ರ ಇದೆ ಎಂದು ಬಿಜೆಪಿ ಮುಖಂಡ ಗುರುಪಾದಸ್ವಾಮಿ ಭವಿಷ್ಯ ನುಡಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಕಾಂಗ್ರೆಸ್‌ನಲ್ಲಿದ್ದಾಗ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ನನ್ನನ್ನು ಗೌರವದಿಂದ ನಡೆಸಿಕೊಂಡಿದ್ದಾರೆ. ಹೇಳಿದ ಕೆಲಸ ಮಾಡಿಕೊಟ್ಟಿದ್ದಾರೆ. ಆದರೂ ಕಾಂಗ್ರೆಸ್ ತೊರೆದು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನಾಯಕತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾಗಿದ್ದೇನೆ. ಕಳೆದ ಚುನಾವಣೆಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಾರೆ ಎಂಬ ಉದ್ದೇಶದಿಂದ ಯಾವ ಕೆಲಸ ಮಾಡಿ ಯಶಸ್ವಿಯಾದೆನೋ ಅದೇ ರೀತಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಭವಿಷ್ಯದಲ್ಲಿ ಬಿ.ವೈ.ವಿಜಯೇಂದ್ರ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶಗಳಿದ್ದು ಅದಕ್ಕಾಗಿ ನನ್ನೆಲ್ಲಾ ಶಕ್ತಿ ಮೀರಿ ಕೆಲಸ ಮಾಡುತ್ತೇನೆ ಎಂದರು.

ಮೋದಿ ಅವರನ್ನು 3ನೇ ಬಾರಿಗೆ ಪ್ರಧಾನಿ ಮಾಡಲು, ಬಾಲರಾಜು, ಹೆಚ್.ಡಿ.ಕುಮಾರಸ್ವಾಮಿ ಹಾಗೂ ಯದುವೀರ್ ಅವರ ಗೆಲುವಿಗೆ ನಮ್ಮ ಭಾಗದಲ್ಲಿ ಹೆಚ್ಚಿನ ಮತ ಕೊಡಿಸಲು ಕೈಲಾದ



ತಿ.ನರಸೀಪುರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಗುರುಪಾದಸ್ವಾಮಿ ಮಾತನಾಡಿದರು.

ಅಳಿಲು ಸೇವೆ ಮಾಡಲಿದ್ದು, ಮೂವರು ಜಯಗಳಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನಿಂದ ಧುರೀಣರಲ್ಲಾ ಕಾಲ್ಕಿತ್ತಿದ್ದಾರೆ: ಕಾಂಗ್ರೆಸ್‌ನಲ್ಲಿ ಮೂಲ ಕಾಂಗ್ರೆಸ್ಸಿಗರನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿದ ಗುರುಪಾದಸ್ವಾಮಿ ಇಂದು ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಮಹದೇವಪ್ಪ, ಕೆ.ವೆಂಕಟೇಶ್, ಎನ್.ಚೆಲುವರಾಯಸ್ವಾಮಿ ಅವರ ನಾಯಕತ್ವದಲ್ಲಿ ಮುನ್ನಡೆದಿದೆ. ಕಾಂಗ್ರೆಸ್ ಕಟ್ಟಿ ಬೆಳೆಸಿದ ಹೆಚ್.ವಿಶ್ವನಾಥ್, ಹಿರಿಯ ಮುತ್ಸದ್ದಿ ರಾಜಕಾರಣಿ ಶ್ರೀನಿವಾಸ ಪ್ರಸಾದ್, ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಸೇರಿದಂತೆ ಅನೇಕ ಧುರೀಣರು ಪಕ್ಷ ಬಿಟ್ಟಿರುವ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರನ್ನು 3ನೇ ಬಾರಿಗೆ ಪ್ರಧಾನಿ ಮಾಡಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ. ದೇಶದ ಭವಿಷ್ಯದ ದೃಷ್ಟಿಯಿಂದ ಇದು ಉತ್ತಮ ಬೆಳವಣಿಗೆ ಎಂದರು.

ಕಳೆದ 40 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ, ಕೆಪಿಸಿಸಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಕ್ಷೇತ್ರದಿಂದ ಹಾಗೂ ಈ ಬಾರಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಟಿಕೆಟ್‌ಗಾಗಿ ವರಿಷ್ಠರ ಬೆಂಬಲ ಕೋರಿದ್ದೆ. ಕಾರಣಾಂತರಗಳಿಂದ ಟಿಕೆಟ್ ಲಕ್ಷ್ಮಣ್‌ಗೆ ಸಿಕ್ಕಿದೆ.

ನನ್ನ ರಾಜಕಾರಣ ಬಿಜೆಪಿಯೊಂದಿಗೆ ಅಂತ್ಯ

ಇದೀಗ ಬಿಜೆಪಿಗೆ ಸೇರ್ಪಡೆಯಾಗಿದ್ದೇನೆ. ಅಧಿಕಾರ ಸಿಗಲಿ, ಸಿಗದಿರಲಿ ಪ್ರಾಮಾಣಿಕವಾಗಿ ಕೆಲಸ ಮಾಡಲಿದ್ದೇನೆ. ನನ್ನ ಸೇವೆ ಪಕ್ಷಕ್ಕೆ ಮುಡಿಪಾಗಿಡಲಿದ್ದು, ಬಿಜೆಪಿ ಪಕ್ಷದೊಂದಿಗೆ ನನ್ನ ರಾಜಕಾರಣ ಮುಕ್ತಾಯಗೊಳಿಸಲು ಬಯಸುತ್ತೇನೆ. ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಪಕ್ಷದ ಅಭ್ಯರ್ಥಿ ಪರ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಳ್ಳುತ್ತೇನೆ. ಮೊದಲ ಹಂತದ ಚುನಾವಣೆ ಮುಗಿದ ನಂತರ ಏ.27 ರಿಂದ ಮೇ 5ರವರೆಗೆ ನಮ್ಮ ತಂಡದೊಂದಿಗೆ 2ನೇ ಹಂತದ ಚುನಾವಣೆ ಪ್ರಚಾರದಲ್ಲಿ ಭಾಗವಹಿಸಿ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತೇನೆ.

-ಗುರುಪಾದಸ್ವಾಮಿ, ಬಿಜೆಪಿ ಮುಖಂಡ.

ಈ ಬೆಳವಣಿಗೆಯಿಂದ ನನಗೆ ಯಾವುದೇ ಬೇಸರ, ಅಸಮಾಧಾನ ಇಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎನ್.ಎಸ್. ರಾಜೇಂದ್ರ, ರಂಗನಾಥ, ಓಬಿಸಿ ಜಿಲ್ಲಾ ಕಾರ್ಯದರ್ಶಿ ಮಹೇಶ್, ಶ್ರೀನಿವಾಸ್, ಮಹೇಶ್, ಪುರಸಭೆ ಸದಸ್ಯ ಕಿರಣ್, ಮಾಜಿ ಸದಸ್ಯ ಎನ್.ಲೋಕೇಶ್, ಮೂಗೂರು ಜಯಣ್ಣ, ಅಂಗಡಿ ನಾಗೇಶ್, ಚೌಹಳ್ಳಿ ಸಿದ್ದರಾಜು, ಸಿ.ಬಿ.ಹುಂಡಿ ಸಿದ್ದು, ಮಹದೇವ್, ರಾಜಶೇಖರ್, ವಕೀಲ ಪರಮೇಶ್, ವಾಟಾಳು ಗುರುಪಾದ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಮಗಧೀರ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೂರ್ಯ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ರತ್ನ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಚಿರತೆ ಬಂತು ಚಿರತೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ (ತ)	4 ಪ್ರದರ್ಶನಗಳು
ಪ್ರಭಾ	
ರತ್ನ (ಕ)	2 ಪ್ರದರ್ಶನಗಳು
ಲವ್ ಯೂ ಶಂಕರ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.40ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.45ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.10ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಜೈ ಗಣೇಶ (ಮ): ಬೆ.10.50ಕ್ಕೆ, ರಾ.10.10ಕ್ಕೆ, **O2** (ಕ): ಮ.1.20ಕ್ಕೆ, ಮೈದಾನ್ (ಹಿಂ): ಮ.3.35ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ.
ಸ್ಕ್ರೀನ್ 3	ಅವತಾರ ಪುರುಷ 2 (ಕ): ಬೆ.10.45ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಮ.1.10ಕ್ಕೆ, ಯುವ (ಕ): ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 4	ದೋ ಔರ್ ದೋ ಪ್ಯಾರ್ (ಹಿಂ): ಬೆ.10.55ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, **O2** (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, **O2** (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,

2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಉಪನ್ಯಾಸಕ ಆತ್ಮಹತ್ಯೆ

ನಂಜನಗೂಡು, ಏ.19– ಖಿನ್ನತೆಗೆ ಒಳಗಾಗಿದ್ದ ಉಪನ್ಯಾಸಕನೋರ್ವ ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಹೊರವಲಯದ ಹೊಸಹಳ್ಳಿ ಗೇಟ್ ಬಳಿ ಶುಕ್ರವಾರ ನಡೆದಿದೆ.



ನಗರದ ವಿಎ ಬಡಾವಣೆ ನಿವಾಸಿ, ಚಾಮರಾಜನಗರ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಮಾದಪ್ಪ (46) ಆತ್ಮಹತ್ಯೆ ಮಾಡಿಕೊಂಡವರು. ಈತನ ಪತ್ನಿಯೂ ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು, ಇವರಿಗೆ 16 ವರ್ಷದ ಮಗಳಿದ್ದಾಳೆ. ಕಳೆದ ಕೆಲ ದಿನಗಳಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಮಾದಪ್ಪ ಅವರಿಗೆ ಚಿಕಿತ್ಸೆ ಕೊಡಿಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಆದರೆ ಶುಕ್ರವಾರ ಪೆಟ್ರೋಲ್ ಬಂಕ್‌ನಲ್ಲಿ ಕ್ಯಾನ್‌ನಲ್ಲಿ ಪೆಟ್ರೋಲ್ ತುಂಬಿಸಿಕೊಂಡು ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪತ್ನಿ ಪೂರ್ಣಿಮಾ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ರೇವಣ್ಣ ನಿಧನ



ಭೇರ್ಯ, ಏ.19– ಇಲ್ಲಿನ ಸುಗ್ಗನಹಳ್ಳಿ ಗ್ರಾಮದ ಭಾರತೀಯ ಜೀವವಿಮಾ ನಿಗಮದ ಪ್ರತಿನಿಧಿ ರೇವಣ್ಣ (50) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

भारत सरकार Government of India
भाभा परमाणु अनुसंधान केंद्र Bhabha Atomic Research Centre
येलवाल, मैसूरु Yelwal, Mysore - 571 130

विज्ञापन सं. – बीएआरसी/एमवाईएस/वीसी/2024
Advertisement No. - BARC/MYS/VC/2024

बाल–चिकित्सक की आवश्यकता
REQUIRED PAEDIATRICIAN

भाभा परमाणु अनुसंधान केंद्र के आरएमपी कॉलोनी कुवेंपुनगर एवं येलवाल के औषधालयों में आगंतुक परामर्शदाता (बाल–चिकित्सक) के रूप में नियुक्ति के लिए आवेदन आमंत्रित किये जाते हैं।

Applications are invited for appointment as VISITING CONSULTANT (Paediatrician) at the dispensaries of BARC functioning at RMP Colonies at Kuvempunagar and Yelwal.

अर्हता/अनुभव Qualification / Experience	एमबीबीएस, एम.डी/डीएनबी (बाल–चिकित्सक) कम से कम 5 साल के अनुभव वालों को वरीयता दी जाएगी। MBBS, M.D / DNB. (Pediatrician) Min. 5 yrs of experience is preferrable
नियुक्ति की अवधि Period of appointment	प्रथमतः एक वर्ष और परस्पर सहमति से इसका विस्तार किया जा सकता है । One year at the first instance and likely to be extended on mutual consent
परामर्श के घंटे Consultation Hours	प्रत्येक महीने में अदल–बदल में आने वाले सप्ताहों में कुवेंपुनगर औषधालय में 2 घंटे के 4 दौरे (माह के प्रथम एवं तृतीय सप्ताह के शनिवार को) और येलवाल औषधालय में 2 घंटे के 4 आगमन (माह के द्वितीय एवं चतुर्थ सप्ताह के शनिवार को) । 4 Visits of 2 hrs., each in a month in alternative weeks at Kuvempunagar (Saturdays of 1st & 3rd week of the month) and Yelwal Dispensaries (Saturdays of 2nd & 4th week of the month)
मानदेय Honorarium	प्रत्येक आगमन के लिए समेकित मानदेय रु.2500/- (रुपये दो हज़ार पाँच सौ मात्र)। डॉक्टर को ड्यूटी स्थल पर आने–जाने के लिए स्वयं से परिवहन की व्यवस्था करनी होगी। Consolidated honorarium of Rs.2500/- per visit. Doctor shall make her/his own arrangement for transport to attend the duty place.

उपरोक्त मापदंडों को पूरा करने वाले उम्मीदवार अपने पूरे बायो–डाटा और हाल ही में खिंचे गए पासपोर्ट साइट फोटो सहित अपनी शैक्षणिक योग्यताओं, अनुभवों आदि के प्रमाण–पत्रों की प्रतियों के साथ कोरे कागज (प्लेन पेपर) पर आवेदन कर सकते हैं। आवेदन ऐसे भेजे की वह प्रशासनिक अधिकारी–III, भाभा परमाणु अनुसंधान केंद्र, डाक बैग सं. 1, डाकघर – येलवाल, मैसूरु – 571 130 को दिनांक **06 मई 2024** से पहले उक्त पते पर पहुँच जाए।

Candidates fulfilling the above criteria may apply on plain paper with their full bio-data and recent passport size photograph along with the copies of certificates of educational qualifications, Experience etc., to the Administrative Officer-III, Bhabha Atomic Research Centre, Post Bag No. 1, Yelwal P.O., Mysore – 571 130 so as to reach not later than **06 May, 2024.**

नोट: भाभा परमाणु अनुसंधान केंद्र, मैसूरु बिना कोई कारण बताये किसी या सभी आवेदनों को अस्वीकार करने का अधिकार सुरक्षित रखता है।

Note: Bhabha Atomic Research Centre, Mysuru reserves the right to reject any or all applications without assigning any reasons therefor.

-sd/-
प्रशासनिक अधिकारी–III/Administrative Officer-III

